# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 569 (484) (ಸಿಆಸು ಇಲಾಖೆಯಿಂದ ವರ್ಗಾವಣೆಯಾಗಿದೆ) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಇಲಾಖೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 20.08.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲ್ಯಾಣ ಕರ್ನಾಟಕ ಭಾಗಕ್ಕೆ 371ಜೆ ರನ್ವಯ ಸಿಗಬೇಕಾಗಿರುವ ಸೌಲಭ್ಯಗಳನ್ನು ನೀಡಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆಯೇ: ಸದರಿ ಸಮಿತಿಯಲ್ಲಿ ಇರುವ ಸದಸ್ಯರು ಹಾಗೂ ಅಧ್ಯಕ್ಷರು ಯಾರು ವಿವರ ನೀಡುವುದು: | ಭಾರತದ ಸಂವಿಧಾನದ ಅನುಚ್ಛೇದ 371(ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಗಾಗಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿತ್ತು.<br><br>ಪ್ರಸ್ತುತ ಹೊಸ ಸಚಿವ ಸಂಪುಟವು ಅಸ್ತಿತ್ವಕ್ಕೆ ಬಂದ ನಂತರ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿರುವುದಿಲ್ಲ. |
| (ಆ) | ಸಚಿವ ಸಂಪುಟ ಉಪ ಸಮಿತಿ 2023 ರಿಂದ ಇದುವರೆವಿಗೂ ಎಷ್ಟು ಸಭೆಗಳನ್ನು ನಡೆಸಿದೆ: ತೆಗೆದುಕೊಂಡ ನಿರ್ಣಯಗಳು ಯಾವುವು: ಇವುಗಳಲ್ಲಿ ಯಾವ ಯಾವ ನಿರ್ಣಯಗಳನ್ನು ಜಾರಿಗೆ ತರಲಾಗಿದೆ: ಯಾವ ಯಾವ ನಿರ್ಣಯಗಳನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ ಇದಕ್ಕೆ ಕಾರಣವೇನು? (ಸಂಪೂರ್ಣ ವಿವರ ನೀಡುವುದು) | 2023 ರಿಂದ 05 ಸಭೆಗಳನ್ನು ನಡೆಸಲಾಗಿದೆ.<br><br>ಭಾರತದ ಸಂವಿಧಾನದ ಅನುಚ್ಛೇದ 371(ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಕುರಿತು ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯ ನಡವಳಿಗಳನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಎಲ್ಲಾ ಇಲಾಖೆಗಳಿಗೆ ಕಳುಹಿಸಲಾಗಿದೆ **(ಅನುಬಂಧ-1 ರಿಂದ 5).** |

**ಸಂಖ್ಯೆ: ಕಕಪ್ರಇ /16/ಕಕವಿ /2026**

**(ಬಿ. ನಾಗೇಂದ್ರ)**
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ
ಇಲಾಖೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ
ಇಲಾಖೆ ಸಚಿವರು

ಅನುಬಂಧ - 01

**ಕರ್ನಾಟಕ ಸರ್ಕಾರ**

ಸಂಖ್ಯೆ: ಪಿಡಿಎಸ್/ಹೆಚ್‌ಕೆಡಿ/223/2022

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:28.03.2023

**ಅನಧಿಕೃತ ಟಿಪ್ಪಣಿ**

ದಿನಾಂಕ 24/03/2023 ರಂದು ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ ನಡೆದ ಭಾರತದ ಸಂವಿಧಾನದ ಅನುಚ್ಛೇದ 371(ಜೆ) ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟದ ಉಪ ಸಮಿತಿ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ ಹಾಗೂ ಕೈಗೊಂಡ ಕ್ರಮದ ಕುರಿತು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ.

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ, ಎ.ಡಿ.ಬಿ.
ವಿಭಾಗ, ಯೋಜನೆ, ಕಾರ್ಯಕ್ರಮ
ಸಮನ್ವಯ ಮತ್ತು ಸಾಂಖ್ಯಿಕ ಇಲಾಖೆ

**ಇವರಿಗೆ:**

1. ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

**ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ:**

4. ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು ವಿಧಾನ ಸೌಧ, ಬೆಂಗಳೂರು.
5. ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕೆಗಳ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಪರಿಸರ, ಜೀವಿಶಾಸ್ತ್ರ ಮತ್ತು ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
7. ಮಾನ್ಯ ಪಶುಸಂಗೋಪನಾ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
9. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.

PDS/HKD/223/2022 [illegible]

ದಿನಾಂಕ: 24.03.2023ರಂದು ಭಾರತದ ಸಂವಿಧಾನದ ಅನುಚ್ಛೇದ 371 (ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟ ಉಪಸಮಿತಿ ಸಭೆಯ ನಡವಳಿಗಳು:

ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರು ಮತ್ತು ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಮೊದಲಿಗೆ ಸಚಿವ ಸಂಪುಟದ ಉಪಸಮಿತಿಯ ಅಧ್ಯಕ್ಷತೆ ವಹಿಸಿದ ಮಾನ್ಯ [illegible] ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಚಿವರನ್ನು ಹಾಗೂ ಸದಸ್ಯರುಗಳಾದ ಇತರೆ ಮಾನ್ಯ ಸಚಿವರುಗಳನ್ನು ಹಾಗೂ ಹಾಜರಿದ್ದ ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳನ್ನು ಹಾಗೂ ಅಧಿಕಾರಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ ಇವರು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.

ನೇರ ನೇಮಕಾತಿ:

ಇದುವರೆಗೆ ಸ್ಥಳೀಯ ವೃಂದದಲ್ಲಿ ಒಟ್ಟು 87,499 ಗುರುತಿಸಲಾದ ಹುದ್ದೆಗಳಲ್ಲಿ 61,235 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು 26,264 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. ಅದರಲ್ಲಿ 12,286 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದ್ದು 13,978 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಬಾಕಿ ಇರುತ್ತದೆ ಎಂಬ ವಿವರಗಳನ್ನು ಮಾನ್ಯ ಸಚಿವ ಸಂಪುಟ ಉಪಸಮಿತಿಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಮಾನ್ಯ ಅಧ್ಯಕ್ಷರು ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಇರುವ ಹುದ್ದೆಗಳ ನೇಮಕಾತಿಯನ್ನು ತ್ವರಿತವಾಗಿ ಪ್ರಾರಂಭಿಸಲು ಸೂಚಿಸಿದರು.

ಇಲಾಖಾವಾರು ಪ್ರಗತಿ ಪರಿಶೀಲನೆಯನ್ನು ಮಾಡಲಾಗಿ ಕೆಲವೊಂದು ಇಲಾಖೆಗಳು ಮಾಹಿತಿಯನ್ನು ಸರಿಯಾಗಿ ನೀಡದಿರುವುದನ್ನು ಗಮನಿಸಿ ಅಂತಹ ಇಲಾಖೆಗಳು 3 ದಿನಗಳೊಳಗಾಗಿ ವಿವರಗಳನ್ನು ಸರಿಯಾಗಿ [illegible] ಮಾಡುವಂತೆ ಹಾಗೂ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸದಿರುವ ಕಾರಣಗಳನ್ನು ಷರಾ ಕಾಲಂನಲ್ಲಿ ನಮೂದಿಸಲು ಸೂಚಿಸಲಾಯಿತು.

ಕೆಲವು ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಪ್ರಸ್ತಾಪಿಸಲಾಗಿರುವುದರಿಂದ ಅವು ಅಂತಿಮವಾಗದೆ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ತೊಡಕಾಗಿರುವುದಾಗಿ ಕೆಲವು ಇಲಾಖೆಗಳ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ವೃಂದ ಮತ್ತು ನೇಮಕಾತಿ ಸಮಿತಿಯ ಅಧ್ಯಕ್ಷರಾಗಿರುವ ಅಪರ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ಈ ವಿಷಯ ತಂದು ಕೂಡಲೇ ಸಂಬಂಧಿಸಿದ ಇಲಾಖೆಗಳ ಸಭೆಯನ್ನು ಕರೆದು ಪರಿಷ್ಕರಿಸಿದ ವೃಂದ ಮತ್ತು ನೇಮಕಾತಿ ನಿಯಮಗಳನ್ನು 15 ದಿನದೊಳಗೆ ಅಂತಿಮಗೊಳಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

ಮುಂಬಡ್ತಿ:

ಮುಂಬಡ್ತಿಗೆ ಸಂಬಂಧಿಸಿದಂತೆ ಸ್ಥಳೀಯ ವೃಂದದಲ್ಲಿ ಒಟ್ಟು 33,043 ಗುರುತಿಸಲಾದ ಹುದ್ದೆಗಳಲ್ಲಿ 23,439 ಹುದ್ದೆಗಳನ್ನು ಇದುವರೆಗೆ ಭರ್ತಿ ಮಾಡಲಾಗಿದ್ದು ಪ್ರಸ್ತುತ 9,604 ಹುದ್ದೆಗಳನ್ನು ಭರ್ತಿ ಮಾಡಲು ಬಾಕಿ ಇರುತ್ತದೆ. ಅದರಲ್ಲಿ 1632 ಅಭ್ಯರ್ಥಿಗಳು ಮುಂಬಡ್ತಿಗೆ ಅರ್ಹರಿರುವುದಿಲ್ಲ ಎಂಬ ವಿವರಗಳನ್ನು ಸಭೆಯ ಗಮನಕ್ಕೆ ತರಲಾಗಿ, ಮುಂಬಡ್ತಿಗೆ ಅನರ್ಹರಾಗಿರುವವರಿಗೆ ಅನುಕೂಲವಾಗಲು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಡಿಲಗೊಳಿಸಬೇಕಾಗಿದ್ದಲ್ಲಿ ಅಂತಹ

PDS/HKD/223/2022 [illegible]

[illegible] ಸೂಚಿಸಲಾಯಿತು.

(ಪ್ರತಿ: ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಗಳು)/ಪ್ರಧಾನ ಕಾರ್ಯದರ್ಶಿ(ಗಳು)/ ಕಾರ್ಯದರ್ಶಿ(ಗಳು))

ವಿಷಯ ಸೂಚಿ 4:

[illegible]

[illegible]

"ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಸಲಾದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ, ಆಯ್ಕೆ ಪಟ್ಟಿಯನ್ನು ತಯಾರಿಸುವುದು ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎರಡನೇ ಆದ್ಯತೆ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ತಯಾರಿಸುವುದು"

ಸದರಿ ಜನರಲ್ ಮೆರಿಟ್ ಪಟ್ಟಿಯನ್ನು [illegible] 371ಜೆ ಅಡಿಯಲ್ಲಿ ಮುಂಬಡ್ತಿ ಮೀಸಲಾತಿ ನೀಡಲು 2013ರಲ್ಲಿ ಹೊರಡಿಸಿದ ಕರ್ನಾಟಕ ಸಾರ್ವಜನಿಕ ಉದ್ಯೋಗ(ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಅಧಿಸೂಚನೆಯ ಕಂಡಿಕೆ(1) ನ್ನು ತಿದ್ದುಪಡಿ ಮಾಡಬೇಕಾಗುತ್ತದೆ. [illegible] ಸೂಚಿಸಲಾಯಿತು.

[illegible] 2014 [illegible] ದಿನಾಂಕ:17.08.2017 [illegible] 371ಜೆ [illegible] 2014 [illegible] ದಿನಾಂಕ:23.06.2014 [illegible] ಆದೇಶ ದಿನಾಂಕ:09.06.2014ರಿಂದ [illegible] ಆದೇಶ ದಿನಾಂಕ:17.08.2017ವರೆಗಿನ ಅವಧಿಯನ್ನು ಸ್ಥಳೀಯ ವೃಂದದ ನೌಕರರ ಸೇವಾ ಅವಧಿಯೆಂದು ಪರಿಗಣಿಸಿ, ಸದರಿ ನೌಕರರಿಗೆ 'ಕಾಲ್ಪನಿಕ ಸೇವಾ ಜೇಷ್ಠತೆ' (Notional Seniority) [illegible] ದಿನಾಂಕ:09.06.2014 [illegible] ಆದೇಶ ಹೊರಡಿಸಲು ತೀರ್ಮಾನಿಸಲಾಯಿತು [illegible] ಸೂಚಿಸಲಾಯಿತು.

## ವಿಷಯಸೂಚಿ-2:

ಪ್ರಸ್ತಾವನೆ :-

371 ಜೆ [illegible]

[illegible] ಪ್ರಕಟಿಸುತ್ತಿದೆಯು, ಸ್ವಚ್ಛ [illegible] ಜ್ಯೇಷ್ಠತೆಯನ್ನು ಪ್ರಕಟಿಸುತ್ತಿದೆ. ಸದರಿ ಜ್ಯೇಷ್ಠ [illegible] ಅಧಿಕಾರಿ/ನೌಕರರ ಹೆಸರಿನ ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು [illegible] ಗುರುತಿಸಲು 371ಜೆ SC, 371J ST, 371ಜೆ ಸಾಮಾನ್ಯ, 371ಜೆ [illegible] ನಮೂದಿಸುವುದು. ಹಾಗೂ ರಾಜ್ಯ ವೃಂದದಲ್ಲಿ ಟಾರ್ಗೆಟ್ ಮೀಸಲಾತಿ ಬದಲು [illegible] ಶೇ.8 ರಷ್ಟು ಮೀಸಲಾತಿಯನ್ನು ನಿಗದಿಪಡಿಸಲು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು [illegible] ಮಂಡಿಸಲು ಸಚಿವ ಸಂಪುಟ ಉಪಸಮಿತಿಯು ಅನುಮೋದಿಸಿತು.

(ಕ್ರಮ: ಸಕಲ [illegible], ಸಿ.ಆ.ಸು.ಇಲಾಖೆ)::

::[illegible] ಸಭೆಯನ್ನು ಮುಕ್ತಾಯಗೊಳಿಸಲಾಯಿತು::

ಸಂಖ್ಯೆ. ಪಿಡಿಎಸ್ 223 ಹೆಚ್‌ಕೆಡಿ 2022

[illegible]

(371ಜೆ)

[illegible]

ಅನುಬಂಧ - 02

**ಕರ್ನಾಟಕ ಸರ್ಕಾರ**

**ಸಂಖ್ಯೆ:**ಪಿಡಿಎಸ್/101/ಹೆಚ್ ಕಡಿ/2023

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:26.09.2023

**ಅನಧಿಕೃತ ಟಿಪ್ಪಣಿ**

**ವಿಷಯ:** ದಿನಾಂಕ:17.08.2023ರಂದು ಭಾರತ ಸಂವಿಧಾನ ಅನುಚ್ಛೇದ 371 (ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ಇವರ ಅಧ್ಯಕ್ಷತೆಯಲ್ಲಿ ವಿಧಾನಸೌಧ, ಕೊಠಡಿ ಸಂಖ್ಯೆ:334ರಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:17.08.2023ರಂದು ಭಾರತ ಸಂವಿಧಾನ ಅನುಚ್ಛೇದ 371 (ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು ಇವರ ಅಧ್ಯಕ್ಷತೆಯಲ್ಲಿ ವಿಧಾನಸೌಧ, ಕೊಠಡಿ ಸಂಖ್ಯೆ:334ರಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಅನಧಿಕೃತ ಟಿಪ್ಪಣಿಯೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ. ಸದರಿ ನಡವಳಿಯ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ತುರ್ತಾಗಿ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

**ನಿರ್ದೇಶಕರು,**
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

**ಗೆ,**

1. ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ.
2. ಹೆಚ್ಚುವರಿ ಪ್ರತಿ.

**ದಿನಾಂಕ: 17.08.2023ರಂದು ಭಾರತದ ಸಂವಿಧಾನದ ಅನುಚ್ಛೇದ 371 (ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟ ಉಪಸಮಿತಿ ಸಭೆಯ ನಡವಳಿಗಳು:**

ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರು ಮತ್ತು ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಮೊದಲಿಗೆ ಸಚಿವ ಸಂಪುಟದ ಉಪಸಮಿತಿಯ ಅಧ್ಯಕ್ಷತೆ ವಹಿಸಿದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಸಚಿವರು ಹಾಗೂ ಸಮಿತಿಯ ಸದಸ್ಯರುಗಳಾದ ಇತರ ಮಾನ್ಯ ಸಚಿವರುಗಳನ್ನು ಹಾಗೂ ಹಾಜರಿದ್ದ ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳನ್ನು ಹಾಗೂ ಅಧಿಕಾರಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ ಇವರು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು ಸಭೆಯ ವಿಷಯ ಸೂಚಿಯನುಸಾರ ಪ್ರಸ್ತಾಪಿಸಲು ಸೂಚಿಸಿದರು.

**ವಿಷಯ ಸೂಚಿ 1:**

**ದಿನಾಂಕ: 24.03.2023ರ ನಡವಳಿಯ ಮೇಲೆ ವಿವಿಧ ಇಲಾಖೆಗಳು ತೆಗೆದುಕೊಂಡ ಅನುಪಾಲನಾ ಕ್ರಮಗಳ ಬಗ್ಗೆ.**

ದಿನಾಂಕ: 24.03.2023 ರಂದು 371j ಸಚಿವ ಸಂಪುಟದ ಉಪ ಸಮಿತಿಯಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಮಾದರಿ ನೀತಿ ಸಂಹಿತೆ ಹಿನ್ನಲೆಯಲ್ಲಿ ಜಾರಿಗೊಳಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಹೊಸದಾಗಿ ರಚಿತವಾಗಿರುವ ಸಚಿವ ಸಂಪುಟ ಅನುಮೋದನೆಗೆ ಈ ಕೆಳಕಂಡ ವಿಷಯಗಳನ್ನು ಮರುಮಂಡಿಸಲಾಯಿತು.

1) ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಮಾತ್ರ ಕಲ್ಯಾಣ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಆಯ್ಕೆಗಳನ್ನು ಕೇಳುವ ದಿ: 06.06.2020ರ ಸುತ್ತೋಲೆಯ ಅಂಶವನ್ನು ಮುಂದುವರೆಸುವುದು. ರಾಜ್ಯದಲ್ಲಿ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದದ ಎರಡೂ ಹುದ್ದೆಗಳಿಗೆ ಒಂದೇ ಅರ್ಜಿ ಕರೆದು, ದಿನಾಂಕ: 16.11.2016ರ ಸುತ್ತೋಲೆಯ ಈ ಕೆಳಗಿನ (4)ನೇ ಅಂಶವನ್ನು ಮುಂದುವರೆಸುವುದು.

**"ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ, ಆಯ್ಕೆ ಪಟ್ಟಿಯನ್ನು ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ**

**ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ತಯಾರಿಸುವುದು"**

**ತೀರ್ಮಾನ:**

**ಸುತ್ತೋಲೆ ಸಂಖ್ಯೆ ಸಿಆಸುಇ 03 ಹೈಕಕೋ 2019, ದಿನಾಂಕ: 15.06.2022ರಲ್ಲಿ ಹೊರಡಿಸಲಾದ ಸೂಚನೆಗಳು ಸೂಕ್ತವಾಗಿದ್ದು, ಪ್ರಸ್ತುತ ಪ್ರಸ್ತಾಪಿಸಲಾದ ತಿದ್ದುಪಡಿಗಳನ್ನು ಹೊರಡಿಸುವ ಅಗತ್ಯವಿರುವುದಿಲ್ಲ. ಆದಕಾರಣ ಸದರಿ ಪ್ರಸ್ತಾವನೆಯನ್ನು ಸಚಿವ ಸಂಪುಟ ಉಪಸಮಿತಿಯು ಒಪ್ಪಿರುವುದಿಲ್ಲ.**

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಿಆಸುಇ)**

2) ಸದರಿ ಜನರಲ್ ಮೆರಿಟ್ ಪಟ್ಟಿಯಲ್ಲಿ ಆಯ್ಕೆ ಆಗಿರುವವರಿಗೆ 371ಜೆ ಅಡಿಯಲ್ಲಿ ಮುಂದಿನ ದಿನಗಳಲ್ಲಿ ಮುಂಬಡ್ತಿ ಮೀಸಲಾತಿ ನೀಡಲು 2013ರಲ್ಲಿ ಹೊರಡಿಸಿದ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ರ ಅಧಿಸೂಚನೆಯ ಕಂಡಿಕೆ 5(1) ನ್ನು ತಿದ್ದುಪಡಿ ಮಾಡಬೇಕಾಗುತ್ತದೆ ಎಂದು ಸಿ.ಆ.ಸು. ಇಲಾಖೆಯ ಅಪರ ಕಾರ್ಯದರ್ಶಿಯವರು ಅಭಿಪ್ರಾಯಿಸಿದರು.

**ತೀರ್ಮಾನ:**

**ಈ ಪ್ರಸ್ತಾವನೆಯನ್ನು ಜಾರಿಗೊಳಿಸುವ ಅಗತ್ಯವಿರುವುದಿಲ್ಲ ಎಂದು ಸಮಿತಿ ನಿರ್ಣಯಿಸಿತು.**

3) ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿದ್ದ ಅರ್ಜಿ ಸಂಖ್ಯೆ. 4348-4372/2014ಗೆ ಸಂಬಂಧಿಸಿದ ಇತರೆ ಅರ್ಜಿಗಳಾದ 5516-5526/2015 ಮತ್ತು 5558-5568/2015ರ ಪ್ರಕರಣಗಳಲ್ಲಿ **ಮಾನ್ಯ ಕೆ.ಎ.ಟಿ ನೀಡಿರುವ ಆದೇಶದನ್ವಯ ದಿನಾಂಕ: 9.6.2014ರಿಂದ 2017ರ ಅಂತಿಮ ಆದೇಶ ದಿನಾಂಕ: 17.08.2017ರವರೆಗಿನ ಅವಧಿಯನ್ನು ಪರಿಗಣಿಸಿ,** 'ಕಾಲ್ಪನಿಕ ಸೇವಾ ಜೇಷ್ಠತೆ'(Notional Seniority) ನೀಡಿ, ಸಾಮಾನ್ಯ ವರ್ಗದಡಿ ಮುಂಬಡ್ತಿ ಪಡೆದಿರುವ ಕರ್ನಾಟಕ ಸರ್ಕಾರದ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಎಲ್ಲಾ ಅಧಿಕಾರಿ ಹಾಗೂ ನೌಕರರ ಮುಂಬಡ್ತಿಯನ್ನು ಮರು ಹೊಂದಾಣಿಕೆ ಮಾಡಿ ದಿನಾಂಕ: 9.6.2014ರಿಂದ ಜಾರಿಗೆ ಬರುವಂತೆ ಸೇವಾ ಜೇಷ್ಠತೆ ನೀಡುವಂತೆ ಕೋರಿರುವ ಮನವಿಗಳ ಬಗ್ಗೆ ಚರ್ಚಿಸಲಾಯಿತು.

2014ರಿಂದ ಕಾಲ್ಪನಿಕ ಸೇವಾ ಜೇಷ್ಠತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ **ರಿಟ್ ಅರ್ಜಿ ಸಂ: 13868/2020 ದಾಖಲಾಗಿದ್ದು**, ದಿನಾಂಕ: 01.08.2023ರಂದು ಆದೇಶ ಹೊರಡಿಸಲಾಗಿರುತ್ತದೆ. **ಆದರೆ ಸದರಿ ಆದೇಶ ಪ್ರತಿಯನ್ನು ಇನ್ನೂ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವುದಿಲ್ಲ** ಎಂಬ ಮಾಹಿತಿಯನ್ನು ಸಿ.ಆ.ಸು. ಇಲಾಖೆಯ ಅಪರ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

<u>ತೀರ್ಮಾನ:</u>

**ಮಾನ್ಯ ಸಚಿವ ಸಂಪುಟ ಉಪಸಮಿತಿಯು ಸದರಿ ಆದೇಶ ಸ್ವೀಕೃತವಾದ ನಂತರ ಅದರಂತೆ ಪರಿಶೀಲಿಸಿ ಆದೇಶ ಹೊರಡಿಸಲು ಸಿ.ಆ.ಸು. ಇಲಾಖೆಗೆ ಸೂಚಿಸಿತು.**

**(ಕ್ರಮ: ಸರ್ಕಾರದ ಕಾರ್ಯದರ್ಶಿ,ಸಿಆಸುಇ)**

**5) ಮುಂಬಡ್ತಿ : -**

371 ಜೆ ಭಾಗದ ರಾಜ್ಯ ವೃಂದದಲ್ಲಿ ಶೇ.8 ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಿಡುತ್ತಿದ್ದು, ಜೇಷ್ಠತೆ ಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುತ್ತಿದೆ. ಇದರಿಂದಾಗಿ ರಾಜ್ಯ ವೃಂದದ ಮೀಸಲಾತಿ ಅಡಿಯಲ್ಲಿ ಬಡ್ತಿ ಪಡೆದವರ ಹುದ್ದೆಗಳು ಮುಂಬಡ್ತಿ, ನಿವೃತ್ತಿ, ಸ್ವಯಂ ನಿವೃತ್ತಿ ಅಥವಾ ಮರಣ ಮುಂತಾದ ಕಾರಣಗಳಿಂದ ಹುದ್ದೆ ಖಾಲಿಯಾಗದಿದ್ದಲ್ಲಿ ನಂತರದ ಜೇಷ್ಠತೆಯಲ್ಲಿರುವವರಿಗೆ ಬಡ್ತಿಯ ಅವಕಾಶ ದೊರೆಯುವುದಿಲ್ಲ. ಇವರಿಗಿಂತ ಕಿರಿಯರಾದವರಿಗೆ ರಾಜ್ಯ ವಲಯದಲ್ಲಿ ಬಡ್ತಿ ದೊರೆತರು ಕಲ್ಯಾಣ ಕರ್ನಾಟಕ ಭಾಗದವರಿಗೆ ಬಡ್ತಿ ದೊರೆಯಲು ಅವಕಾಶವೇ ಇರುವುದಿಲ್ಲ.

ಆದ್ದರಿಂದ, ರಾಜ್ಯ ವೃಂದದಲ್ಲಿ ಜೇಷ್ಠತೆಯನ್ನು ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಠತೆಯನ್ನು ಪ್ರಕಟಿಸುವುದು. ಸದರಿ ಜೇಷ್ಠತೆಯಲ್ಲಿ ಅಧಿಕಾರಿ/ನೌಕರರ ಹೆಸರಿನ ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ನಮೂದಿಸುವ ರೀತಿಯಲ್ಲೇ 371ಜೆ SC, 371J ST, 371ಜೆ ಸಾಮಾನ್ಯ, 371ಜೆ ಮಹಿಳೆ ಎಂದು ನಮೂದಿಸುವುದು. ಹಾಗೂ ರಾಜ್ಯ ವೃಂದದಲ್ಲಿ ಟಾರ್ಗೆಟ್ ಮೀಸಲಾತಿ ಬದಲು ರಿಕ್ತ ಸ್ಥಾನ ಆಧಾರಿತ ಶೇ.8 ರಷ್ಟು ಮೀಸಲಾತಿಯನ್ನು ನಿಗದಿಪಡಿಸಲು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು 7 ದಿನದೊಳಗೆ ಮಂಡಿಸಲು ಸಚಿವ ಸಂಪುಟ ಉಪಸಮಿತಿಯು ಅನುಮೋದಿಸಿತು.

ತೀರ್ಮಾನ:

**ಈ ವಿಷಯದ ಬಗ್ಗೆ ಸಿಆಸು ಇಲಾಖೆಯು ಕಾನೂನು ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗಳ ಅಭಿಪ್ರಾಯ ಪಡೆದು ಪರಿಶೀಲಿಸಿ ಆದೇಶ ಹೊರಡಿಸಲು ಸಚಿವ ಸಂಪುಟ ಉಪಸಮಿತಿಯು ಅನುಮೋದಿಸಿತು.**

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಿಆಸುಇ)**

ವಿಷಯ ಸೂಚಿ 2:

ಇದುವರೆಗೆ ನೇರ ನೇಮಕಾತಿಯ ಸ್ಥಳೀಯ ವೃಂದದಲ್ಲಿ ಒಟ್ಟು 94,657 ಗುರುತಿಸಲಾದ ಹುದ್ದೆಗಳಲ್ಲಿ 68,079 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು 26,578 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. ಅದರಲ್ಲಿ 2634 ಹುದ್ದೆಗಳು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿ ಬಾಕಿಯಿದ್ದು, 7968 ಹುದ್ದೆಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಇತರೆ ನೇಮಕಾತಿ ಪ್ರಾಧಿಕಾರಗಳಲ್ಲಿ ನೇಮಕಾತಿ ಪ್ರಕ್ರಿಯೆಗೆ ಬಾಕಿ ಇರುತ್ತದೆ ಎಂಬ ವಿವರಗಳನ್ನು ಯೋಜನಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಮಾನ್ಯ ಸಚಿವ ಸಂಪುಟ ಉಪಸಮಿತಿಯ ಗಮನಕ್ಕೆ ತಂದರು. ತದನಂತರ ಮಾನ್ಯ ಅಧ್ಯಕ್ಷರ ಸೂಚನೆ ಮೇರೆಗೆ ಸಭೆಯ ಕಾರ್ಯಸೂಚಿವಾರು ವಿಷಯವನ್ನು ತೆಗೆದುಕೊಂಡು ಇಲಾಖಾವಾರು ಪ್ರಗತಿ ಪರಿಶೀಲನೆಯನ್ನು ಪ್ರಾರಂಭಿಸಲಾಯಿತು.

**1) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ಕಾರ್ಯದರ್ಶಿಯವರು ಮುಖ್ಯವಾಗಿ ಶಾಲಾ ಶಿಕ್ಷಕರ 5000 ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ನೇಮಕಾತಿ ಮಾಡಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದ್ದು ಸ್ಪರ್ಧಾತ್ಮಕ ಪರೀಕ್ಷೆಯನ್ನು ಕೂಡ ಮಾಡಲಾಗಿರುತ್ತದೆ. ಆದರೆ, ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ನೇಮಕಾತಿ ಆದೇಶ ಹೊರಡಿಸಲು ವಿಳಂಬವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಅಡ್ವೋಕೆಟ್ ಜನರಲ್ ರವರೊಂದಿಗೆ ಚರ್ಚಿಸಿ ತಡೆಯಾಜ್ಞೆ ತೆರವುಗೊಳಿಸಲು ತ್ವರಿತ ಕ್ರಮ ವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು. ನೇರ ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮತಿಯನ್ನು ನಿರೀಕ್ಷಿಸದೇ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳುವುದು ಒಂದು ವೇಳೆ ಏನಾದರೂ ಸಮಸ್ಯೆ ಇದ್ದಲ್ಲಿ ಸಚಿವ ಸಂಪುಟ ಉಪಸಮಿತಿಯ ಸಭೆಯ ಗಮನಕ್ಕೆ ತರುವುದು ಎಂದು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ)



File No. PDS-HKD/101/2023-DADB-PLANNING DEPARTMENT (Computer No. 1111490)

### 2) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಭೆಯಲ್ಲಿ ಹಾಜರಿದ್ದ ಮುಖ್ಯ ಆಡಳಿತಾಧಿಕಾರಿಗಳು ಗೂಗಲ್ ಶೀಟ್‌ನಲ್ಲಿ ದಾಖಲಿಸಿರುವ ಇಲಾಖೆಯ ಅಂಕಿ ಅಂಶದಲ್ಲಿ ವ್ಯತ್ಯಾಸ ಇರುವದಾಗಿ ತಿಳಿಸುತ್ತಾ ಇಲಾಖೆಯಲ್ಲಿ 175 ಹುದ್ದೆಗಳು ಮಾತ್ರ ಭರ್ತಿ ಮಾಡಲು ಬಾಕಿ ಇರುತ್ತದೆ ಅದರಲ್ಲಿ 13 ಗ್ರೂಪ್ ಬಿ ಹುದ್ದೆಗಳು ಹಾಗೂ 162 ಗ್ರೂಪ್ ಸಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಬೇಕಿರುತ್ತದೆ ಎಂದು ತಿಳಿಸಿದರು.

ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಮಾನ್ಯ ಅಧ್ಯಕ್ಷರು ಯೋಜನಾ ಇಲಾಖೆ ನೀಡಿರುವ ಗೂಗಲ್ ಶೀಟ್ ನಲ್ಲಿ ದಾಖಲಿಸಿರುವ ಅಂಕಿ ಅಂಶಗಳಿಗೂ, ಈಗ ನೀಡುತ್ತಿರುವ ಅಂಕಿ ಅಂಶಗಳಿಗೂ ತಾಳೆಯಾಗದಿರುವ ಬಗ್ಗೆ ಗಂಭೀರವಾಗಿ ಪರಿಗಣಿಸಿ ಎರಡು ದಿನಗಳೊಳಗಾಗಿ ಅಂಕಿ ಅಂಶಗಳನ್ನು ಪರಿಶೀಲಿಸಿಕೊಂಡು ನಿಖರ ಮಾಹಿತಿಯನ್ನು ಗೂಗಲ್ ಶೀಟ್‌ನಲ್ಲಿ ದಾಖಲಿಸಲು ಸೂಚಿಸಿದರು.

(ಕ್ರಮ:ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಇಲಾಖೆ)

### 3) ಸಾರಿಗೆ ಇಲಾಖೆ

ಇಲಾಖೆಯ ಕಾರ್ಯದರ್ಶಿಯವರು KKRTC ಯಲ್ಲಿ ಹೆಚ್ಚಿನ ಹುದ್ದೆಗಳು ಅಂದರೆ 2031 ಹುದ್ದೆಗಳು ಬಾಕಿ ಇದ್ದು ಅದರಲ್ಲಿ 1295 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು. ಉಳಿದಂತೆ 736 ಹುದ್ದೆಗಳು ಚಾಲಕರು ಹಾಗೂ ಕಂಡಕ್ಟರ್ ಹುದ್ದೆಗಳು ನೇಮಕಾತಿಗೆ ಬಾಕಿ ಇದ್ದು ಅತೀ ಶೀಘ್ರದಲ್ಲಿ ಭರ್ತಿ ಮಾಡುವುದಾಗಿ ತಿಳಿಸಿದರು. ವಿವರಗಳನ್ನು ಗೂಗಲ್ ಶೀಟ್ ನಲ್ಲಿ ಸರಿಯಾಗಿ ದಾಖಲಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಮಾನ್ಯ ಅಧ್ಯಕ್ಷರು ಎರಡು ದಿನಗಳೊಳಗಾಗಿ ಸರಿಪಡಿಸಲು ಸೂಚಿಸಿದರು.

(ಕ್ರಮ:ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ)

### 4) ಉನ್ನತ ಶಿಕ್ಷಣ ಇಲಾಖೆ

ಇಲಾಖೆಯಲ್ಲಿ ಇನ್ನೂ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸದ 1363 ಹುದ್ದೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಮಾನ್ಯ ಅಧ್ಯಕ್ಷರು ಶೀಘ್ರದಲ್ಲಿಯೇ ಖಾಲಿ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ನೇಮಕಾತಿ ಪ್ರಕ್ರಿಯೆಗೆ ಯಾವುದೇ ಅಡಚಣೆ ಎದುರಾದಲ್ಲಿ ಉಪಸಮಿತಿಯ ಗಮನಕ್ಕೆ ತರಲು ತಿಳಿಸಿದರು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)

**5) ಇಂಧನ ಇಲಾಖೆ**

ಇಲಾಖೆಯ ಪರವಾಗಿ ಅಪರ ಕಾರ್ಯದರ್ಶಿಯವರು ಇಲಾಖೆಯಲ್ಲಿ KPCLಗೆ ಸಂಬಂಧಿಸಿದ 927 ಹುದ್ದೆಗಳಿಗೆ 2 ವಿದ್ಯುತ್ ಸ್ಥಾವರಗಳು ಪ್ರಾರಂಭವಾಗದಿರುವ ಕಾರಣದಿದ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿರುವುದಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಶೀಘ್ರದಲ್ಲಿಯೇ ಇಲಾಖೆಯಿಂದ ನಿರ್ಣಯ ತೆಗೆದುಕೊಳ್ಳುತ್ತಿದ್ದು ಅದರಂತೆ ಕ್ರಮವಹಿಸುವುದಾಗಿ ತಿಳಿಸಿದರು. ಮಾನ್ಯ ಅಧ್ಯಕ್ಷರು ಮತ್ತು ಸದಸ್ಯರು ಗೆಸ್ಕಾಂನಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಕೋರಿದರು. 8 ಹುದ್ದೆಗಳು ಮಾತ್ರ ಭರ್ತಿ ಮಾಡಲು ಬಾಕಿ ಇರುತ್ತದೆ ಎಂದು ಅಧಿಕಾರಿಗಳು ಮಾಹಿತಿ ಒದಗಿಸಿದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಮಾನ್ಯ ಸದಸ್ಯರು ಗೆಸ್ಕಾಂ ನಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇರುವುದು ಕಂಡು ಬಂದಿರುತ್ತದೆ, ಅದರಂತೆ ಪುನರ್ ಪರಿಶೀಲಿಸಿ ಗೆಸ್ಕಾಂ ಮತ್ತು ಬೆಸ್ಕಾಂ ನಿಗಮಗಳಲ್ಲಿನ ಗುರುತಿಸಿದ, ಭರ್ತಿ ಮಾಡಿದ ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು ಪ್ರತ್ಯೇಕವಾಗಿ ನೀಡಲು ಸೂಚಿಸಿದರು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ)**

**ಎಲ್ಲಾ ಇಲಾಖೆಗಳು ಯೋಜನಾ ಇಲಾಖೆ ನೀಡಿರುವ ಗೂಗಲ್ ಶೀಟ್ ನಲ್ಲಿ ದಾಖಲಿಸಿರುವ ಅಂಕಿ ಅಂಶಗಳನ್ನು ಪರಿಶೀಲಿಸಿಕೊಂಡು 'ಗ್ರೂಪ್-ಡಿ' ಹುದ್ದೆಗಳ ವಿವರಗಳನ್ನು ಸೇರಿಸಿ ಅಗತ್ಯ ಮಾಹಿತಿಯನ್ನು ಐದು ದಿನಗಳೊಳಗಾಗಿ update ಮಾಡಲು ಉಪಸಮಿತಿಯು ಸೂಚಿಸಿತು.**

**(ಕ್ರಮ: ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳು)**

**ವಿಷಯ ಸೂಚಿ 3:**

**ಕರ್ನಾಟಕ ಲೋಕಸೇವಾ ಆಯೋಗದಲ್ಲಿ** ನೇರ ನೇಮಕಾತಿಗೆ ಬಾಕಿ ಇರುವ ಹುದ್ದೆಗಳ ಕುರಿತು **ಪ್ರತ್ಯೇಕ ಸಭೆ ನಿಗದಿಪಡಿಸಲು** ಉಪಸಮಿತಿಯು ನಿರ್ಣಯಿಸಿತು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ)**

**ವಿಷಯ ಸೂಚಿ 4:**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಇತರೆ ನೇಮಕಾತಿ ಪ್ರಾಧಿಕಾರಗಳಲ್ಲಿ** ನೇರ ನೇಮಕಾತಿಗೆ ಬಾಕಿ ಇರುವ ಹುದ್ದೆಗಳ ಕುರಿತು **ಪ್ರತ್ಯೇಕ ಸಭೆ ನಿಗದಿಪಡಿಸಲು** ಉಪಸಮಿತಿಯು ನಿರ್ಣಯಿಸಿತು.

**(ಕ್ರಮ:ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ)**

**ವಿಷಯ ಸೂಚಿ 5:**

ರಾಜ್ಯದ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಹಾಗೂ ವೈದ್ಯಕೀಯ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಇಲಾಖೆಗಳಡಿ ಬರುವ ಸಂಸ್ಥೆ/ವಿಶ್ವವಿದ್ಯಾಲಯಗಳಲ್ಲಿ 371ಜೆ ಅನುಸಾರ ಪ್ರವೇಶಾತಿಯಲ್ಲಿ ಮೀಸಲಾತಿ ನೀಡಿ ಹಂಚಿಕೆ ಮಾಡಿರುವ ಸೀಟುಗಳ ವಿವರಗಳನ್ನು ಪಡೆದುಕೊಂಡು ಈ ಬಗ್ಗೆ ಸದ್ಯದಲ್ಲಿಯೇ ಪ್ರತ್ಯೇಕವಾಗಿ ಸಭೆ ನಿಗದಿಪಡಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ)**

**ಇತರೆ ವಿಷಯಗಳು:**

1) **ವಿಜಯನಗರ ಜಿಲ್ಲೆಯನ್ನು ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿಸಲು ಕಾಯಿದೆಗೆ ಸೇರ್ಪಡೆ ಆದೇಶ ಹೊರಡಿಸಲು ಉಪಸಮಿತಿಯು ನಿರ್ಣಯಿಸಿತು.**

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಿಆಸುಇ)**

2) ಮುಂದಿನ ಸಭೆಗಳಲ್ಲಿ ವಿಧಾನಸಭೆ/ವಿಧಾನ ಪರಿಷತ್ ಸಚಿವಾಲಯದಲ್ಲಿ ಅನುಚ್ಛೇದ 371 ಜೆ ಮೀಸಲಾತಿ ಅಳವಡಿಸಿಕೊಂಡಿರುವ ವಿವರಗಳನ್ನು ಪ್ರಗತಿ ಪರಿಶೀಲನೆ ಮಾಡಲು ಉಪಸಮಿತಿಯು ನಿರ್ಣಯಿಸಿತು. ಈ ಸಂಬಂಧ ನಿಗಧಿತ ನಮೂನೆಯಲ್ಲಿ ವಿವರಗಳನ್ನು ವಿಧಾನಸಭೆ ಸಚಿವಾಲಯದಿಂದ ಪಡೆಯಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ:ಕಾರ್ಯದರ್ಶಿ, ವಿಧಾನಸಭೆ/ವಿಧಾನ ಪರಿಷತ್ ಸಚಿವಾಲಯ)**

3) 371ಜೆ ರಡಿಯಲ್ಲಿ ವಿವಿಧ ಇಲಾಖೆಗಳಲ್ಲಿ ಅರ್ಹತೆ ಇದ್ದರೂ ಪದೋನ್ನತಿ ಮತ್ತು ಇತರೇ ಸೌಲಭ್ಯಗಳು ದೊರಕದೆ ಇರುವ ಬಗ್ಗೆ, ಸ್ವೀಕೃತ ಮನವಿಗಳನ್ನು ಸದರಿ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸುವುದು ಹಾಗೂ ಮುಂದಿನ ಸಭೆಗೆ ಸಂಬಂಧಪಟ್ಟ ಇಲಾಖೆಗಳಿಂದ ವಿವರಣೆ ಪಡೆದು ಮಂಡಿಸುವುದು ಎಂದು ಸಭಾಧ್ಯಕ್ಷರು ಸೂಚಿಸಿದರು ಹಾಗೂ ಸ್ವೀಕೃತ ಮನವಿಗಳನ್ನು ಯೋಜನಾ ಇಲಾಖೆಯ ಅಧಿಕಾರಿಗಳಿಗೆ ನೀಡಿದರು. ವಿವರ ಈ ಕೆಳಕಂಡಂತಿದೆ.

**ಸಮಿತಿಗೆ ಸ್ವೀಕೃತ ಮನವಿಗಳು:-**

1. ಪೊಲೀಸ್ ಇಲಾಖೆಯ KSISF ಸಿಬ್ಬಂದಿಗಳು 2016ರಲ್ಲಿ ಸಾಮಾನ್ಯ ವೃಂದದಲ್ಲಿ ನೇಮಕ ಹೊಂದಿದ್ದು, ಸೇವಾ ಜೇಷ್ಠತೆ ಇದ್ದರೂ PC ಹುದ್ದೆಯಿಂದ ಪದೋನ್ನತಿ ಆಗಿರುವುದಿಲ್ಲವೆಂದು ಆದರೆ, ನಮಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯರಿದ್ದರೂ (Non-HK) PC ಹುದ್ದೆಯಿಂದ HC ಹುದ್ದೆಗೆ ಪದೋನ್ನತಿ ಹೊಂದಿರುತ್ತಾರೆ. ಇದಕ್ಕೆ ಕಾರಣರಾದ ಕಮಾಂಡೆಂಟ್ KSISF ನ ಆಡಳಿತ ಸಿಬ್ಬಂದಿ ವರ್ಗದವರು ಕಲ್ಯಾಣ

ಕರ್ನಾಟಕ ಭಾಗದವರಿಗೆ ಅನ್ಯಾಯವಾಗಲು ಕಾರಣರಾಗಿರುತ್ತಾರೆ. ಈ ಬಗ್ಗೆ KAT ಕಲಬುರಗಿ ಪೀಠಾ ರವರು ದಿನಾಂಕ: 30.05.2023ರಂದು 24 ಜನರಿಗೆ PC ಹುದ್ದೆಯಿಂದ HC ಹುದ್ದೆಗೆ ಪದೋನ್ನತಿ ನೀಡಲು ಆದೇಶ ನೀಡಿದೆ ಅದರಂತೆ ಮುಂಬಡ್ತಿ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ಮನವಿಯ ಬಗ್ಗೆ ಮುಂದಿನ ಸಭೆಗೆ ಪೂರ್ಣ ವಿವರ ಪಡೆಯಲು ಹಾಗೂ ಸಂಬಂಧಿಸಿದ ಅಧಿಕಾರಿಗಳು ಖುದ್ದು ಹಾಜರಾಗಲು ಮಾನ್ಯ ಅಧ್ಯಕ್ಷರು, ಸೂಚಿಸಿದರು.

**(ಕ್ರಮ: ADGP, ಆಂತರಿಕ ಭದ್ರತಾ ವಿಭಾಗ)**

2. **ಹೈದ್ರಾಬಾದ್ ಕರ್ನಾಟಕ ಪ್ರದೇಶದ 371ಜೆ ನೇಮಕಾತಿಯಲ್ಲಿ ಮೀಸಲಾತಿಯಿಂದ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಮುಂಬಡ್ತಿಯಲ್ಲಿ ಆಗುತ್ತಿರುವ ಅಸಮತೋಲನವನ್ನು ನಿವಾರಿಸುವ ಬಗ್ಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯಲ್ಲಿ** ರಾಜ್ಯ ವೃಂದದಲ್ಲಿ ಜೇಷ್ಟತೆಯನ್ನು ಕಲ್ಯಾಣ ಕರ್ನಾಟದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಟತೆಯಲ್ಲಿ ಪ್ರಕಟಿಸುವುದು. ಸದರಿ ಜೇಷ್ಟತೆಯಲ್ಲಿ ಅಧಿಕಾರಿ/ನೌಕರರ ಹೆಸರಿನ ಮುಂದೆ 371ಜೆ ಎಸ್ಸಿ, 371ಜೆ ಎಸ್ಟಿ, 371ಜೆ ಸಾಮಾನ್ಯ, 371ಜೆ ಮಹಿಳೆ ಎಂದು ನಮೂದಿಸುವುದು ಹಾಗೂ ರಿಕ್ತಸ್ಥಾನ ಆಧಾರಿತ ಮೀಸಲಾತಿ ನೀಡಲು ಕೋರಿರುತ್ತಾರೆ. ಸದರಿ ವಿಷಯದ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ಸಿಆಸುಇಲಾಖೆ ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಕಾರ್ಯದರ್ಶಿಗಳು, ಸಿಆಸುಇಲಾಖೆ)**

3. ಅಬಕಾರಿ ಇಲಾಖೆಯಲ್ಲಿ ರಾಜ್ಯ ವ್ಯಾಪ್ತಿಗೆ ಸಂಬಂಧಿಸಿದಂತೆ ಶೇಕಡ 8ರಷ್ಟು ಮೀಸಲಾತಿಯನ್ನು BBMP ವ್ಯಾಪ್ತಿಯಲ್ಲಿ ನೀಡಿರುವುದಿಲ್ಲವೆಂದು ಈ ಬಗ್ಗೆ KAT ಅರ್ಜಿ ಸಂಖ್ಯೆ OA/3427-30ರಲ್ಲಿ ನೀಡಿರುವ ತೀರ್ಪನ್ನು ಜಾರಿ ಮಾಡುತ್ತಿಲ್ಲವೆಂದು ಮನವಿ ಸಲ್ಲಿಸಿದ್ದು, ಸದರಿ ಮನವಿಯ ಬಗ್ಗೆ ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ವಿವರಣೆ ಪಡೆದು ಮಂಡಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಆಯುಕ್ತರು, ಅಬಕಾರಿ ಇಲಾಖೆ)**

4. PSI ಹುದ್ದೆಯಿಂದ PI ಹುದ್ದೆಗೆ ಮುಂಬಡ್ತಿ ನೀಡುವಾಗ ಹೈದ್ರಾಬಾದ್ ಕರ್ನಾಟಕ ಭಾಗದ PSI ಗಳಿಗೆ ಅನ್ಯಾಯವಾಗುತ್ತಿದ್ದು, ಸದರಿ ಅನ್ಯಾಯವನ್ನು ತಪ್ಪಿಸಲು DGP ಆಂತರಿಕ ಭದ್ರತೆ ರವರಿಗೆ ನಿರ್ದೇಶನ ನೀಡಬೇಕೆಂದು ಹೈದ್ರಾಬಾದ್ ಕರ್ನಾಟಕ ಭಾಗದ ಅಧಿಕಾರಿಗಳು ಕೋರಿರುತ್ತಾರೆ. ಈ ಗ್ಗೆ ಮುಂದಿನ ಸಭೆಗೆ ಪೂರ್ಣ ವಿವರಗಳನ್ನು

ಪಡೆದು ಮಂಡಿಸುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳು ಹಾಜರಾಗುವಂತೆ ಸೂಚನೆ ನೀಡುವುದು ಎಂದು ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: DGP ಆಂತರಿಕ ಭದ್ರತಾ ವಿಭಾಗ)**

5. ಕರ್ನಾಟಕ ರಾಜ್ಯ ಪೊಲೀಸ್ ವೈಲೇಸ್ ಘಟಕದ ಕಲ್ಯಾಣ ಕರ್ನಾಟಕ ವೃಂದದವರಿಗೆ ಮುಂಬಡ್ತಿಯಲ್ಲಿ ಅನ್ಯಾಯವಾಗಿರುವ ಬಗ್ಗೆ ಶ್ರೀ ದೇವೀಂದ್ರ ಬ ರಬಗೊಂಡ ಹೆಚ್.ಸಿ ರವರು ಮನವಿ ಸಲ್ಲಿಸಿದ್ದು, ಸದರಿ ಮನವಿಯ ಬಗ್ಗೆ ಪೂರ್ಣ ವಿವರ ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಹಾಜರಾಗುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಪೊಲೀಸ್ ವೈಲೇಸ್ ವಿಭಾಗದ ಅಧಿಕಾರಿಗಳು)**

**::ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು::**

(ಪ್ರಿಯಾಂಕ್ ಖರ್ಗೆ)
ಅಧ್ಯಕ್ಷರು,
ಸಚಿವ ಸಂಪುಟದ ಉಪಸಮಿತಿ (371ಜೆ)
ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಹಾಗೂ
ಐ.ಟಿ.ಬಿ.ಟಿ ಸಚಿವರು.



File No. PDS-HKD/101/2023-DADB-PLANNING DEPARTMENT (Computer No. 1111490)

ಅನುಬಂಧ-03

**<u>ದಿನಾಂಕ: 04.01.2024ರಂದು ಭಾರತದ ಸಂವಿಧಾನದ ಅನುಚ್ಛೇದ 371 (ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟ ಉಪಸಮಿತಿ ಸಭೆಯ ನಡವಳಿಗಳು:</u>**

ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರು ಮತ್ತು ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ

ಮೊದಲಿಗೆ ಸಚಿವ ಸಂಪುಟದ ಉಪಸಮಿತಿಯ ಅಧ್ಯಕ್ಷತೆ ವಹಿಸಿದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಸಚಿವರನ್ನು ಹಾಗೂ ಸಮಿತಿಯ ಸದಸ್ಯರುಗಳಾದ ಇತರ ಮಾನ್ಯ ಸಚಿವರುಗಳನ್ನು ಹಾಗೂ ಹಾಜರಿದ್ದ ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳನ್ನು ಹಾಗೂ ಅಧಿಕಾರಿಗಳನ್ನು ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ(ಎಡಿಬಿ), ಯೋಜನಾ ಇಲಾಖೆ ಇವರು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು ಒಂದುವಾರ ಮುಂಚಿತವಾಗಿ ಸಭಾ ಸೂಚನಾ ಪತ್ರವನ್ನು ಎಲ್ಲಾ ಇಲಾಖೆಗಳಿಗೆ ಕಳುಹಿಸಿದ್ದರು ಅನುಮತಿ ಇಲ್ಲದೇ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳಿಗೆ ಹಾಗೂ ಅನುಪಾಲನಾ ವರದಿ ಸಲ್ಲಿಸದೇ ಇರುವವರಿಗೆ ಕಾರಣ ಕೇಳಿ ನೋಟಿಸ್ ನೀಡಲು ಸೂಚಿಸಿದರು ಹಾಗೂ ಪರಿಶೀಲಿಸಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಯಿತು.

1. ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಮಾತ್ರ ಕಲ್ಯಾಣ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಆಯ್ಕೆಗಳನ್ನು ಕೇಳುವ ದಿನಾಂಕ: 06.06.2020ರ ಸುತ್ತೋಲೆಯ ಅಂಶವನ್ನು ಮುಂದುವರೆಸುವುದು. ರಾಜ್ಯದಲ್ಲಿ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದದ ಎರಡೂ ಹುದ್ದೆಗಳಿಗೆ ಒಂದೇ ಅರ್ಜಿ ಕರೆದು, ದಿನಾಂಕ: 16.11.2016ರ ಸುತ್ತೋಲೆಯ ಈ ಕೆಳಗಿನ (4)ನೇ ಅಂಶವನ್ನು ಮುಂದುವರೆಸುವುದು.

**"ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ, ಆಯ್ಕೆ ಪಟ್ಟಿಯನ್ನು ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ತಯಾರಿಸುವುದು"**

**ಸಮಿತಿಯ ಮಾನ್ಯ ಅಧ್ಯಕ್ಷರು ಯೋಜನಾ ಇಲಾಖೆಯಿಂದ ಸಭೆಯ ನಡವಳಿ ಸರಿಯಾಗಿ ಬಂದಿದ್ದರು ನನ್ನ ಸಹಿಗೆ ಬರುವಾಗ ತಿದ್ದುಪಡಿಯಾಗಿ ಬಂದಿರುವುದರಿಂದ ಸಹಿ ಮಾಡಿರುತ್ತೇನೆ. ಆದರೆ, ಪರಿಶೀಲಿಸಿದಾಗ ದಿನಾಂಕ: 16.11.2016ರ ಸುತ್ತೋಲೆಯ 4ನೇ ಅಂಶವು ಸರಿಯಾಗಿದ್ದರು, ದಿನಾಂಕ: 15.06.2022ರ ಸುತ್ತೋಲೆಯ ಸೂಚನೆಗಳು ಈ ಕೆಳಕಂಡಂತಿರುತ್ತವೆ.**

1. ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಮೀಸಲಾತಿ ಹುದ್ದೆಗಳಿಗೆ ಆಯ್ಕೆ ಕೋರುವಿರಾ? ಹೌದು/ಇಲ್ಲ
2. ಮಿಕ್ಕುಳಿದ ವೃಂದದ ಹುದ್ದೆಗಳಿಗೂ ಸಹ ಆಯ್ಕೆ ಕೋರುವಿರಾ? ಹೌದು/ಇಲ್ಲ.
3. ಅರ್ಜಿ ಸಲ್ಲಿಸುವ ಸಮಯದಲ್ಲಿ ನೀವು ನೀಡಿರುವ ಅರ್ಹತೆಯಂತೆ ಸ್ಥಳೀಯ ಮತ್ತು ಮಿಕ್ಕುಳಿದ ಎರಡೂ ವೃಂದದಲ್ಲಿ ಒಂದೇ ಹುದ್ದೆಯ ಆಯ್ಕೆಗೆ ಅರ್ಹತೆ ಹೊಂದಿದಲ್ಲಿ ಯಾವ ವೃಂದದ ಹುದ್ದೆಗೆ ಆಯ್ಕೆ ಬಯಸುತ್ತೀರಾ? ಸ್ಥಳೀಯ ವೃಂದ / ಮಿಕ್ಕುಳಿದ ವೃಂದ
4. ಅರ್ಜಿ ಸಲ್ಲಿಸುವ ಸಮಯದಲ್ಲಿ ನೀವು ನೀಡಿರುವ ಹುದ್ದೆಗಳ ಅರ್ಹತೆಯಂತೆ ಮಿಕ್ಕುಳಿದ ವೃಂದದಲ್ಲಿ ಸ್ಥಳೀಯ ವೃಂದಕ್ಕಿಂತ ಉತ್ತಮ ಅರ್ಹತೆ ದೊರೆಯುವುದಾದಲ್ಲಿ ಮಿಕ್ಕುಳಿದ ವೃಂದ ಆಯ್ಕೆ ಮಾಡುವಿರಾ? ಹೌದು/ಇಲ್ಲ

ಈ ಮೇಲಿನ ಆಯ್ಕೆಗಳಿಂದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಗೊಂದಲಗಳಾಗುವುದರಿಂದ ದಿನಾಂಕ: 17.08.2023ರಂದು ನಡೆದ <u>ಅನುಚ್ಛೇದ 371 (ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟ ಉಪಸಮಿತಿ</u> ಸಭೆಯಲ್ಲಿ ಚರ್ಚಿಸಿರುವಂತೆ ಗೊಂದಲಗಳು ಉಂಟಾಗದ ರೀತಿಯಲ್ಲಿ ಸರ್ಕಾರದ ಆದೇಶ/ಸುತ್ತೋಲೆಗಳನ್ನು ಹೊರಡಿಸಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿತು.

ದಿನಾಂಕ: 06.06.2020ರ ಸುತ್ತೋಲೆಯಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ನೇಮಕಾತಿ ಪ್ರಾಧಿಕಾರಿಗಳು 02 ವೃಂದದ ಹುದ್ದೆಗಳಿಗೆ ಏಕ ಕಾಲಕ್ಕೆ ಒಂದೇ ಅಧಿಸೂಚನೆಯಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಮೀಸಲಾತಿವಾರು (ನೇರ/ಸಮತಳ) ವರ್ಗೀಕರಣವನ್ನು ನಮೂದಿಸಿ ಒಂದೇ ಅಧಿಸೂಚನೆಯನ್ನು ಹೊರಡಿಸಿ ಒಂದೇ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಿ ಸ್ಥಳೀಯ ಅಭ್ಯರ್ಥಿಗಳು ತಮ್ಮ ಇಚ್ಛೆಯಂತೆ ಸ್ಥಳೀಯ ಅಥವಾ ಮಿಕ್ಕುಳಿದ ವೃಂದವನ್ನು ಆಯ್ಕೆ ಮಾಡಿಕೊಳ್ಳಲು ಸ್ಪಷ್ಟ ಹಾಗೂ ನಿಖರ ಆಯ್ಕೆಗಳನ್ನು ಪಡೆದು ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ.

ಮೇಲಿನ ಆದೇಶದಿಂದ ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಅನಾನುಕೂಲವಾದ ಪ್ರಯುಕ್ತ ದಿನಾಂಕ: 15.06.2022ರಂದು ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಹುದ್ದೆಗಳಿಗೆ ಸ್ಥಳೀಯ ಹಾಗೂ ಮಿಕ್ಕುಳಿದ ವೃಂದದಲ್ಲಿ ನೇರ ನೇಮಕಾತಿಯಡಿ ಪ್ರತ್ಯೇಕ ಅಧಿಸೂಚನೆ ಹೊರಡಿಸಿ, ಪ್ರತ್ಯೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಪ್ರತ್ಯೇಕ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ಸೂಚಿಸಲಾಗಿರುವ ಆದೇಶವು ಸರಿ ಇದ್ದು, ಸಚಿವ ಸಂಪುಟ ಉಪಸಮಿತಿಯು ಈ ಆದೇಶವನ್ನು ಮುಂದುವರೆಸಲು ಸಹಮತಿ ನೀಡಿತು.

ತೀರ್ಮಾನ:

**ದಿನಾಂಕ: 16.11.2016ರ ಸುತ್ತೋಲೆಯಂತೆ 4ನೇ ಅಂಶವನ್ನು ಮುಂದುವರಿಸುವುದು. "ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ, ಆಯ್ಕೆ ಪಟ್ಟಿಯನ್ನು ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪಟ್ಟಿ ತಯಾರಿಸುವುದು". ಈ ಬಗ್ಗೆ ಸಿಆಸುಇಲಾಖೆ ಕೂಡಲೇ ಸ್ಪಷ್ಟವಾದ ಸುತ್ತೋಲೆ ಹೊರಡಿಸಲು ಸಮಿತಿಯು ತೀರ್ಮಾನಿಸಿತು.**

2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿದ್ದ ಅರ್ಜಿ ಸಂಖ್ಯೆ 4348-4372/2014ಗೆ ಸಂಬಂಧಿಸಿದ ಇತರ ಅರ್ಜಿಗಳಾದ 5516-5526/2015 ಮತ್ತು 5558-5568/2015ರ ಪ್ರಕರಣಗಳಲ್ಲಿ ಮಾನ್ಯ ಕೆ.ಎ.ಟಿ ನೀಡಿರುವ ಆದೇಶದನ್ವಯ ದಿನಾಂಕ: **9.6.2014ರಿಂದ 2017ರ ಅಂತಿಮ ಆದೇಶ ದಿನಾಂಕ: 17.08.2017ರವರೆಗಿನ ಅವಧಿಯನ್ನು** ಪರಿಗಣಿಸಿ, 'ಕಾಲ್ಪನಿಕ ಸೇವಾ ಜೇಷ್ಠತೆ'(Notional Seniority) ನೀಡಿ, ಸಾಮಾನ್ಯ ವರ್ಗದಡಿ ಮುಂಬಡ್ತಿ ಪಡೆದಿರುವ ಕರ್ನಾಟಕ ಸರ್ಕಾರದ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಎಲ್ಲಾ ಅಧಿಕಾರಿ ಹಾಗೂ ನೌಕರರ ಮುಂಬಡ್ತಿಯನ್ನು ಮರು ಹೊಂದಾಣಿಕೆ ಮಾಡಿ ದಿನಾಂಕ: 9.6.2014ರಿಂದ ಜಾರಿಗೆ ಬರುವಂತೆ ಸೇವಾ ಜೇಷ್ಠತೆ ನೀಡುವಂತೆ ಕೋರಿರುವ ಮನವಿಗಳ ಬಗ್ಗೆ ಚರ್ಚಿಸಲಾಯಿತು.

**ದಿನಾಂಕ:17.08.2023ರಂದು ಸಚಿವ ಸಂಪುಟ ಉಪ ಸಮಿತಿಯ ತೀರ್ಮಾನವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪಾಲನೆ ಮಾಡದೇ ಇರುವ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತಪಡಿಸಿತು, ಸಭೆಯಲ್ಲಿ ಹಾಜರಿದ್ದ, ಸಿಆಸುಇಲಾಖೆಯ ಕಾರ್ಯದರ್ಶಿಗಳು ಈ ದಿನವೇ ಆದೇಶ ಹೊರಡಿಸಲಾಗುವುದು**

ಎಂದು ಮಾಹಿತಿ ನೀಡಿದರು, ಸದರಿ ಮಾಹಿತಿಯಿಂದ ಅಸಮಾಧಾನಗೊಂಡ ಸಮಿತಿಯ ಸದಸ್ಯರಾದ ಶ್ರೀ ಶರಣಪ್ರಕಾಶ್ ಪಾಟೀಲ್ ರವರು ನನ್ನ ಏಕೆ ಮಾಡಲಿಲ್ಲ ಎಂದು ಮರು ಪ್ರಶ್ನಿಸಿದಾಗ ಕಾರ್ಯದರ್ಶಿಗಳು ನೀಡಿದ ಉತ್ತರವನ್ನು ಸಮಿತಿಯು ಆಕ್ಷೇಪಿಸಿತು ಹಾಗೂ ಸದರಿ ವಿಷಯದ ಬಗ್ಗೆ ಈ ಕೆಳಕಂಡಂತೆ ಚರ್ಚಿಸಲಾಯಿತು.

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾಗಿದ್ದ ಅರ್ಜಿ ಸಂಖ್ಯೆ:4348-4372/2014 ಸಂಬಂಧಿಸಿದ ಇತರೆ ಅರ್ಜಿಗಳಾದ 5516-5526/2015 ಮತ್ತು 5558-5563/2015ರ ಪ್ರಕರಣಗಳಲ್ಲಿ ಮಾನ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ:17.08.2017ರಂದು ನೀಡಿರುವ ಅಂತಿಮ ತೀರ್ಪು ಸ್ಥಳೀಯ ವೃಂದದ ನೌಕರರ ಪರವಾಗಿದ್ದು, 371Jರಡಿ ಶೇ. 8ರಷ್ಟು ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಎತ್ತಿಹಿಡಿದಿರುತ್ತದೆ. ಅಲ್ಲದೇ, **ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 06 ಹೈಕಲು 2014(ಭಾಗ) , ದಿನಾಂಕ:23.06.2014** ರನ್ವಯ **ಮಾನ್ಯ ಆಡಳಿತ ನ್ಯಾಯ ಮಂಡಳಿ ನೀಡಬಹುದಾದ ಅಂತಿಮ ಆದೇಶಕ್ಕನುಗುಣವಾಗಿ ಪರಿಶೀಲನೆ ಮಾಡುವ ಷರತ್ತಿಗೊಳಪಟ್ಟು**, ಎಂದು ನಮೂದಿಸಿ ಆ ಸಂದರ್ಭದಲ್ಲಿ ಸಚಿವಾಲಯದ ಎಲ್ಲಾ ವೃಂದದ ಮುಂಬಡ್ತಿಗಳನ್ನು ನೀಡಿರುವ ಹಿನ್ನೆಲೆಯಲ್ಲಿ ನ್ಯಾಯಮಂಡಳಿಯ ಮಧ್ಯಂತರ ತಡೆಯಾಜ್ಞೆ ಆದೇಶ ದಿನಾಂಕ:09.06.2014 ರಿಂದ ಅಂತಿಮ ಆದೇಶ ದಿನಾಂಕ:17.08.2017ರ ವರೆಗಿನ ಅವಧಿಯನ್ನು ಸ್ಥಳಿಯ ವೃಂದದ ನೌಕರರ ಸೇವಾ ಅವಧಿಯೆಂದು ಪರಿಗಣಿಸಿ, ಸದರಿ ನೌಕರರಿಗೆ 'Notional Seniority' (ಕಾಲ್ಪನಿಕ ಜೇಷ್ಠತೆ) ನೀಡಿ, ಸಾಮಾನ್ಯ ವರ್ಗದಡಿ ಮುಂಬಡ್ತಿ ಪಡೆದಿರುವ ಕರ್ನಾಟಕ ಸರ್ಕಾರ ಸಚಿವಾಲಯದ, "ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಎಲ್ಲಾ **ಅಧಿಕಾರಿ ಹಾಗೂ ನೌಕರರ ಮುಂಬಡ್ತಿಯನ್ನು**" ಮರು ಹೊಂದಾಣಿಕೆ ಮಾಡಿ ನಿಗಧಿಪಡಿಸುವ ಬಗ್ಗೆ ವಿಸ್ತತವಾಗಿ ಚರ್ಚಿಸಲಾಯಿತು.

ಮುಂದುವರೆದು, 2014ರಿಂದ ಸೇವಾ ಜೇಷ್ಠತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚ **ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 13868/2020ರಲ್ಲಿ ದಿನಾಂಕ:01.08.2023(ತಿದ್ದುಪಡಿ ಆದೇಶದ ದಿನಾಂಕ: 26.10.2023)ರ ಅಂತಿಮ ತೀರ್ಪಿನಲ್ಲಿ 371Jರಡಿ ಮುಂಬಡ್ತಿಯ ಸೇವಾ ಜೇಷ್ಠತೆಯನ್ನು ದಿನಾಂಕ: 21.04.2014ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿರುತ್ತದೆ.** ಅದರನ್ವಯ ಕರ್ನಾಟಕ ಸರ್ಕಾರ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಅರ್ಹರಿರುವ ಎಲ್ಲಾ ಅಧಿಕಾರಿ ಹಾಗೂ ನೌಕರರಿಗೆ ದಿನಾಂಕ:21.04.2014ರಿಂದ ಅನ್ವಯವಾಗುವಂತೆ ಜೇಷ್ಠತೆಯನ್ನು ನೀಡಿ ಜೇಷ್ಠತಾ ಪಟ್ಟಿಯನ್ನು ಮರುಹೊಂದಾಣಿಕೆ ಮಾಡಿ Monetary Benefits (ಆರ್ಥಿಕ ಸೌಲಭ್ಯ) ಗಳೊಂದಿಗೆ ಮುಂಬಡ್ತಿಯನ್ನು ನೀಡುವ ಕುರಿತು ಪರಿಶೀಲಿಸಲಾಯಿತು.

**ತೀರ್ಮಾನ:**

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 13868/2020ರಲ್ಲಿ ದಿನಾಂಕ:01.08.2023 (ತಿದ್ದುಪಡಿ ಆದೇಶದ ದಿನಾಂಕ: 26.10.2023)ರ ಅಂತಿಮ ತೀರ್ಪಿನ ಆದೇಶವನ್ನು ಅನುಷ್ಠಾನಗೊಳಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಅರ್ಹರಿರುವ ಎಲ್ಲಾ ಅಧಿಕಾರಿ ಹಾಗೂ ನೌಕರರ ಜೇಷ್ಠತೆಯನ್ನು ದಿನಾಂಕ:21.04.2014ರಿಂದ ಜಾರಿಗೆ ಬರುವಂತೆ ಸೇವಾ ಜೇಷ್ಠತಾ ಪಟ್ಟಿಯನ್ನು ಮರು ಹೊಂದಾಣಿಕೆ ಮಾಡಿ ಕಾಲ್ಪನಿಕಾ ಜೇಷ್ಟತೆ ನಿಗದಿಪಡಿಸಿ Notional Seniority) ಗಳೊಂದಿಗೆ ಮುಂಬಡ್ತಿಯನ್ನು ನೀಡಲು ಕೂಡಲೇ ಸೂಕ್ತ ಕ್ರಮವಹಿಸಲು ಸೂಚಿಸಿ ನಿರ್ಣಯಿಸಲಾಯಿತು.

**ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಸಿಆಸು ಇಲಾಖೆ**

**ಮುಂಬಡ್ತಿ : -**

3 7 1 ಜೆ ಭಾಗದ ರಾಜ್ಯ ವೃಂದದಲ್ಲಿ ಶೇ.8ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಿಡುತ್ತಿದ್ದು, ಜೇಷ್ಟತೆ ಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುತ್ತಿದೆ. ಇದರಿಂದಾಗಿ ರಾಜ್ಯ ವೃಂದದ ಮೀಸಲಾತಿ ಅಡಿಯಲ್ಲಿ ಬಡ್ತಿ ಪಡೆದವರ ಹುದ್ದೆಗಳು ಮುಂಬಡ್ತಿ, ನಿವೃತ್ತಿ, ಸ್ವಯಂ ನಿವೃತ್ತಿ ಅಥವಾ ಮರಣ

ಮುಂತಾದ ಕಾರಣಗಳಿಂದ ಹುದ್ದೆ ಖಾಲಿಯಾಗದಿದ್ದಲ್ಲಿ ನಂತರದ ಜೇಷ್ಠತೆಯಲ್ಲಿರುವವರಿಗೆ ಬಡ್ತಿಯ ಅವಕಾಶ ದೊರೆಯುವುದಿಲ್ಲ. ಇವರಿಗಿಂತ ಕಿರಿಯರಾದವರಿಗೆ ರಾಜ್ಯ ವಲಯದಲ್ಲಿ ಬಡ್ತಿ ದೊರೆತರು ಕಲ್ಯಾಣ ಕರ್ನಾಟಕ ಭಾಗದವರಿಗೆ ಬಡ್ತಿ ದೊರೆಯಲು ಅವಕಾಶವೇ ಇರುವುದಿಲ್ಲ.

ಆದ್ದರಿಂದ, ರಾಜ್ಯ ವೃಂದದಲ್ಲಿ ಜೇಷ್ಟತೆಯನ್ನು ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಟತೆಯನ್ನು ಪ್ರಕಟಿಸುವುದು. ಸದರಿ ಜೇಷ್ಟತೆಯಲ್ಲಿ ಅಧಿಕಾರಿ/ನೌಕರರ ಹೆಸರಿನ ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ನಮೂದಿಸುವ ರೀತಿಯಲ್ಲೇ 371ಜೆ SC, 371J ST, 371ಜೆ ಸಾಮಾನ್ಯ, 371ಜೆ ಮಹಿಳೆ ಎಂದು ನಮೂದಿಸುವುದು. ಹಾಗೂ ರಾಜ್ಯ ವೃಂದದಲ್ಲಿ ಟಾರ್ಗೆಟ್ ಮೀಸಲಾತಿ ಬದಲು ರಿಕ್ತ ಸ್ಥಾನ ಆಧಾರಿತ ಶೇ.8 ರಷ್ಟು ಮೀಸಲಾತಿಯನ್ನು ನಿಗದಿಪಡಿಸಲು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು 7 ದಿನದೊಳಗೆ ಮಂಡಿಸಲು ಸಚಿವ ಸಂಪುಟ ಉಪಸಮಿತಿಯು ಅನುಮೋದಿಸಿತು.

ತೀರ್ಮಾನ:-

ಈ ವಿಷಯದ ಬಗ್ಗೆ ಸಿಆಸು ಇಲಾಖೆಯು ಕಾನೂನು ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗಳ ಅಭಿಪ್ರಾಯ ಪಡೆದು ಪರಿಶೀಲಿಸಿ ಆದೇಶ ಹೊರಡಿಸಲು ಸಚಿವ ಸಂಪುಟ ಉಪ ಸಮಿತಿಯು ಅನುಮೋದಿಸಿತು.

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ತೀರ್ಮಾನವನ್ನು ಸಿಆಸುಇಲಾಖೆ ಅನುಷ್ಠಾನಗೊಳಿಸದೇ ಕಡತವನ್ನು ಅಭಿಪ್ರಾಯಕ್ಕಾಗಿ ಕಾನೂನು ಇಲಾಖೆಗೆ ಕಳುಹಿಸಲಾಗಿದೆ ಎಂದು ಅನುಪಾಲನಾ ವರದಿ ನೀಡಿರುವ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತಪಡಿಸಿತು, ಕೂಡಲೇ ಸಿಆಸುಇಲಾಖೆ, ಕಾನೂನು ಇಲಾಖೆಯ ಅಧಿಕಾರಿಗಳು ಸಭೆ ನಡೆಸಿ ಕೂಡಲೇ ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಟತೆಯನ್ನು ಪ್ರಕಟಿಸಲು ಹಾಗೂ ಶೇಕಡ 8ರಷ್ಟು ಮೀಸಲಾತಿಗೆ ರೋಸ್ಟರ್ ಬಿಂದುಗಳನ್ನು ಗುರುತಿಸಿ ಆದೇಶ ಹೊರಡಿಸಲು ದಿನಾಂಕ: 17.08.2023ರ ಸಚಿವ ಸಂಪುಟ ಉಪಸಮಿತಿಯ ಸಭೆಯಂತೆ ಕ್ರಮವಹಿಸಲು ಸೂಚಿಸಿ ನಿರ್ಣಯಿಸಿತು.

*(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಸಿಆಸು ಇಲಾಖೆ)*

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ-**

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ನಡವಳಿಗೆ **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ** ಅನುಪಾಲನಾ ವರದಿ ಸಲ್ಲಿಸದೇ ಇರುವ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತಪಡಿಸಿತು ಹಾಗೂ ಸಭೆಯಲ್ಲಿ ಹಾಜರಿದ್ದ ಅಪರ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಲಬುರಗಿ ರವರು ನೀಡಿದ ಅಸ್ಪಷ್ಟ ಮಾಹಿತಿ ಬಗ್ಗೆ ಸಮಿತಿಯು ಆಕ್ಷೇಪಿಸಿ ಕೂಡಲೇ ನಿಖರ ಮಾಹಿತಿ ಪಡೆದು ಸಮಿತಿಗೆ ಸಲ್ಲಿಸಲು ಸೂಚಿಸಿತು. ತದನಂತರ ಸಭೆಗೆ ಹಾಜರಾದ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರು ಕಳೆದ ಮೂರು ದಿನಗಳ ಹಿಂದೆ ಮಾಹಿತಿಗಳನ್ನು ಇಂಧೀಕರಿಸಲಾಗಿದೆ, ಮತ್ತೊಮ್ಮೆ ಪರಿಶೀಲಿಸಿ ಸಮಿತಿಗೆ ನಿಖರ ಮಾಹಿತಿಯನ್ನು ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿ ಆಧರಿಸಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 15000 ಶಿಕ್ಷಕರ ಹುದ್ದೆಗಳು ಖಾಲಿ ಇರುವ ಬಗ್ಗೆ ಮಾಹಿತಿ ಇದ್ದು, ನಿಖರ ಮಾಹಿತಿಯನ್ನು ಸಲ್ಲಿಸಲು ಸಮಿತಿಯು ಸೂಚಿಸಿತು ಹಾಗೂ ಕಲ್ಯಾಣ ಕರ್ನಾಟಕ ಭಾಗಕ್ಕೆ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ ಅಡ್ವಕೇಟ್ ಜನರಲ್ ರವರೊಂದಿಗೆ ಚರ್ಚಿಸಿ ಸೂಕ್ತ ಕ್ರಮವಹಿಸಲು ಹಾಗೂ ಶಿಕ್ಷಕರ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಯಿತು.

*(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ)*

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ-**

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ನಡವಳಿ ಮೇಲೆ ಕೈಗೊಂಡಿರುವ ಕ್ರಮಗಳ ಮೇಲೆ ಅನುಪಾಲನಾ ವರದಿಯನ್ನು ಸಮಿತಿಯು ಪರಿಶೀಲಿಸಿತು, 371ಜೆ ಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿರುವ ಬಗ್ಗೆ ಹಾಗೂ ಮುಂಬಡ್ತಿ ನೀಡಿರುವ ಬಗ್ಗೆ ಪೂರ್ಣ ವಿವರಗಳನ್ನು ಗೂಗಲ್ ಶೀಟ್ ನಲ್ಲಿ ಅಳವಡಿಸಲು ಮತ್ತೊಮ್ಮೆ ಸೂಚಿಸಲಾಯಿತು ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು ವಿವಿಧ ಹುದ್ದೆಗಳ ಭರ್ತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆದಷ್ಟು ಶೀಘ್ರದಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು, ವಿಳಂಬಕ್ಕೆ ಅವಕಾಶವಿಲ್ಲದೇ ಶೀಘ್ರವಾಗಿ ಕ್ರಮವಹಿಸಲು ಸಮಿತಿಯು ಸೂಚಿಸಿತು.

*(ಕ್ರಮ: ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)*

**ಸಾರಿಗೆ ಇಲಾಖೆ:-**

ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ ರವರು 371ಜೆ ರಡಿ ಸಾರಿಗೆ ಇಲಾಖೆಯಲ್ಲಿ ನೇರ ನೇಮಕಾತಿಯಡಿ 296 ಹುದ್ದೆಗಳು ಹಾಗೂ ಮುಂಬಡ್ತಿಯಡಿ 270 ಹುದ್ದೆಗಳು ಭರ್ತಿ ಮಾಡಲು ಬಾಕಿ ಇದ್ದು, ಇರುವ ವಾಹನ ಚಾಲಕರು ಕಂ ನಿರ್ವಾಹಕರ ಹುದ್ದೆಗಳನ್ನು KEA ಮೂಲಕ ಭರ್ತಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ಮಾಹಿತಿ ನೀಡಿದರು ಹಾಗೂ ಮುಂಬಡ್ತಿಯಡಿ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

*(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ)*

**ಉನ್ನತ ಶಿಕ್ಷಣ ಇಲಾಖೆ:-**

ಉನ್ನತ ಶಿಕ್ಷಣ ಇಲಾಖೆಯಲ್ಲಿ ನೇರ ನೇಮಕಾತಿಯಡಿ 1783 ಹಾಗೂ ಮುಂಬಡ್ತಿಯಡಿ 540 ಹುದ್ದೆಗಳು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆರವರು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.

*(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)*

**ಇಂಧನ ಇಲಾಖೆ:-**

ಇಂಧನ ಇಲಾಖೆಯಲ್ಲಿ ನೇರ ನೇಮಕಾತಿಯಡಿ 1688 ಹಾಗೂ ಮುಂಬಡ್ತಿಯಡಿ 64 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ, ಇಂಧನ ಇಲಾಖೆಯ ಅಧಿಕಾರಿಗಳು ಮಾತನಾಡುತ್ತಾ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಹಾಗೂ ಪ್ರಸ್ತುತ 1 6 7 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಲೈನ್‌ಮಾನ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

**ಗೃಹ ಇಲಾಖೆ:-**

ಗೃಹ ಇಲಾಖೆಯಲ್ಲಿ ನೇರ ನೇಮಕಾತಿಯಡಿ 2532 ಹಾಗೂ ಮುಂಬಡ್ತಿಯಡಿ 390 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ, ಗೃಹ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಹಾಗೂ ದಿನಾಂಕ: 17.08.2023ರ ಸಭೆಯಲ್ಲಿ ನಿರ್ಣಯವಾದ ವಿವಿಧ 371ಜೆಗೆ ಸಂಬಂಧಿಸಿದ ಅರ್ಜಿಗಳ ಕುರಿತು ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಿದರು.

*(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ)*

**ಸಹಕಾರ ಇಲಾಖೆ:-**

ಸಹಕಾರ ಇಲಾಖೆಯಲ್ಲಿ ನೇರ ನೇಮಕಾತಿಯಡಿ 481 ಹಾಗೂ ಮುಂಬಡ್ತಿಯಡಿ 176 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ, ಇಲಾಖಾ ಅಧಿಕಾರಿಗಳು

ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ತಿಳಿಸಿದರು. ಮುಂದುವರೆದು ಸಹಕಾರ ಇಲಾಖೆಯಡಿ ಬರುವ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ರಾಜ್ಯ ವ್ಯಾಪಿ ವೃಂದದಲ್ಲಿ ಬರುವ ಶೇಕಡ 8ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗದವರಿಗೆ ನಿಗದಿಪಡಿಸುವ ಕುರಿತು ಪರಿಶೀಲಿಸಿ ಮುಂದಿನ ಸಭೆಗೆ ಮಾಹಿತಿ ನೀಡುವಂತೆ ಇಲಾಖಾ ಕಾರ್ಯದರ್ಶಿಗಳಿಗೆ ಸಭೆಯು ಸೂಚಿಸಿತು.

*(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ)*

**ಲೋಕೋಪಯೋಗಿ ಇಲಾಖೆ:-**

ಲೋಕೋಪಯೋಗಿ ಇಲಾಖೆಯಲ್ಲಿ ನೇರ ನೇಮಕಾತಿಯಡಿ 15 ಹಾಗೂ ಮುಂಬಡ್ತಿಯಡಿ 11 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಇಲಾಖಾ ಅಧಿಕಾರಿಗಳು ಮುಂಬಡ್ತಿಯಡಿ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

*(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ)*

**ಕೈಗಾರಿಕೆ ಇಲಾಖೆ:-**

ಕೈಗಾರಿಕೆ ಇಲಾಖೆಯ MSME ಅಡಿ ನೇರ ನೇಮಕಾತಿಯಡಿ 793 ಹಾಗೂ ಮುಂಬಡ್ತಿಯಡಿ 556 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಇಲಾಖಾ ಅಧಿಕಾರಿಗಳು ವೃಂದ ಮತ್ತು ನೇಮಕಾತಿ ತಿದ್ದುಪಡಿಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಕ್ರಮವಹಿಸುವುದಾಗಿ ಸಭೆಗೆ ನೀಡಿದರು. ಸದರಿ ಮಾಹಿತಿಯನ್ನು ಪರಿಶೀಲಿಸಿದ ಸಮಿತಿಯು ದೀರ್ಘಕಾಲಾವಕಾಶವನ್ನು ತೆಗೆದುಕೊಳ್ಳದೇ ಶೀಘ್ರದಲ್ಲಿ ಕ್ರಮವಹಿಸಲು ಸೂಚಿಸಿತು.

**ಸಮಿತಿಯು ಕೈಗೊಂಡ ಇತರೆ ನಿರ್ಣಯಗಳು:-**

1. ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಪ್ರಕ್ರಿಯೆಗಳ ಪರಿಶೀಲಿಸಲು ಪ್ರತ್ಯೇಕ ಸಭೆ ಕರೆಯಲು ಸಭೆಯಲ್ಲಿ ನಿರ್ಣಯಿಸಿತು. ಈ ಬಗ್ಗೆ ಯೋಜನಾ ಇಲಾಖೆಗೆ ಪ್ರತ್ಯೇಕ ಕಡತದಲ್ಲಿ ದಿನಾಂಕ, ಸಮಯದ ವಿವರಗಳನ್ನು ಪಡೆಯಲು ಸಮಿತಿಯು ಸೂಚಿಸಿತು.
2. ವಿಜಯನಗರ ಜಿಲ್ಲೆಯನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿಸಿ ಸೇರ್ಪಡೆ ಆದೇಶ ಹೊರಡಿಸಲು (ಬಳ್ಳಾರಿ ಜಿಲ್ಲೆ ಎಂದು ಇರುವುದನ್ನು) ಸಿಆಸುಇಲಾಖೆಗೆ ಸೂಚಿಸಿ ನಿರ್ಣಯಿಸಿತು.

*(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಸಿಆಸು ಇಲಾಖೆ)*

3. ವಿಧಾನ ಸಭೆ/ ವಿಧಾನ ಪರಿಷತ್ತಿನ ಸಚಿವಾಲಯಗಳಲ್ಲಿ 371ಜೆ ಮೀಸಲಾತಿ ಅಳವಡಿಸಿರುವ ಬಗ್ಗೆ ಪೂರ್ಣ ವಿವರ ಪಡೆಯಲು ನಿರ್ಣಯಿಸಲಾಯಿತು.

*(ಕ್ರಮ: ಕಾರ್ಯದರ್ಶಿಗಳು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತು)*

4. ಅನುಪಾಲನಾ ವರದಿ ಸಲ್ಲಿಸದೆ ಇದ್ದ ಈ ಕೆಳಕಂಡ ಇಲಾಖೆಗಳಿಂದ ವಿವರಣೆ ಪಡೆಯಲು ಸೂಚಿಸಲಾಯಿತು.
5. ಒಳಾಡಳಿತ ಇಲಾಖೆ
6. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
7. ಅಬಕಾರಿ ಇಲಾಖೆ
8. ಕರ್ನಾಟಕ ರಾಜ್ಯ ಪೊಲೀಸ್ ವೈರ್‌ಲೆಸ್ ಘಟಕ

ಸಭೆಯಲ್ಲಿ ಒಳಾಡಳಿತ ಇಲಾಖೆ ಅನುಪಾಲನಾ ವರದಿಯನ್ನು ಸಲ್ಲಿಸಿರುವುದನ್ನು ಪರಿಶೀಲಿಸಲಾಯಿತು ಹಾಗೂ ಇನ್ನೂ ಮುಂದೆ ನಿಗದಿತ ಕಾಲಾವಧಿಯಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸಲು ಒಳಾಡಳಿತ ಇಲಾಖೆಗೆ ಸೂಚಿಸಿತು.

5. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಅಡುಗೆಯವರಿಗೆ ಮುಂಬಡ್ತಿ ನೀಡುವಾಗ ಶೇಕಡ 8ರಷ್ಟು ಮೀಸಲಾತಿ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಯಿತು.

*(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)*

6. ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ನಿಯಮಿತ ಚಾಮರಾಜಪೇಟೆ, ಬೆಂಗಳೂರು ಇವರು ಕಡ್ಡಾಯವಾಗಿ 371ಜೆ ಸ್ಥಳೀಯ ವೃಂದದ ಅಧಿಕಾರಿ ಮತ್ತು ನೌಕರರಿಗೆ ಮುಂಬಡ್ತಿ ಮತ್ತು ಸೇವಾ ಜೇಷ್ಠತೆ ಪರಿಗಣಿಸುವ ಬಗ್ಗೆ ಸೂಚಿಸಲಾಯಿತು.

*(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಸಹಕಾರ ಇಲಾಖೆ)*

7. ಕರ್ನಾಟಕ ವಿದ್ಯುತ್ ಶಕ್ತಿ ಕಾರ್ಖಾನೆಯಲ್ಲಿ ಶ್ರೀ ಸಿದ್ದನಗೌಡ ಸೀನಿಯರ್ ಹೈಸ್ಕಿಲ್ಡ್ ವರ್ಕರ್ ಹುದ್ದೆಯಿಂದ ಅದೇ ಹುದ್ದೆಗೆ ಬಡ್ತಿ ನೀಡಿರುವ ಬಗ್ಗೆ ಆಕ್ಷೇಪಿಸಿ ಕೂಡಲೇ ಆಗಿರುವ ತಪ್ಪನ್ನು ಸರಿಪಡಿಸಿ ಜೂನಿಯರ್ ಚಾರ್ಜ್‌ಮೇನ್ ಹುದ್ದೆಗೆ ಮುಂಬಡ್ತಿ ನೀಡಲು ಸೂಚನೆ ನೀಡಲಾಯಿತು.

*(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ)*

8. ಸಭೆಗೆ ಗೈರು ಹಾಜರಾಗಿದ್ದ, ಸಹಕಾರ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಇ-ಆಡಳಿತ ಮುಂತಾದ ಇಲಾಖೆಯ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಲು ಸೂಚಿಸಿ ನಿರ್ಣಯಿಸಿತು.
9. ಅನುಚ್ಛೇದ 371ಜೆ ಅನ್ವಯ ರಾಜ್ಯ ಮಟ್ಟದ ಸ್ಥಳೀಯ ವೃಂದದಲ್ಲಿ ಶೇಕಡ 8ರಷ್ಟು ನೇರ ನೇಮಕಾತಿಯಲ್ಲಿ46 ಇಲಾಖೆಗಳಲ್ಲಿ ಇನ್ನೂ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಇರುವ ಹುದ್ದೆಗಳ ಸಂಖ್ಯೆ 1677 ಹಾಗೂ ಸ್ಥಳೀಯ ವೃಂದದಲ್ಲಿ ನೇಮಕಾತಿಯಡಿ ಖಾಲಿ ಇರುವ 16985 ಮತ್ತು ಮುಂಬಡ್ತಿಯಡಿ ಖಾಲಿ ಇರುವ 7532 ಹುದ್ದೆಗಳು ಹಾಗೂ ಶೇಕಡ 8ರಷ್ಟು ಸ್ಥಳೀಯ ವೃಂದದಲ್ಲಿ ಖಾಲಿ ಇರುವ 853 ಹುದ್ದೆಗಳು ಸೇರಿದಂತೆ ಎಲ್ಲಾ 46 ಇಲಾಖೆಗಳು ನೇರ ನೇಮಕಾತಿ ಮತ್ತು ಮುಂಬಡ್ತಿ ನೀಡುವಲ್ಲಿ ಅಗತ್ಯ ಕ್ರಮವಹಿಸಲು ಸೂಚಿಸಿ ಸಮಿತಿಯು ನಿರ್ಣಯಿಸಿತು.
10. ಈ ಹಿಂದೆ 371ಜೆಗೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ಸಿಆಸುಇ ಇಲಾಖೆಯ ಹೈ-ಕ ವಿಶೇಷ ಕೋಶವು ಕಾರ್ಯನಿರ್ವಹಣೆಯನ್ನು ಮಾಡಲಾಗುತ್ತಿತ್ತು. ಸದರಿ ಕೋಶವನ್ನು ವಿಸರ್ಜಿಸಿ ಯೋಜನಾ ಇಲಾಖೆಯ ಸ್ವಾಧೀನಕ್ಕೆ ಎಲ್ಲಾ ಕೆಲಸಗಳನ್ನು ವರ್ಗಾಯಿಸಲಾಗಿರುತ್ತದೆ. ಪ್ರಸ್ತುತ ಯೋಜನಾ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆಯಿರುವುದರಿಂದ ಈ ಹಿಂದೆ ಸಿಆಸುಇ ಇಲಾಖೆಯ ಹೈ-ಕ ವಿಶೇಷ ಕೋಶದಲ್ಲಿ ಮಂಜೂರಾಗಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳನ್ನು ಯೋಜನಾ ಇಲಾಖೆಯ ವಶಕ್ಕೆ ನೀಡುವ ಬಗ್ಗೆ ಉಪ ಸಮಿತಿಯ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿತು.
11. ಪ್ರಸ್ತುತ ವಿವಿಧ ಇಲಾಖೆಗಳು ಇಲಾಖೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಸ್ಥಳೀಯ ವೃಂದ, ನೇರ ನೇಮಕಾತಿ ಮತ್ತು ಮುಂಬಡ್ತಿ ಹಾಗೂ ಶೇಕಡ 8ರಷ್ಟು ಹುದ್ದೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಲಾಗುತ್ತಿದ್ದು, ಒಂದು ಬಾರಿ ಒಂದು ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ವಿವಿಧ ಇಲಾಖೆಗಳನ್ನು ಸೇರಿಸಿ ಒಟ್ಟಾರೆ ಮಂಜೂರಾಗಿರುವ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು, ಖಾಲಿ

ಇರುವ ಹುದ್ದೆಗಳು, ಭರ್ತಿ ಮಾಡಲು ಕೈಗೊಂಡಿರುವ ಹುದ್ದೆಗಳ ವಿವರಗಳು ಹಾಗೂ ಮುಂಬಡ್ತಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಎಲ್ಲಾ ಹುದ್ದೆಗಳ ವಿವರಗಳನ್ನು ಗೂಗಲ್‌ಶೀಟ್ ನಲ್ಲಿ ಇಂಧೀಕರಿಸಲು ಸೂಚಿಸಿ ಸಭೆಯು ನಿರ್ಣಯಿಸಿತು.

::ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು::

(ಪ್ರಿಯಾಂಕ್ ಖರ್ಗೆ)
ಅಧ್ಯಕ್ಷರು,
ಸಚಿವ ಸಂಪುಟದ ಉಪಸಮಿತಿ (371ಜೆ)
ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಹಾಗೂ ಐ.ಟಿ.ಬಿ.ಟಿ
ಸಚಿವರು.

ಪ್ರಸ/2024-04

# ಕರ್ನಾಟಕ ಸರ್ಕಾರ

ಸಂಖ್ಯೆ:ಪಿಡಿಎಸ್/101 /ಹೆಚ್‌ಕಡಿ/2023

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಡಾ|| ಬಿ.ಆರ್ ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:16.04.2025

## ಅನಧಿಕೃತ ಟಿಪ್ಪಣಿ

ವಿಷಯ : ದಿನಾಂಕ:10.03.2025ರಂದು ನಡೆದ ಭಾರತ ಸಂವಿಧಾನದ ಅನುಚ್ಛೇದ 371(ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:10.03.2025ರಂದು ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರು ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಭಾರತ ಸಂವಿಧಾನದ ಅನುಚ್ಛೇದ 371(ಜೆ) ಅಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ನಡವಳಿಯ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ತುರ್ತಾಗಿ ಸಲ್ಲಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಇವರಿಗೆ**

1. ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್
3. ಹೆಚ್ಚುವರಿ ಪ್ರತಿ

**ದಿನಾಂಕ: 10.03.2025ರಂದು ಭಾರತದ ಸಂವಿಧಾನದ ಅನುಚ್ಛೇದ 371 (ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟ ಉಪಸಮಿತಿ ಸಭೆಯ ನಡವಳಿಗಳು:**

ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರು ಮತ್ತು ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ(ಎಡಿಬಿ), ಯೋಜನಾ ಇಲಾಖೆ ಇವರು ಸಚಿವ ಸಂಪುಟದ ಉಪಸಮಿತಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರಿಯಾಂಕ ಖರ್ಗೆರವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಸಚಿವರನ್ನು ಹಾಗೂ ಸಮಿತಿಯ ಸದಸ್ಯರುಗಳಾದ ಶ್ರೀ ಶರಣ ಪ್ರಕಾಶ್ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರನ್ನು ಹಾಗೂ ಶ್ರೀ ರಹೀಮ್ ಖಾನ್ ರವರು, ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರನ್ನು ಮತ್ತು ಶ್ರೀ ಈಶ್ವರ್ ಖಂಡ್ರೆ, ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಸಚಿವ ಸಂಪುಟದ ಉಪ ಸಮಿತಿಯ ಮಾನ್ಯ ಅಧ್ಯಕ್ಷರನ್ನು ಕೋರಿದರು.

**ವಿಷಯಸೂಚಿ: 1**

**ದಿನಾಂಕ: 04.01.2024ರಂದು ನಡೆದ ಸಭೆಯ ನಡವಳಿಯ ಮೇಲೆ ಇಲಾಖೆಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ.**

ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸಚಿವ ಸಂಪುಟದ ಉಪ ಸಮಿತಿಯ ಸದಸ್ಯರು ದಿನಾಂಕ: 04.01.2024ರಂದು ನಡೆದ ಸಭೆಯ ನಡವಳಿಯ ಮೇಲೆ ಅನುಪಾಲನಾ ವರದಿಯನ್ನು ಸಲ್ಲಿಸಲು ಯೋಜನಾ ಇಲಾಖೆಯು ಪತ್ರ ಸಂಖ್ಯೆ: ಪಿಡಿಎಸ್ /101/ಹೆಚ್‌ಕೆಡಿ/2023, ದಿನಾಂಕ: 02.02.2024, ದಿನಾಂಕ: 18.05.2024ರಂದು ಮತ್ತು ದಿನಾಂಕ: 29.01.2025ರಂದು ಪತ್ರ ಮುಖೇನ ತಿಳಿಸಿದ್ದರೂ, ಇಲಾಖಾ ಅಧಿಕಾರಿಗಳು ನಡವಳಿಯಂತೆ ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸದೇ ಇರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮಾಹಿತಿ ನೀಡದೇ ಇರುವ ಬಗ್ಗೆ ಸಭೆಯಲ್ಲಿ ಸೂಕ್ತ ವಿವರಣೆ ನೀಡುವಂತೆ ಸೂಚಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು" ಸಚಿವ ಸಂಪುಟದ ಉಪ ಸಮಿತಿಯ ನಡವಳಿಯ ಮೇಲೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ, ಯಾಕೆ ಕ್ರಮ ಕೈಗೊಂಡಿಲ್ಲವೆಂದು ಮಾಹಿತಿ ನೀಡಲು ಸೂಚಿಸಿದರು.

ಸಿಆಸುಇಲಾಖೆಯ ಕಾರ್ಯದರ್ಶಿಗಳು ಇಂದು ಅಪರಾಹ್ನ 2.00ಗಂಟೆಗೆ ಅನುಪಾಲನಾ ವರದಿಯನ್ನು ಇ-ಮೇಲ್ ಮೂಲಕ ಸಲ್ಲಿಸಲಾಗಿದೆ ಎಂದು ವಿವರಣೆ ನೀಡಿ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ನೀಡಿದರು.

**ವಿಷಯ:-** ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ ಆಯ್ಕೆ ಪಟ್ಟಿಯನ್ನು ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆಪಟ್ಟಿ ತಯಾರಿಸುವ ಬಗ್ಗೆ.

**ನಿರ್ಣಯ:-**

1. ದಿನಾಂಕ: 16.11.2016ರ ಸುತ್ತೋಲೆಯಂತೆ 4ನೇ ಅಂಶವನ್ನು ಮುಂದುವರಿಸುವುದು. "ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ ಆಯ್ಕೆ ಪಟ್ಟಿಯನ್ನು ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆಪಟ್ಟಿ ತಯಾರಿಸುವುದು". ಈ ಬಗ್ಗೆ ಸಿಆಸುಇಲಾಖೆ ಕೂಡಲೇ ಸ್ಪಷ್ಟವಾದ ಸುತ್ತೋಲೆ ಹೊರಡಿಸಲು ಸಮಿತಿಯು ತೀರ್ಮಾನಿಸಿರುವ ಬಗ್ಗೆ.

**ಸಿಆಸುಇಲಾಖೆಯ ಕ್ರಮ:-**

ಸಚಿವ ಸಂಪುಟ ಉಪ ಸಮಿತಿಯ ನಿರ್ಣಯವನ್ನು ಜಾರಿಗೊಳಿಸಲು ದಿನಾಂಕ 15.06.2022ರ ಸುತ್ತೋಲೆಯನ್ನು ಸಂಪೂರ್ಣವಾಗಿ ಹಿಂಪಡೆದು ದಿನಾಂಕ 16.11.2016ರ ಸುತ್ತೋಲೆಯಂತೆ 4ನೇ ಅಂಶವನ್ನು ಮುಂದಿನ ಎಲ್ಲಾ ನೇಮಕಾತಿಗಳಿಗೆ ಅನ್ವಯಿಸುವಂತೆ ಪರಿಷ್ಕೃತ ಸುತ್ತೋಲೆ ಹೊರಡಿಸಲು ಕರಡು ಸುತ್ತೋಲೆಯನ್ನು ಸಿದ್ಧಪಡಿಸಿ ಕಾನೂನು ಇಲಾಖೆಯ ಅಭಿಪ್ರಾಯಕ್ಕಾಗಿ **ದಿನಾಂಕ: 07.2.2025** ರಂದು ಸಲ್ಲಿಸಲಾಗಿತ್ತು.

ಪ್ರಸ್ತುತ ಕಡತವು ಕಾನೂನು ಇಲಾಖೆಯಿಂದ ಮಾನ್ಯ ಮುಖ್ಯ ಕಾರ್ಯದರ್ಶಿಯವರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಲಾಗಿರುತ್ತದೆ ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿಯ ಬಗ್ಗೆ ಸಮಿತಿಯ ಅಧ್ಯಕ್ಷರು, ಸದಸ್ಯರುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

**ವಿಷಯ: 2**

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 13868/2020ರಲ್ಲಿ ದಿನಾಂಕ:01.08.2023 (ತಿದ್ದುಪಡಿ ಆದೇಶದ ದಿನಾಂಕ: 26.10.2023)ರ ಅಂತಿಮ ತೀರ್ಪಿನ ಆದೇಶವನ್ನು ಅನುಷ್ಠಾನಗೊಳಿಸಿ, ಕರ್ನಾಟಕ ಸರ್ಕಾರ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಅರ್ಹರಿರುವ ಎಲ್ಲಾ ಅಧಿಕಾರಿ ಹಾಗೂ ನೌಕರರ ಜೇಷ್ಠತೆಯನ್ನು ದಿನಾಂಕ:21.01.2014ರಿಂದ ಜಾರಿಗೆ ಬರುವಂತೆ ಸೇವಾ ಜೇಷ್ಠತಾ ಪಟ್ಟಿಯನ್ನು ಮರು ಹೊಂದಾಣಿಕೆ ಮಾಡಿ ಕಾಲ್ಪನಿಕಾ ಜೇಷ್ಠತೆ ನಿಗದಿಪಡಿಸಿ Notional Seniority ಯೊಂದಿಗೆ ಮುಂಬಡ್ತಿಯನ್ನು ನೀಡಲು ಕೂಡಲೇ ಸೂಕ್ತ ಕ್ರಮವಹಿಸಲು ಸೂಚಿಸಿ ನಿರ್ಣಯಿಸಿರುವ ಬಗ್ಗೆ.

**ಸಿಆಸುಇಲಾಖೆಯ ಕ್ರಮ:**

ಸಚಿವ ಸಂಪುಟ ಉಪ ಸಮಿತಿಯ ನಿರ್ಣಯ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 01.08.2023 (ತಿದ್ದುಪಡಿ ಆದೇಶ ದಿನಾಂಕ 26.10.2023) ತೀರ್ಪಿನ ಅನ್ವಯ ಪ್ರಾಥಮಿಕ ಹಂತದ ಕ್ರಮವಾಗಿ ದಿನಾಂಕ 22.07.2024, ಸಂಖ್ಯೆ: ಸಿಆಸುಇ 145 ಆಸಸೇ 2024ರಲ್ಲಿ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ **ಸಹಾಯಕ ವೃಂದದ** ನೌಕರರ ಅರ್ಹತಾ ದಿನಾಂಕವನ್ನು ದಿನಾಂಕ 21.04.2014ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಿ ಜೇಷ್ಠತೆಯನ್ನು ಮರುಹೊಂದಾಣಿಕೆ ಮಾಡಿ ಆದೇಶಿಸಲಾಗಿದೆ. ಅದೇ ರೀತಿಯಾಗಿ ಸದರಿ ಮೀಸಲಾತಿ ಅನ್ವಯವಾಗುವ ಇನ್ನುಳಿದ ವೃಂದಗಳಿಗೂ ಅಳವಡಿಸಲು ಪರಿಶೀಲಿಸಲಾಗುತ್ತಿದೆ ಎಂಬ ಮಾಹಿತಿ ಬಗ್ಗೆ ಸಮಿತಿಯ ಅಧ್ಯಕ್ಷರು/ಸದಸ್ಯರುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು ಹಾಗೂ ಕ್ರಮವಹಿಸದ ಸಿ.ಆ.ಸು ಇಲಾಖೆ ಅಧಿಕಾರಿಗಳ ನಡತೆ ಬಗ್ಗೆ ವಿಚಾರಣೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದರು ಮತ್ತು ಮಾರ್ಚ್ 31 ರ ಒಳಗೆ ಮುಂಬಡ್ತಿ ನೀಡಲು ಸಮಿತಿಯು ಸೂಚಿಸಿತು.

**ವಿಷಯ: 3**

371ಜೆ ಭಾಗದ ರಾಜ್ಯ ವೃಂದದಲ್ಲಿ ಶೇ.8ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಿಡುತ್ತಿದ್ದು, ಜೇಷ್ಠತೆ ಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುತ್ತಿದೆ. ಇದರಿಂದಾಗಿ ರಾಜ್ಯ ವೃಂದದ ಮೀಸಲಾತಿ ಅಡಿಯಲ್ಲಿ ಬಡ್ತಿ ಪಡೆದವರ ಹುದ್ದೆಗಳು ಮುಂಬಡ್ತಿ, ನಿವೃತ್ತಿ, ಸ್ವಯಂ ನಿವೃತ್ತಿ ಅಥವಾ ಮರಣ ಮುಂತಾದ ಕಾರಣಗಳಿಂದ ಹುದ್ದೆ ಖಾಲಿಯಾಗದಿದ್ದಲ್ಲಿ, ನಂತರದ ಜೇಷ್ಠತೆಯಲ್ಲಿರುವವರಿಗೆ ಬಡ್ತಿಯ ಅವಕಾಶ ದೊರೆಯುವುದಿಲ್ಲ. ಇವರಿಗಿಂತ ಕಿರಿಯರಾದವರಿಗೆ ರಾಜ್ಯ ವಲಯದಲ್ಲಿ ಬಡ್ತಿ ದೊರೆತರು ಕಲ್ಯಾಣ ಕರ್ನಾಟಕ ಭಾಗದವರಿಗೆ ಬಡ್ತಿ ದೊರೆಯಲು ಅವಕಾಶವೇ ಇರುವುದಿಲ್ಲ.

ಆದ್ದರಿಂದ, ರಾಜ್ಯ ವೃಂದದಲ್ಲಿ ಜೇಷ್ಠತೆಯನ್ನು ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಠತೆಯನ್ನು ಪ್ರಕಟಿಸುವುದು. ಸದರಿ ಜೇಷ್ಠತೆಯಲ್ಲಿ ಅಧಿಕಾರಿ/ನೌಕರರ ಹೆಸರಿನ ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ನಮೂದಿಸುವ ರೀತಿಯಲ್ಲೇ 371ಜೆ SC, 371ಜೆ ST, 371ಜೆ ಸಾಮಾನ್ಯ, 371ಜೆ ಮಹಿಳೆ ಎಂದು ನಮೂದಿಸುವುದು ಹಾಗೂ ರಾಜ್ಯ ವೃಂದದಲ್ಲಿ ಟಾರ್ಗೆಟ್ ಮೀಸಲಾತಿ ಬದಲು ರಿಕ್ತಸ್ಥಾನ ಆಧಾರಿತ ಶೇ.8 ರಷ್ಟು ಮೀಸಲಾತಿಯನ್ನು ನಿಗದಿಪಡಿಸಲು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು 7 ದಿನದೊಳಗೆ ಮಂಡಿಸಲು ಸಚಿವ ಸಂಪುಟ ಉಪಸಮಿತಿಯು ಅನುಮೋದಿಸುವ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

**ತೀರ್ಮಾನ:-**

ದಿನಾಂಕ :17.08.2023ರ ಸಚಿವ ಸಂಪುಟ ಉಪ ಸಮಿತಿಯ ತೀರ್ಮಾನವನ್ನು ಸಿಆಸುಇಲಾಖೆ ಅನುಷ್ಠಾನಗೊಳಿಸದೇ ಕಡತವನ್ನು ಅಭಿಪ್ರಾಯಕ್ಕಾಗಿ ಕಾನೂನು ಇಲಾಖೆಗೆ ಕಳುಹಿಸಲಾಗಿದೆ ಎಂದು ಅನುಪಾಲನಾ ವರದಿ ನೀಡಿರುವ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತಪಡಿಸಿತು, ಕೂಡಲೇ ಸಿಆಸುಇಲಾಖೆ, ಕಾನೂನು ಇಲಾಖೆಯ ಅಧಿಕಾರಿಗಳು ಸಭೆ ನಡೆಸಿ ಕೂಡಲೇ ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಠತೆಯನ್ನು ಪ್ರಕಟಿಸಲು ಹಾಗೂ ಶೇಕಡ 8ರಷ್ಟು ಮೀಸಲಾತಿಗೆ ರೋಸ್ಟರ್ ಬಿಂದುಗಳನ್ನು ಗುರುತಿಸಿ ಆದೇಶ ಹೊರಡಿಸಲು ದಿನಾಂಕ :17.08.2023ರ ಸಚಿವ ಸಂಪುಟ ಉಪಸಮಿತಿಯ ಸಭೆಯಂತೆ ಕ್ರಮವಹಿಸಲು ಸೂಚಿಸಿ ನಿರ್ಣಯಿಸಿತು.

**<u>ಸಿಆಸುಇಲಾಖೆಯ ಕ್ರಮ</u>**

ಅನುಚ್ಛೇಧ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ (ಪುಟ 12-19) ಕಂಡಿಕೆ 5(1)ರಲ್ಲಿ The region for which local cadre has been organized in respect of any category of posts, shall be a **separate unit for the purposes of recruitment, appointment, seniority, promotion and transfer** and such other matters as may be specified by the State Government in respect of that category of posts. ಎಂದಿರುತ್ತದೆ. ಸದರಿ ಕಂಡಿಕೆಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-(ಪುಟ 20-29) ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮ 2013ನ್ನು ಹೊರಡಿಸಲಾಗಿದ್ದು, ಸದರಿ ನಿಯಮಗಳ ನಿಯಮ 4ರಲ್ಲಿ The Residual Parent Cadre and the Local Cadre carved out of it, shall be treated as separate unit for the purpose of recruitment, appointment, seniority, promotion and for operation of reservation. Two parallel roster cycles shall be operated for the residual parent cadre and the local cadre ಎಂದಿರುತ್ತದೆ.
ಮುಂದುವರೆದು, ನಿಯಮ 7(1)ರಲ್ಲಿ The Competent Authority shall maintain separate seniority, in each local cadre and Residuary Parent Cadre. ಎಂದು ತಿಳಿಸಲಾಗಿರುತ್ತದೆ. ಅದೇ ರೀತಿ ನಿಯಮ 7(4)ರಲ್ಲಿ The Cadre Controlling Authority may also maintain a joint seniority list in the orginal parent cadre ಎಂದು ತಿಳಿಸಲಾಗಿರುತ್ತದೆ.

ಒಂದೇ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವುದಕ್ಕೆ ಸಂಬಂಧಿಸಿದಂತೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿದ್ದು, ಈ ಕೆಳಗಿನಂತಿರುತ್ತದೆ.

> "By bringing common seniority list from 06.11.2023 there may be chances that some of the officials may have to be reverted so to save the institutions from uncalled for litigation, it is better to continue present rule."

**ಈ ಹಿನ್ನೆಲೆಯಲ್ಲಿ ಪ್ರಸ್ತುತ ಇರುವ ನಿಯಮಗಳನ್ನೇ ಮುಂದುವರೆಸುವುದು ಸೂಕ್ತವಾಗಿರುತ್ತದೆ.**

ಈಗಾಗಲೇ ಎಲ್ಲಾ ಇಲಾಖೆಗಳಲ್ಲಿ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳ ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಮುಂಬಡ್ತಿಗಳನ್ನು ನೀಡಲಾಗುತ್ತಿದ್ದು, ಪುನಃ ಒಂದೇ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ನಿರ್ಣಯ ಕೈಗೊಂಡಲ್ಲಿ, ಈಗಾಗಲೇ ಮಾಡಲಾಗಿರುವ ಮುಂಬಡ್ತಿಗಳಲ್ಲಿ ವ್ಯತ್ಯಾಸಗಳಾಗುವ ಸಾಧ್ಯತೆಗಳು ಹೆಚ್ಚಾಗಿದ್ದು ಎಲ್ಲಾ ಇಲಾಖೆಗಳಲ್ಲಿ ನ್ಯಾಯಾಲಯ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಯಿರುತ್ತದೆ ಎಂದು ವರದಿ ಮಾಡಿರುವುದನ್ನು ಸಮಿತಿಯು ಪರಿಶೀಲಿಸಿತು.

ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರು ಸಚಿವ ಸಂಪುಟ ಉಪ ಸಮಿತಿಯು ಕೈಗೊಂಡ ನಿರ್ಣಯಗಳನ್ನು ಪಾಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸದಿರುವುದನ್ನು ಗಂಭೀರವಾಗಿ ಪರಿಗಣಿಸಿ ಯೋಜನಾ ಇಲಾಖೆಯು ವಿವಿಧ ದಿನಾಂಕಗಳಂದು ಪತ್ರ ಬರೆದಿದ್ದರೂ, ಸಿಆಸುಇಲಾಖೆಯು ಕ್ರಮವಹಿಸದೇ ಸಮಿತಿಯ ನಿರ್ಣಯವನ್ನು ನಿರ್ಲಕ್ಷಿಸಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತದೆ ಹೀಗಾದರೆ, ಇಲಾಖಾ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು ಹಾಗೂ ನ್ಯಾಯಾಲಯದ ಆದೇಶದಂತೆ ಹಾಗೂ ಸಮಿತಿಯ ನಿರ್ಣಯದಂತೆ ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ 2025ರ ಮಾರ್ಚ್ 31ರೊಳಗಾಗಿ ಸೂಕ್ತ ಆದೇಶಗಳನ್ನು ಹೊರಡಿಸಲು ಸೂಚಿಸಲಾಯಿತು.

***(ಕ್ರಮ: ಸರ್ಕಾರದ ಕಾರ್ಯದರ್ಶಿ,<br>ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ)***

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ:**

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ನಡವಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅನುಪಾಲನಾ ವರದಿ ಸಲ್ಲಿಸದೇ ಇರುವ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತಪಡಿಸಿತು ಹಾಗೂ ಸಭೆಯಲ್ಲಿ ಹಾಜರಿದ್ದ ಅಪರ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಲಬುರಗಿ ರವರು ನೀಡಿದ ಅಸ್ಪಷ್ಟ ಮಾಹಿತಿ ಬಗ್ಗೆ ಸಮಿತಿಯು ಆಕ್ಷೇಪಿಸಿ ಕೂಡಲೇ ನಿಖರ ಮಾಹಿತಿ ಪಡೆದು ಸಮಿತಿಗೆ ಸಲ್ಲಿಸಲು ಸೂಚಿಸಿತು. ತದನಂತರ ಸಭೆಗೆ ಹಾಜರಾದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರು ಕಳೆದ ಮೂರು ದಿನಗಳ ಹಿಂದೆ ಮಾಹಿತಿಗಳನ್ನು ಇಂಧೀಕರಿಸಲಾಗಿದೆ, ಮತ್ತೊಮ್ಮೆ ಪರಿಶೀಲಿಸಿ ಸಮಿತಿಗೆ ನಿಖರ ಮಾಹಿತಿಯನ್ನು ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿ ಆಧರಿಸಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 15000 ಶಿಕ್ಷಕರ ಹುದ್ದೆಗಳು ಖಾಲಿ ಇರುವ ಬಗ್ಗೆ ಮಾಹಿತಿ ಇದ್ದು, ನಿಖರ ಮಾಹಿತಿಯನ್ನು ಸಲ್ಲಿಸಲು ಸಮಿತಿಯು ಸೂಚಿಸಿತು ಹಾಗೂ ಕಲ್ಯಾಣ ಕರ್ನಾಟಕ ಭಾಗಕ್ಕೆ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಉಚ್ಛ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ ಅಡ್ವಕೇಟ್ ಜನರಲ್‌ರವರೊಂದಿಗೆ ಚರ್ಚಿಸಿ

ಸೂಕ್ತ ಕ್ರಮವಹಿಸಲು ಹಾಗೂ ಶಿಕ್ಷಕರ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಯಿತು.

ಯೋಜನಾ ಇಲಾಖೆಯು ಪತ್ರ ಸಂಖ್ಯೆ: ಪಿಡಿಎಸ್/101/ಹೆಚ್‌ಕೆಡಿ/2023, ದಿನಾಂಕ: 02.02.2024 ಮತ್ತು ದಿನಾಂಕ: 18.05.2024ರಂದು ಮತ್ತು ದಿನಾಂಕ: 29.01.2025ರಂದು ಪತ್ರ ಮುಖೇನ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದ್ದರೂ ಕೈಗೊಂಡಿರುವ ಕ್ರಮಗಳ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಅನುಪಾಲನಾ ವರದಿ ನೀಡಿರುವುದಿಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ <u>ಕಾರಣ ಕೇಳುವ ನೋಟಿಸ್</u> ನೀಡಲು ಸೂಚಿಸಲಾಯಿತು. ಸಭೆಯಲ್ಲಿ ಹಾಜರಿದ್ದ, ಅಪರ ಆಯುಕ್ತರು, ಕಲಬುರಗಿ ವಿಭಾಗ ರವರು ಮಾಹಿತಿ ನೀಡಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಆಧರಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿದ ನಂತರ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿ ಬಗ್ಗೆ ಆಕ್ಷೇಪಿಸಿದ ಸಮಿತಿಯು ಸಂಪೂರ್ಣ ವಿವರಣೆಯ ಪಡೆಯಲು ಸೂಚಿಸಿ ನಿರ್ಣಯಿಸಿತು.

***(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು<br>ಸರ್ಕಾರದ ಕಾರ್ಯದರ್ಶಿ,<br>ಯೋಜನಾ ಇಲಾಖೆ)***

**<u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-</u>**

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ನಡವಳಿ ಮೇಲೆ ಕೈಗೊಂಡಿರುವ ಕ್ರಮಗಳ ಮೇಲೆ ಅನುಪಾಲನಾ ವರದಿಯನ್ನು ಸಮಿತಿಯು ಪರಿಶೀಲಿಸಿತು, 371ಜೆ ಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿರುವ ಬಗ್ಗೆ ಹಾಗೂ ಮುಂಬಡ್ತಿ ನೀಡಿರುವ ಬಗ್ಗೆ ಪೂರ್ಣ ವಿವರಗಳನ್ನು ನಿಖರವಾಗಿ ಗೂಗಲ್‌ಶೀಟ್ ನಲ್ಲಿ ಅಳವಡಿಸಲು ಮತ್ತೊಮ್ಮೆ ಸೂಚಿಸಲಾಯಿತು ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು ವಿವಿಧ ಹುದ್ದೆಗಳ ಭರ್ತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆದಷ್ಟು ಶೀಘ್ರದಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು, ವಿಳಂಬಕ್ಕೆ ಅವಕಾಶವಿಲ್ಲದೇ ಶೀಘ್ರವಾಗಿ ಕ್ರಮವಹಿಸಲು ಸಮಿತಿಯು ಸೂಚಿಸಿತು.

ಯೋಜನಾ ಇಲಾಖೆಯು ಪತ್ರ ಸಂಖ್ಯೆ: ಪಿಡಿಎಸ್/101/ಹೆಚ್‌ಕೆಡಿ/2023, ದಿನಾಂಕ: 02.02.2024 ಮತ್ತು ದಿನಾಂಕ: 18.05.2024ರಂದು ಮತ್ತು ದಿನಾಂಕ: 29.01.2025ರಂದು ಪತ್ರ ಮುಖೇನ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದ್ದರೂ ಕೈಗೊಂಡಿರುವ ಕ್ರಮಗಳ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಅನುಪಾಲನಾ ವರದಿ ನೀಡಿರುವುದಿಲ್ಲದಿರುವ ಬಗ್ಗೆ ಸಭೆಯು ತೀವ್ರವಾಗಿ ಆಕ್ಷೇಪಿಸಿತು. ಸಭೆಯಲ್ಲಿ ಹಾಜರಿದ್ದ, ಮುಖ್ಯಾಡಳಿತಾಧಿಕಾರಿರವರು ನೇಮಕಾತಿಯ ಪ್ರಕ್ರಿಯೆಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಿದರು. ಎಷ್ಟು

ಹುದ್ದೆಗಳು ಖಾಲಿ ಇವೆ ಎಂದು ಸಮಿತಿಯು ಕೇಳಿದಾಗ ಮಾಹಿತಿ ನೀಡಲು ವಿಫಲರಾದರು. ಸದರಿ ಸಂದರ್ಭದಲ್ಲಿ ನಿರ್ದೇಶಕರು, ಯೋಜನಾ ಇಲಾಖೆರವರು ಮಾಹಿತಿ ನೀಡಿ 8248 ಹುದ್ದೆಗಳು ಮಂಜೂರಾಗಿದ್ದು, 7955 ಹುದ್ದೆಗಳು ಭರ್ತಿಯಾಗಿದ್ದು, 293 ಹುದ್ದೆಗಳು ಬಾಕಿ ಇರುತ್ತದೆ ಎಂದು ಮಾಹಿತಿ ನೀಡಿದಾಗ ಸಭೆಯಲ್ಲಿ ಹಾಜರಿದ್ದ ಅಧಿಕಾರಿಯವರು ಸದರಿ ಮಾಹಿತಿ ಆಧರಿಸಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು ಸಭೆಯು ಕೂಡಲೇ ನೇಮಕಾತಿ ಮಾಡಿಕೊಳ್ಳಲು ಸೂಚಿಸಿತು.

***(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)***

**ಸಾರಿಗೆ ಇಲಾಖೆ:-**

ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ ರವರು 371ಜೆ ರಡಿ ಸಾರಿಗೆ ಇಲಾಖೆಯಲ್ಲಿ ನೇರ ನೇಮಕಾತಿಯಡಿ 296 ಹುದ್ದೆಗಳು ಹಾಗೂ ಮುಂಬಡ್ತಿಯಡಿ 270 ಹುದ್ದೆಗಳು ಭರ್ತಿ ಮಾಡಲು ಬಾಕಿ ಇದ್ದು, ಇರುವ ವಾಹನ ಚಾಲಕರು ಕಂ ನಿರ್ವಾಹಕರ ಹುದ್ದೆಗಳನ್ನು KEA ಮೂಲಕ ಭರ್ತಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ಮಾಹಿತಿ ನೀಡಿದರು ಹಾಗೂ ಮುಂಬಡ್ತಿಯಡಿ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಬಾಕಿಯಿದ್ದ 270 ಮುಂಬಡ್ತಿ ಹುದ್ದೆಗಳ ಪೈಕಿ 123 ಹುದ್ದೆಗಳಿಗೆ ಈಗಾಗಲೇ ಮುಂಬಡ್ತಿ ನೀಡಲಾಗಿರುತ್ತದೆ. ಉಳಿದ 147 ಹುದ್ದೆಗಳ ಮುಂಬಡ್ತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅವುಗಳಲ್ಲಿ ದರ್ಜೆ-1, ದರ್ಜೆ-2 ಮತ್ತು ಮೇಲ್ವಿಚಾರಕ ಹುದ್ದೆಗಳ ಮುಂಬಡ್ತಿಗೆ ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇದ್ದು, ತಡೆಯಾಜ್ಞೆ ತೆರವುಗೊಂಡ ನಂತರ ಮುಂಬಡ್ತಿಗೆ ಕ್ರಮವಹಿಸಲಾಗುವುದು. ಮುಂದುವರೆದು, ನೇರ ನೇಮಕಾತಿಯಡಿ 300 ಹುದ್ದೆಗಳಿಗೆ ಸರ್ಕಾರದಿಂದ ಅನುಮೋದನೆ ದೊರೆತಿದ್ದು, ನೇಮಕಾತಿಗೆ ಜಾಹೀರಾತು ಹೊರಡಿಸುವ ಮತ್ತು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ವರದಿ ಮಾಡಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿದ ಸಮಿತಿಯು ಕೂಡಲೇ ಅಗತ್ಯ ಕ್ರಮವಹಿಸಲು ಸೂಚಿಸಿತು.

**ಉನ್ನತ ಶಿಕ್ಷಣ ಇಲಾಖೆ:-**

ಉನ್ನತ ಶಿಕ್ಷಣ ಇಲಾಖೆಯಲ್ಲಿ ನೇರ ನೇಮಕಾತಿಯಡಿ 1783 ಹಾಗೂ ಮುಂಬಡ್ತಿಯಡಿ 540 ಹುದ್ದೆಗಳು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆರವರು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.

ಉನ್ನತ ಶಿಕ್ಷಣ ಇಲಾಖೆಯು 371ಜೆ ಸಚಿವ ಸಂಪುಟ ಉಪ ಸಮಿತಿಯ ನಡವಳಿಯಂತೆ ಕ್ರೋಢೀಕೃತ ಅನುಪಾಲನಾ ವರದಿಯನ್ನು ಸಲ್ಲಿಸಿರುವುದಿಲ್ಲ. ಆದರೆ, ಅಕ್ಕಮಹಾದೇವಿ ಮತ್ತು ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದಿಂದ ಸ್ವೀಕೃತವಾಗಿರುವ ವರದಿಗಳನ್ನು ಈ ಮುಂದಿನಂತೆ ನೀಡಲಾಗಿದೆ.

1. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು 371ಜೆ ರಡಿಯಲ್ಲಿ ಖಾಲಿ ಉಳಿದಿರುವ ಭೋದಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಗಾಗಿ ದಿನಾಂಕ: 28.11.2023ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅದರಂತೆ 2 ಭೋದಕೇತರ ಹುದ್ದೆಗಳನ್ನು ನೇರ ನೇಮಕಾತಿಯಲ್ಲಿ ಭರ್ತಿ ಮಾಡಿಕೊಳ್ಳುವ ಕುರಿತು ದಿನಾಂಕ: 04.01.2024ರಂದು ಆಯವ್ಯಯದಲ್ಲಿ ಸೂಕ್ತ ಅನುದಾನವನ್ನು ಕಲ್ಪಿಸಿ ಕೊಡುವಂತೆ ಆರ್ಥಿಕ ಇಲಾಖೆ, ಬೆಂಗಳೂರು ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯರವರು ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ 54 ಭೋದಕ , 70 ಭೋದಕೇತರ ಹುದ್ದೆಗಳು ಖಾಲಿ ಇದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುವುದಿಲ್ಲ. 371ಜೆ ಹಾಗೂ 371ಜೆ ಯೇತರ ಹುದ್ದೆಗಳ ವೃಂದ ವಿಂಗಡಣೆ ಅಧಿಸೂಚನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ ವೃಂದ ವಿಂಗಡಣೆ ಅಧಿಸೂಚನೆ ಅನುಮೋದನೆ ನಂತರ ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ವರದಿ ಮಾಡಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿದ ಸಮಿತಿಯು ಕೂಡಲೇ ಅಗತ್ಯ ಕ್ರಮವಹಿಸಲು ಸೂಚಿಸಿತು.

**ಇಂಧನ ಇಲಾಖೆ:-**

ಇಂಧನ ಇಲಾಖೆಯಲ್ಲಿ ನೇರ ನೇಮಕಾತಿಯಡಿ 1688 ಹಾಗೂ ಮುಂಬಡ್ತಿಯಡಿ 64 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ, ಇಂಧನ ಇಲಾಖೆಯ ಅಧಿಕಾರಿಗಳು ಮಾತನಾಡುತ್ತಾ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಹಾಗೂ ಪ್ರಸ್ತುತ 167 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಲೈನ್‌ಮಾನ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ಇಂಧನ ಇಲಾಖೆಯು ನೀಡಿರುವ ಅನುಪಾಲನಾ ವರದಿಯನ್ನು ಸಮಿತಿಯು ಪರಿಶೀಲಿಸಿತು.

**ಒಳಾಡಳಿತ ಇಲಾಖೆ:-**

ಗೃಹ ಇಲಾಖೆಯಲ್ಲಿ ನೇರ ನೇಮಕಾತಿಯಡಿ 2532 ಹಾಗೂ ಮುಂಬಡ್ತಿಯಡಿ 390 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಗೃಹ ಇಲಾಖೆಯ ಅಧಿಕಾರಿಯವರು ಮಾತನಾಡುತ್ತಾ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಹಾಗು ದಿನಾಂಕ: 17.08.2023ರ ಸಭೆಯಲ್ಲಿ ನಿರ್ಣಯವಾದ ವಿವಿಧ 371ಜೆಗೆ ಸಂಬಂಧಿಸಿದ ಅರ್ಜಿಗಳ ಕುರಿತು ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಿದರು.

ಸಭೆಯು ಗೃಹ ಇಲಾಖೆಯ ಕಾರ್ಯವೈಖರಿ ಹಾಗೂ ಸಮಂಜಸವಾದ ಮಾಹಿತಿ ಇಲ್ಲದೇ ಅಧಿಕಾರಿಗಳು ಕೋರಿರುವ ಮಾಹಿತಿ ಬಿಟ್ಟು ಬೇರೆ ಮಾಹಿತಿ ನೀಡುವ ಬಗ್ಗೆ ತೀವ್ರವಾಗಿ ಆಕ್ಷೇಪಿಸಿ ಪಿ.ಎಸ್.ಐಗಳ ನೇಮಕಾತಿಯಲ್ಲಿ ತಡೆಹಿಡಿದಿರುವ 40 ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮವಹಿಸಲು ಸೂಚಿಸಿತು ಹಾಗೂ ಗೃಹ ಇಲಾಖೆಯು ಎಲ್ಲಾ

ವಿಭಾಗಗಳ ವರದಿಗಳನ್ನು ಕ್ರೋಢೀಕರಿಸಿ ಕೈಗೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿತು.

***(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ)***

**ಸಹಕಾರ ಇಲಾಖೆ:-**

ಸಹಕಾರ ಇಲಾಖೆಯಲ್ಲಿ ನೇರ ನೇಮಕಾತಿಯಡಿ 481 ಹಾಗೂ ಮುಂಬಡ್ತಿಯಡಿ 176 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ, ಇಲಾಖಾ ಅಧಿಕಾರಿಗಳು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ತಿಳಿಸಿದರು. ಮುಂದುವರೆದು ಸಹಕಾರ ಇಲಾಖೆಯಡಿ ಬರುವ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ರಾಜ್ಯ ವ್ಯಾಪಿ ವೃಂದದಲ್ಲಿ ಬರುವ ಶೇಕಡ 8ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗದವರಿಗೆ ನಿಗದಿಪಡಿಸುವ ಕುರಿತು ಪರಿಶೀಲಿಸಿ ಮುಂದಿನ ಸಭೆಗೆ ಮಾಹಿತಿ ನೀಡುವಂತೆ ಇಲಾಖಾ ಕಾರ್ಯದರ್ಶಿಗಳಿಗೆ ಸಭೆಯು ಸೂಚಿಸಿತು.

ಆದರೆ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ ಚಾಮರಾಜಪೇಟೆ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನೌಕರರ ಸಾಮಾನ್ಯ ಶ್ರೇಣಿ ಸಮಿತಿಯಿಂದ ಸ್ವೀಕೃತವಾಗಿರುವ ವರದಿಗಳನ್ನು ಈ ಮುಂದಿನಂತೆ ನೀಡಲಾಗಿದೆ.

1. ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿಯಮಿತ ಚಾಮರಾಜಪೇಟೆ ರವರು 371ಜೆ ರನ್ವಯಪ್ರಾದೇಶಿಕ ಮತ್ತು ರಾಜ್ಯ ಮಟ್ಟದ ನೇರ ನೇಮಕಾತಿ ಅಡಿಯಲ್ಲಿ ಬಿ ವೃಂದದಲ್ಲಿ 8, ಸಿ ವೃಂದದಲ್ಲಿ 15, ಡಿ ವೃಂದದಲ್ಲಿ 27 ಹುದ್ದೆಗಳನ್ನು ಗುರುತಿಸಲಾಗಿದ್ದು, ಈಗಾಗಲೇ ಬಿ ವೃಂದದಲ್ಲಿ 4, ಸಿ ವೃಂದದಲ್ಲಿ 11, ಡಿ ವೃಂದದಲ್ಲಿ 4 ಒಟ್ಟು 19 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಬಾಕಿ 8 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ. ಅದೇ ರೀತಿ ಮುಂಬಡ್ತಿಯಲ್ಲಿ 10 ಹುದ್ದೆಗಳನ್ನು ಗುರುತಿಸಲಾಗಿದ್ದು, ಬಿ ಮತ್ತು ಸಿ ವೃಂದದಲ್ಲಿ ತಲಾ 1ರಂತೆ 2 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದಂತೆ ಬಿ ವೃಂದದಲ್ಲಿ 2, ಸಿ ವೃಂದದಲ್ಲಿ 6 ಹುದ್ದೆಗಳಿಗೆ ಮುಂಬಡ್ತಿ ನೀಡುವುದು ಬಾಕಿ ಇರುತ್ತದೆ ಎಂದು ವರದಿ ಮಾಡಿರುತ್ತಾರೆ.
2. ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನೌಕರರ ಸಾಮಾನ್ಯ ಶ್ರೇಣಿ ಸಮಿತಿಯು ಯಾವುದೇ ಪಾಲನಾ ವರದಿ ಇರುವುದಿಲ್ಲವೆಂದು ವರದಿ ಮಾಡಿರುತ್ತಾರೆ.
3. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತವು ಸರ್ಕಾರದ ಯಾವುದೇ ನಿಯಂತ್ರಣಕ್ಕೆ ಒಳಪಡದ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ 371ಜೆ ಮೀಸಲಾತಿ ನಿಯಮವು ಅನ್ವಯಿಸುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

**ಸಮಿತಿಯ ಆಕ್ಷೇಪ:-**

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತವು 371ಜೆ ಮೀಸಲಾತಿ ಅನ್ವಯಿಸುವುದಿಲ್ಲ ಎಂದು ವರದಿ ಮಾಡಿರುವುದನ್ನು ಸಚಿವ ಸಂಪುಟ ಉಪ ಸಮಿತಿಯು

ಗಂಭೀರವಾಗಿ ಪರಿಗಣಿಸಿತು ಹಾಗೂ ಸಹಕಾರಿ ಇಲಾಖೆಯಿಂದ ಯಾವುದೇ ಅಧಿಕಾರಿಗಳು ಹಾಜರಾಗದೇ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳುವ ನೋಟಿಸ್ ನೀಡಲು ಸಮಿತಿಯು ಸೂಚಿಸಿತು.

***(ಕ್ರಮ: ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ)***

**ಲೋಕೋಪಯೋಗಿ ಇಲಾಖೆ:-**

ಲೋಕೋಪಯೋಗಿ ಇಲಾಖೆಯಲ್ಲಿ ನೇರ ನೇಮಕಾತಿಯಡಿ 15 ಹಾಗೂ ಮುಂಬಡ್ತಿಯಡಿ 11 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಇಲಾಖಾ ಅಧಿಕಾರಿಗಳು ಮುಂಬಡ್ತಿಯಡಿ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

**ಕ್ರಮ:**

1. ಗ್ರೂಪ್-ಬಿ ವೃಂದದಲ್ಲಿ 04 ಹುದ್ದೆಗಳನ್ನು ಮುಂಬಡ್ತಿ ಮಾಡಬೇಕಾಗಿದ್ದು, ಈ ಪೈಕಿ 02 ನಿಬಂಧಕರ ಹುದ್ದೆಗಳನ್ನು ಹಾಗೂ 01 ಲೆಕ್ಕ ಪರಿಶೋಧನಾಧಿಕಾರಿ ಹುದ್ದೆ ಸೇರಿದಂತೆ ಒಟ್ಟು 03 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.

   ಉಳಿದ 01 ಗ್ರೂಪ್ ಬಿ ಹುದ್ದೆಯನ್ನು ಮುಂಬಡ್ತಿಯ ಮೂಲಕ ತುಂಬಲು ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ವರದಿ ಮಾಡಿರುತ್ತಾರೆ.

2. ಲೋಕೋಪಯೋಗಿ ಇಲಾಖೆಯಲ್ಲಿ ನೇರ ನೇಮಕಾತಿಯಡಿ 15 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಈ ಪೈಕಿ ಗ್ರೂಪ್ ಎ ವೃಂದದ 12 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ (ಆರ್‌ಪಿಸಿ) ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ದಿನಾಂಕ: 02.12.2024ರಂದು ಸಲ್ಲಿಸಲಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

   ಮುಂದುವರೆದು, ಗ್ರೂಪ್- ಸಿ ವೃಂದದ 03 ಶೀಘ್ರಲಿಪಿಗಾರರು ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾಗಿದ್ದು, ಆದರೆ ಸದರಿ ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಂತೆ ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿದ್ದು, ಅದರಂತೆ ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.

ಲೋಕೋಪಯೋಗಿ ಇಲಾಖೆಯ ಮಾಡಿರುವ ವರದಿಯನ್ನು ಸಮಿತಿಯು ಪರಿಶೀಲಿಸಿತು ಕೂಡಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಆನ್‌ಲೈನ್ ಮೂಲಕ ಪ್ರಸ್ತಾವನೆ ಸಲ್ಲಿಸಲು ಸಮಿತಿಯು ಸೂಚಿಸಿತು.

***(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)***

**ಕೈಗಾರಿಕೆ ಇಲಾಖೆ:-**

ಕೈಗಾರಿಕೆ ಇಲಾಖೆಯ MSME ಅಡಿ ನೇರ ನೇಮಕಾತಿಯಡಿ 793 ಹಾಗೂ ಮುಂಬಡ್ತಿಯಡಿ 556 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಇಲಾಖಾ ಅಧಿಕಾರಿಗಳು ವೃಂದ ಮತ್ತು ನೇಮಕಾತಿ ತಿದ್ದುಪಡಿಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಕ್ರಮವಹಿಸುವುದಾಗಿ ಸಭೆಗೆ ಮಾಹಿತಿಯನ್ನು ನೀಡಿದರು. ಸದರಿ ಮಾಹಿತಿಯನ್ನು ಪರಿಶೀಲಿಸಿದ ಸಮಿತಿಯು ದೀರ್ಘಕಾಲಾವಕಾಶವನ್ನು ತೆಗೆದುಕೊಳ್ಳದೇ ಶೀಘ್ರದಲ್ಲಿ ಕ್ರಮವಹಿಸಲು ಸೂಚಿಸಿತು ಮತ್ತು ಅನುಪಾಲನಾ ವರದಿಯನ್ನು ಸಭೆಯಲ್ಲಿ ನೀಡಿರುವುದನ್ನು ಸಮಿತಿಯು ತೀವ್ರವಾಗಿ ಆಕ್ಷೇಪಿಸಿತು ಹಾಗೂ ಇನ್ನೂ ಮುಂದೆ ನಿಗದಿತ ಕಾಲಾವಧಿಯಲ್ಲಿ ಕ್ರಮ ಕೈಗೊಂಡು ವರದಿ ಸಲ್ಲಿಸಲು ಸಮಿತಿಯು ಸೂಚಿಸಿತು.

***(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೈಗಾರಿಕೆ ಇಲಾಖೆ)***

**ದಿನಾಂಕ: 04.01.2024ರಂದು ನಡೆದ ಸಭೆಯಲ್ಲಿ ಸಮಿತಿಯು ಕೈಗೊಂಡ ಇತರೆ ನಿರ್ಣಯಗಳು:-**

1.ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಪ್ರಕ್ರಿಯೆಗಳ ಪರಿಶೀಲಿಸಲು ಪ್ರತ್ಯೇಕ ಸಭೆ ಕರೆಯಲು ಸಭೆಯಲ್ಲಿ ನಿರ್ಣಯಿಸಿತು. ಈ ಬಗ್ಗೆ ಯೋಜನಾ ಇಲಾಖೆಗೆ ಪ್ರತ್ಯೇಕ ಕಡತದಲ್ಲಿ ದಿನಾಂಕ ಮತ್ತು ಸಮಯದ ವಿವರಗಳನ್ನು ಪಡೆಯಲು ಸಮಿತಿಯು ಸೂಚಿಸಿತು.

**ಕ್ರಮ:** ದಿನಾಂಕ: 10.01.2025ರಂದು ಸಭೆಯನ್ನು ನಡೆಸಿರುವುದನ್ನು ಪರಿಶೀಲಿಸಲಾಯಿತು.

2.ವಿಜಯನಗರ ಜಿಲ್ಲೆಯನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿಸಿ ಸೇರ್ಪಡೆ ಆದೇಶ ಹೊರಡಿಸಲು (ಬಳ್ಳಾರಿ ಜಿಲ್ಲೆ ಎಂದು ಇರುವುದನ್ನು) ಸಿಆಸುಇಲಾಖೆಗೆ ಸೂಚಿಸಿ ನಿರ್ಣಯಿಸಿತು.

**ಕ್ರಮ:** ಸಿಆಸುಇಲಾಖೆಯಿಂದ ಆದೇಶ ಹೊರಡಿಸಿರುವುದನ್ನು ಪರಿಶೀಲಿಸಲಾಯಿತು.

3.ವಿಧಾನಸಭೆ /ವಿಧಾನಪರಿಷತ್ತಿನ ಸಚಿವಾಲಯಗಳಲ್ಲಿ 371ಜೆ ಮೀಸಲಾತಿ ಅಳವಡಿಸಿರುವ ಬಗ್ಗೆ ಪೂರ್ಣ ವಿವರ ಪಡೆಯಲು ನಿರ್ಣಯಿಸಲಾಯಿತು.

**ಕ್ರಮ:** ವಿಧಾನ ಪರಿಷತ್ ವತಿಯಿಂದ ಕ್ರಮ ಕೈಗೊಂಡಿರುವುದನ್ನು ಪರಿಶೀಲಿಸಲಾಯಿತು.

ಕರ್ನಾಟಕ ವಿಧಾನ ಸಭಾ ಸಚಿವಾಲಯದಲ್ಲಿ 371ಜೆ ಅನುಚ್ಛೇದ ರಡಿ ನೇರ ನೇಮಕಾತಿಯಡಿ ಗುರುತಿಸಿರುವ ಸಿ-ಗುಂಪುಗಳ ಹುದ್ದೆಗಳ ಸಂಖ್ಯೆ 20 ಇದ್ದು, ಇವುಗಳಲ್ಲಿ

14 ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಉಳಿದ 06 ಹುದ್ದೆಗಳು ಖಾಲಿ ಇದ್ದು, ಇವುಗಳನ್ನು ಭರ್ತಿಮಾಡಲು ದಿನಾಂಕ:14.03.2024ರಂದು ಅರ್ಜಿಗಳನ್ನು ಆಹ್ವಾನಿಸಿರುವುದನ್ನು ಪರಿಶೀಲಿಸಲಾಯಿತು. ಕೂಡಲೇ ನಿಯಮಾನುಸಾರ ನೇಮಕಾತಿ ಮಾಡಲು ಅಗತ್ಯ ಕ್ರಮವಹಿಸಲು ಸಮಿತಿಯು ಸೂಚಿಸಲಾಯಿತು.

***(ಕ್ರಮ: ಕಾರ್ಯದರ್ಶಿ, ವಿಧಾನ ಸಭೆ)***

3. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಅಡುಗೆಯವರಿಗೆ ಮುಂಬಡ್ತಿ ನೀಡುವಾಗ ಶೇಕಡ 8 ರಷ್ಟು ಮೀಸಲಾತಿ ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಯಿತು.

**<u>ಕ್ರಮ:</u>** ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಡುಗೆ ಸಹಾಯಕರಿಗೆ ಅಡುಗೆಯವರ ವೃಂದಕ್ಕೆ ಮುಂಬಡ್ತಿ ನೀಡುವಾಗ ಶೇ.8ರಷ್ಟು ಮೀಸಲಾತಿ ಪಾಲಿಸಲಾಗುತ್ತಿದೆ ಎಂದು ವರದಿ ಮಾಡಲಾಗಿದ್ದು, ಪಾಲಿಸಿರುವ ಬಗ್ಗೆ ಸೂಕ್ತ ಆದೇಶಗಳ ಪ್ರತಿಯನ್ನು ಸಲ್ಲಿಸಲು ಸಮಿತಿಯು ಸೂಚಿಸಲಾಯಿತು.

4. ಕರ್ನಾಟಕ ವಿದ್ಯುತ್ ಶಕ್ತಿ ಕಾರ್ಖಾನೆಯಲ್ಲಿ ಶ್ರೀ ಸಿದ್ದನಗೌಡ ಸೀನಿಯರ್ ಹೈಸ್ಕಿಲ್ ವರ್ಕರ್ ಹುದ್ದೆಯಿಂದ ಅದೇ ಹುದ್ದೆಗೆ ಬಡ್ತಿ ನೀಡಿರುವ ಬಗ್ಗೆ ಆಕ್ಷೇಪಿಸಿ ಕೂಡಲೇ ಆಗಿರುವ ತಪ್ಪನ್ನು ಸರಿಪಡಿಸಿ ಜೂನಿಯರ್ ಚಾರ್ಜ್‌ಮೇನ್ ಹುದ್ದೆಗೆ ಮುಂಬಡ್ತಿ ನೀಡಲು ಸೂಚನೆ ನೀಡಲಾಯಿತು.

**<u>ಕ್ರಮ:</u>** ಸಮಿತಿಯ ನಿರ್ಣಯದಂತೆ ಕ್ರಮವಹಿಸಿರುವುದನ್ನು ಪರಿಶೀಲಿಸಲಾಯಿತು.

5. **371 ಜೆ ಅನುಷ್ಠಾನ ಕೋಶದ ಸಿಬ್ಬಂದಿಗಳನ್ನು ಯೋಜನಾ ಇಲಾಖೆಗೆ ವರ್ಗಾಯಿಸುವ ಬಗ್ಗೆ.**

ಈ ಹಿಂದೆ 371 ಜೆಗೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ಸಿಆಸುಇ ಇಲಾಖೆಯ ಹೈ-ಕ ವಿಶೇಷ ಕೋಶವು ಕಾರ್ಯನಿರ್ವಹಣೆಯನ್ನು ಮಾಡಲಾಗುತ್ತಿತ್ತು. ಸದರಿ ಕೋಶವನ್ನು ವಿಸರ್ಜಿಸಿ ಯೋಜನಾ ಇಲಾಖೆಯ ಸ್ವಾಧೀನಕ್ಕೆ ಎಲ್ಲಾ ಕೆಲಸಗಳನ್ನು ವರ್ಗಾಯಿಸಲಾಗಿರುತ್ತದೆ. ಪ್ರಸ್ತುತ ಯೋಜನಾ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆಯಿರುವುದರಿಂದ ಈ ಹಿಂದೆ ಸಿಆಸುಇ ಇಲಾಖೆಯ ಹೈ-ಕ ವಿಶೇಷ ಕೋಶದಲ್ಲಿ ಮಂಜೂರಾಗಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳನ್ನು ಯೋಜನಾ ಇಲಾಖೆಯ ವಶಕ್ಕೆ ನೀಡುವ ಬಗ್ಗೆ ಉಪ ಸಮಿತಿಯ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿತು.

**<u>ಕ್ರಮ:</u>** ದಿನಾಂಕ: 04.01.2024ರ ಸಭೆಯ ನಿರ್ಣಯದಂತೆ ಸಿಆಸುಇಲಾಖೆಯ ಹೈ-ಕ ವಿಶೇಷ ಕೋಶದಲ್ಲಿ ಮಂಜೂರಾಗಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳನ್ನು ಯೋಜನಾ ಇಲಾಖೆಯ ವಶಕ್ಕೆ ನೀಡಲು ಸಚಿವ ಸಂಪುಟ ಉಪ ಸಮಿತಿಯು ಮತ್ತೊಮ್ಮೆ ಸೂಚಿಸಿತು.

**ವಿಷಯ ಸೂಚಿ: 2ರ ಮೇಲೆ ಕೈಗೊಂಡ ನಿರ್ಣಯಗಳು**

**ವಿಷಯ 2:** ಭಾರತ ಸಂವಿಧಾನದ ಅನುಚ್ಛೇದ 371 (ಜೆ) ರಡಿ ಇನ್ನು ನೇರ ನೇಮಕಾತಿ ಹಾಗೂ ಮುಂಬಡ್ತಿಯಡಿ ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಕುರಿತು.

ಅನುಚ್ಛೇದ 371ಜೆ ಸಚಿವ ಸಂಪುಟ ಉಪ ಸಮಿತಿ ಸಭೆಯ ನಿರ್ಣಯದಂತೆ ವಿವಿಧ ಇಲಾಖೆಗಳು ಗೂಗಲ್‌ಶೀಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ ನೇರ ನೇಮಕಾತಿ ಮತ್ತು ಮುಂಬಡ್ತಿ ಪ್ರಕ್ರಿಯೆಗಳನ್ನು ಕೈಗೊಂಡಿರುತ್ತವೆ. 371ಜೆ ರಡಿ ನೇರ ನೇಮಕಾತಿಯಡಿ 1,05,817 ಹುದ್ದೆಗಳನ್ನು ಗುರುತಿಸಲಾಗಿದ್ದು, 74,091 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಮುಂಬಡ್ತಿಯಲ್ಲಿ 42,004 ಹುದ್ದೆಗಳನ್ನು ಗುರುತಿಸಲಾಗಿದ್ದು, 26,391 ಹುದ್ದೆಗಳನ್ನು ಮುಂಬಡ್ತಿ ನೀಡಲಾಗಿದೆ ಉಳಿದಂತೆ ವಿವಿಧ ನೇಮಕಾತಿ ಪ್ರಾಧಿಕಾರಿಗಳು 6,655 ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಎಂದು ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ, ಯೋಜನಾ ಇಲಾಖೆ ರವರು ಮಾಹಿತಿ ನೀಡಿದರು. ವಿವರಗಳು ಈ ಕೆಳಕಂಡಂತಿವೆ.

<u>ನೇರ ನೇಮಕಾತಿ:-</u>

I. **ಅನುಚ್ಛೇದ 371ಜೆ ರನ್ವಯ ಸ್ಥಳೀಯ ವೃಂದದಲ್ಲಿ (ಪ್ರಾದೇಶಿಕ - ರಾಜ್ಯ ಮಟ್ಟದ) ನೇರ ನೇಮಕಾತಿಯಡಿಯಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ – 105817**

**ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ -74091.**

- **ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ -31726**
- **KPSCಯಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿರುವ ಹುದ್ದೆಗಳ ಸಂಖ್ಯೆ -1867**
- ಗ್ರೂಪ್-ಎ- 66 ಹುದ್ದೆಗಳು.
- ಗ್ರೂಪ್-ಬಿ - 194 ಹುದ್ದೆಗಳು.
- ಗ್ರೂಪ್-ಸಿ - 1601 ಹುದ್ದೆಗಳು.
- ಗ್ರೂಪ್-ಡಿ - 10 ಹುದ್ದೆಗಳು.

**KEA/ಇತರೆ ನೇಮಕಾತಿ ಸಂಸ್ಥೆಗಳಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿರುವ ಹುದ್ದೆಗಳ ಸಂಖ್ಯೆ- 4788**

- ಗ್ರೂಪ್-ಎ- 224 ಹುದ್ದೆಗಳು.
- ಗ್ರೂಪ್-ಬಿ - 708 ಹುದ್ದೆಗಳು.
- ಗ್ರೂಪ್-ಸಿ- 3246 ಹುದ್ದೆಗಳು.
- ಗ್ರೂಪ್-ಡಿ- 610 ಹುದ್ದೆಗಳು.

**2. ರಾಜ್ಯ ಮಟ್ಟದ ಸ್ಥಳೀಯ ವೃಂದದಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಇರುವ ಬಾಕಿ ಇರುವ ಹುದ್ದೆಗಳ ಸಂಖ್ಯೆ – 52022.**

- ಗ್ರೂಪ್-ಎ- 1489 ಹುದ್ದೆಗಳು.
- ಗ್ರೂಪ್-ಬಿ - 1700 ಹುದ್ದೆಗಳು.
- ಗ್ರೂಪ್-ಸಿ- 15972 ಹುದ್ದೆಗಳು.
- ಗ್ರೂಪ್-ಡಿ- 5905 ಹುದ್ದೆಗಳು.

**ಅನುಚ್ಛೇದ 371ಜೆ ರನ್ವಯ ರಾಜ್ಯವ್ಯಾಪಿ ವೃಂದದಲ್ಲಿ (ಶೇ.8%ರಷ್ಟು) ನೇರ ನೇಮಕಾತಿಯಡಿಯಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ 20793**

- **ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ –13739**
- **ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ -7054**
- **KPSCಯಲ್ಲಿ ನೇಮಕಾತಿ ಪಕ್ರಿಯೆಯಲ್ಲಿರುವ ಹುದ್ದೆಗಳ ಸಂಖ್ಯೆ –1126.**
- ಗ್ರೂಪ್-ಎ-10 ಹುದ್ದೆಗಳು.
- ಗ್ರೂಪ್-ಬಿ - 22 ಹುದ್ದೆಗಳು.
- ಗ್ರೂಪ್-ಸಿ - 1075 ಹುದ್ದೆಗಳು.
- ಗ್ರೂಪ್-ಡಿ - 19 ಹುದ್ದೆಗಳು.

- **KEA/ಇತರೆ ನೇಮಕಾತಿ ಸಂಸ್ಥೆಗಳಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿರುವ ಹುದ್ದೆಗಳ ಸಂಖ್ಯೆ –2359**

- ಗ್ರೂಪ್-ಎ-33 ಹುದ್ದೆಗಳು.
- ಗ್ರೂಪ್-ಬಿ - 36 ಹುದ್ದೆಗಳು.
- ಗ್ರೂಪ್-ಸಿ - 1798 ಹುದ್ದೆಗಳು.
- ಗ್ರೂಪ್-ಡಿ - 492 ಹುದ ಗಳು.

**4. ರಾಜ್ಯ ಮಟ್ಟದ ಸ್ಥಳೀಯ ವೃಂದದಲ್ಲಿ (ಶೇಕಡ 8ರಷ್ಟು) ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ ಇರುವ ಬಾಕಿ ಇರುವ ಹುದ್ದೆಗಳ ಸಂಖ್ಯೆ – 3569**

- ಗ್ರೂಪ್-ಎ- 125 ಹುದ್ದೆಗಳು.
- ಗ್ರೂಪ್-ಬಿ - 124 ಹುದ್ದೆಗಳು.
- ಗ್ರೂಪ್-ಸಿ- 2210 ಹುದ್ದೆಗಳು.
- ಗ್ರೂಪ್-ಡಿ- 1110 ಹುದ್ದೆಗಳು.

**ಮುಂಬಡ್ತಿ:-**

1. **ಅನುಚ್ಛೇದ 371ಜೆ ರನ್ವಯ ಸ್ಥಳೀಯ ವೃಂದದಲ್ಲಿ (ಪ್ರಾದೇಶಿಕ - ರಾಜ್ಯ ಮಟ್ಟದ) ಮುಂಬಡ್ತಿಯಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ – 42004**

- **ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ -26391**
- **ಮುಂಬಡ್ತಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಹುದ್ದೆಗಳ ಸಂಖ್ಯೆ – 2449**
- **ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ -15613**
- ಗ್ರೂಪ್-ಎ- 540 ಹುದ್ದೆಗಳು.
- ಗ್ರೂಪ್-ಬಿ - 1091 ಹುದ್ದೆಗಳು.
- ಗ್ರೂಪ್-ಸಿ - 13982 ಹುದ್ದೆಗಳು.

2. **ಅನುಚ್ಛೇದ 371ಜೆ ರನ್ವಯ ರಾಜ್ಯವ್ಯಾಪಿ ವೃಂದದಲ್ಲಿ (ಶೇ. 8%ರಷ್ಟು) ಮುಂಬಡ್ತಿಯಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ – 3511**

- **ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ -2042**
- **ಮುಂಬಡ್ತಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಹುದ್ದೆಗಳ ಸಂಖ್ಯೆ – 301**
- **ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ -1469**
- ಗ್ರೂಪ್-ಎ- 51 ಹುದ್ದೆಗಳು.
- ಗ್ರೂಪ್-ಬಿ - 139 ಹುದ್ದೆಗಳು.
- ಗ್ರೂಪ್-ಸಿ - 1279 ಹುದ್ದೆಗಳು.

ಇಲಾಖಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದ್ದು, ಎಲ್ಲಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ನಿಗಮ/ಮಂಡಳಿ/ಪ್ರಾಧಿಕಾರ/ಇತರೆ ಸಂಸ್ಥೆಗಳು/ಇಲಾಖೆಗಳಲ್ಲಿ 371 ಜೆ ಅಡಿ ನಿಗದಿಪಡಿಸಿದ ಹುದ್ದೆಗಳ ವಿವರ & ಭರ್ತಿ ಮಾಡಿರುವ ಹುದ್ದೆಗಳ ಮಾಹಿತಿಗಳನ್ನು **<u>ಗೂಗಲ್‌ಶೀಟ್ ನಲ್ಲಿ update</u>** ಮಾಡಲು ಸಮಿತಿಯು ಸೂಚಿಸಿತು.

**ಈ ಕೆಳಕಂಡ ವಿಷಯ ಸೂಚಿಗಳ ಅಂಶಗಳಿಗೆ ಸಂಬಂಧಿಸಿದಂತೆ ಸ್ವೀಕೃತ ದೂರು/ಮನವಿ/ಬೇಡಿಕೆ ಪತ್ರಗಳ ಮೇಲೆ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು/ಇಲಾಖೆಯ ಮುಖ್ಯಸ್ಥರು 371ಜೆ ಕಾಯ್ದೆ/ಆದೇಶಗಳು/ಸುತ್ತೋಲೆಗಳನ್ವಯ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮಗಳ ಬಗ್ಗೆ ಯೋಜನಾ ಇಲಾಖೆಗೆ <u>ಲಿಖಿತವಾಗಿ ನಿಗದಿತ ಅವಧಿಯಲ್ಲಿ ಅನುಪಾಲನಾ ವರದಿ ಸಲ್ಲಿಸಲು ಸಮಿತಿಯು ಸೂಚಿಸಿತು.</u>**

| ಕ್ರ. ಸಂ | ವಿಷಯ | ಚರ್ಚೆ | ಕ್ರಮ ಕೈಗೊಳ್ಳಬೇಕಾದ ಇಲಾಖೆಗಳು |
|---|---|---|---|
| 1 | ವೈರ್‌ಲೆಸ್ ಸೈಬರ್ ಇಲಾಖೆಯಲ್ಲಿ 371 ಜೆ ವೃಂದದ ಜೇಷ್ಠತೆಯಲ್ಲಿ ಆಗಿರುವ | ವೈರ್‌ಲೆಸ್ ಸೈಬರ್ ನಲ್ಲಿ 371 ಜೆ ವೃಂದದ ಜೇಷ್ಠತೆಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸುವಂತೆ ಶ್ರೀ ದೇವಿಂದ್ರ | ಒಳಾಡಳಿತ ಇಲಾಖೆ (ವೈರ್‌ಲೆಸ್) |

| | | | |
|---|---|---|---|
| | ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ. | ಬ ರಬಗೊಂಡ (HC) ರವರು ಮನವಿ ಸಲ್ಲಿಸಿದ್ದು, ಸದರಿ ಮನವಿಯಲ್ಲಿನ ಈ ಕೆಳಕಂಡ ಪ್ರಮುಖ ಅಂಶಗಳ ಕುರಿತು ಚರ್ಚಿಸಲಾಯಿತು.<br><br>• 371ಜೆ ವೃಂದದ ಖಾಲಿ ಹುದ್ದೆಗಳಿಗೆ 371ಜೆ ಗೆ ಸೇರ್ಪಡೆಗೊಳ್ಳದವರಿಗೆ ಮುಂಬಡ್ತಿ ನೀಡಿರುವುದು.<br>• 2022ನೇ ಸಾಲಿನಲ್ಲಿ ಶೇಕಡ 80+8 ರಷ್ಟನ್ನು ಒಂದುಗೂಡಿಸಿ 371ಜೆ ವೃಂದಕ್ಕೆ ಹುದ್ದೆಗಳನ್ನು ಕಡಿತ ಮಾಡಿರುವುದು ಹಾಗೂ 2014ರಿಂದ ಪೂರ್ವಾನ್ವಯವಾಗು ವಂತೆ ಹುದ್ದೆಗಳನ್ನು ಒಂದುಗೂಡಿಸುವುದು. | |
| | | • ವೈರ್‌ಲೇಸ್ ಇಲಾಖೆಯಲ್ಲಿ HK ಸ್ಥಳೀಯ ವೃಂದಕ್ಕೆ 38 ಹುದ್ದೆಗಳನ್ನು ಗುರುತಿಸಲಾಗಿದ್ದು, ಸದರಿ ಹುದ್ದೆಗೆ ಎದುರಾಗಿ 2015ರಲ್ಲಿ 56 ಜನರನ್ನು ಜೇಷ್ಟತೆ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದು, 2017ರವರೆವಿಗೆ ಖಾಲಿಯಾದ ASI ಹುದ್ದೆಗಳನ್ನು ರಾಜ್ಯ ವ್ಯಾಪಿ ವೃಂದದ HC (ವೈರ್‌ಲೇಸ್) ರವರಿಗೆ ನೀಡಿರುವುದರಿಂದ HK ಭಾಗದ ನೌಕರರಿಗೆ ಮುಂಬಡ್ತಿಯಲ್ಲಿ ನ್ಯಾಯವಾಗಿರುವ ಕುರಿತು ಚರ್ಚಿಸಲಾಯಿತು. | |

| | | | |
|---|---|---|---|
| 2 | ಸಹಾಯಕ ಪ್ರಾಧ್ಯಾಪಕರ ನೇಮಕಾತಿ-2021ರಲ್ಲಿ ಎರಡೂ ಆಯ್ಕೆ ಪಟ್ಟಿಗಳಲ್ಲಿ ಆಯ್ಕೆಗೊಂಡ ಅರ್ಹ ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ನೇಮಕಾತಿ ನೀಡುವ ಕುರಿತು. | ಸಹಾಯಕ ಪ್ರಾಧ್ಯಾಪಕರ ನೇಮಕಾತಿ 2021ರಲ್ಲಿ ಆಯ್ಕೆಗೊಂಡು 371ಜೆ ಮೀಸಲಾತಿ ಸಂಬಂಧ ಮಾನ್ಯ ಹೈ-ಕೋರ್ಟ್‌ನಲ್ಲಿ ದಾಖಲಾಗಿರುವ WP-2034/2024 ಹಾಗೂ WP-1900/2024ಗಳಲ್ಲಿ ಅರ್ಜಿದಾರರು ನಮ್ಮನ್ನು ಪ್ರತಿವಾದಿಗಳನ್ನಾಗಿ ಮಾಡಿರುತ್ತಾರೆ. ದಿನಾಂಕ: 01.02.2023ರ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ಸುತ್ತೋಲೆಗೂ ಪೂರ್ವದಲ್ಲಿ ತಯಾರಾದ ದಿನಾಂಕ: 30.01.2023ರ ಆಯ್ಕೆ ಪಟ್ಟಿಯಲ್ಲಿ ನಾವು ಸ್ಥಳೀಯ ವೃಂದದಲ್ಲಿ ಆಯ್ಕೆಗೊಂಡಿದ್ದು, ದಿನಾಂಕ: 03.03.2023ರ ಪರಿಷ್ಕೃತ ಅಂತಿಮ ಆಯ್ಕೆ ಪಟ್ಟಿಯಲ್ಲಿ ಉಳಿಕೆ ಮೂಲ ವೃಂದ ಕಲ್ಯಾಣ ಕರ್ನಾಟಕೇತರದಲ್ಲಿ ಮೆರಿಟ್ ಉಳ್ಳ ಕಾರಣಕ್ಕಾಗಿ ಆಯ್ಕೆಗೊಂಡಿದ್ದೇವೆ, ಹೀಗೆ ಎರಡೂ ಪಟ್ಟಿಯಲ್ಲೂ ಆಯ್ಕೆಗೊಂಡಿರುವ ನಮ್ಮನ್ನು ಕೈಬಿಡಬಾರದೆಂದು ಕೋರಿರುವ ಕುರಿತು ಚರ್ಚಿಸಲಾಯಿತು. | ಉನ್ನತ ಶಿಕ್ಷಣ ಇಲಾಖೆ |
| 3 | ಪೋಲೀಸ್ ಇಲಾಖೆಯಲ್ಲಿ ಪಿಎಸ್‌ಐ ಹುದ್ದೆಯಿಂದ ಪಿ.ಐ ಹುದ್ದೆಗೆ 371ಜೆ ನಿಯಮವನ್ನು ಪಾಲಿಸದೇ ಮುಂಬಡ್ತಿ ನೀಡಿ ತಾರತಮ್ಯ ಮಾಡಿರುವ ಕುರಿತು. | 371ಜೆ ಕಾಯ್ದೆಯನ್ವಯ ಕಲ್ಯಾಣ ಕರ್ನಾಟಕ ರಾಜ್ಯ ಮಟ್ಟದಲ್ಲಿ ಶೇಕಡ 8ರಷ್ಟು ಮೀಸಲಾತಿಯನ್ನು 371ಜೆ ಭಾಗದ ಅಭ್ಯರ್ಥಿಗಳಿಗೆ ಮುಂಬಡ್ತಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಆದರೆ, ಸದರಿ ನಿಯಮವನ್ನು ಪಾಲನೆ ಮಾಡದೇ ಹಾಗೂ ದಿನಾಂಕ: 02.02.2024ರಂದು ಸಚಿವ ಸಂಪುಟ ಉಪ ಸಮಿತಿ ನಡವಳಿಯ ಅಂಶಗಳನ್ನು ಪಾಲಿಸದೇ ರಾಜ್ಯ ವೃಂದದಲ್ಲಿ ಅರ್ಹತೆ ಪಡೆದಿರುವ ಹೈದ್ರಾಬಾದ್ ಕರ್ನಾಟಕ ಭಾಗದ ಅಭ್ಯರ್ಥಿಗಳಾದ ನಮಗೆ | ಒಳಾಡಳಿತ ಇಲಾಖೆ |

| | | | |
|---|---|---|---|
| | | ಅನ್ಯಾಯ ಮಾಡಿರುತ್ತಾರೆ ಎಂದು 14 ನೌಕರರು ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಬಗ್ಗೆ ನಿರ್ಧಾರ ಕೈಗೊಳ್ಳುವ ಕುರಿತು ಚರ್ಚಿಸಲಾಯಿತು. | |
| 3 | ಭಾರತ ಸಂವಿಧಾನದ ಅನುಚ್ಛೇದ 371 ಜೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯವ್ಯಾಪಿ ವೃಂದದಲ್ಲಿ ಶೇ 8 ರಷ್ಟು ಮೀಸಲಾತಿಯನ್ನು ಕಲ್ಪಿಸಿರುವಂತೆ ಜಿಲ್ಲೆ ಹಾಗೂ ಪ್ರಾದೇಶಿಕವಾರು ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಶೇಕಡ 8ರಷ್ಟು ಮೀಸಲಾತಿಯನ್ನು ಪಾಲಿಸಲು ಅವಕಾಶ ಕಲ್ಪಿಸುವ ಬಗ್ಗೆ. | ಭಾರತ ಸಂವಿಧಾನದ ಅನುಚ್ಛೇದ 371 ಜೆ ಪ್ರಕಾರ ಕಲ್ಯಾಣ ಕರ್ನಾಟಕ ಪ್ರದೇಶದ 7 ಜಿಲ್ಲೆಯವರಿಗೆ ಮೀಸಲಾತಿ ಕಲ್ಪಿಸಲಾಗಿದ್ದು, ಕಲ್ಯಾಣ ಕರ್ನಾಟಕ ಪ್ರದೇಶ ಹೊರತುಪಡಿಸಿ ಉಳಿದ 24 ಜಿಲ್ಲೆಯ ನಿವಾಸಿಗಳಿಗೆ ಕಲ್ಯಾಣ ಕರ್ನಾಟಕ ಪ್ರದೇಶದ 7 ಜಿಲ್ಲೆಗಳಲ್ಲಿ ಶೇಕಡ 20ರಷ್ಟು ಮೀಸಲಾತಿಯನ್ನು ನೇಮಕಾತಿ ಮತ್ತು ಮುಂಬಡ್ತಿಯನ್ನು ಕಲ್ಪಿಸಲಾಗಿರುತ್ತದೆ.<br><br>ಆದರೆ, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಯವರಿಗೆ ರಾಜ್ಯ ಮಟ್ಟದಲ್ಲಿ ಮಾತ್ರ ಶೇಕಡ 8ರಷ್ಟು ಮೀಸಲಾತಿಯನ್ನು ನೀಡಲಾಗುತ್ತಿದ್ದು, ಉಳಿದ 24 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ನೇಮಕಾತಿ ಪ್ರಾಧಿಕಾರ ಮತ್ತು ಪ್ರಾದೇಶಿಕ ಹಂತದ ನೇಮಕಾತಿ ಪ್ರಾಧಿಕಾರಗಳಲ್ಲಿ ಶೇಕಡ 8ರಷ್ಟು ಮೀಸಲಾತಿಯನ್ನು ಕಲ್ಪಿಸಿರುವುದಿಲ್ಲ. ಇದರಿಂದಾಗಿ ಕಲ್ಯಾಣ ಕರ್ನಾಟಕ ಭಾಗದ ನಿವಾಸಿಗಳಿಗೆ ಅನ್ಯಾಯವಾಗಿರುತ್ತದೆ. ಆದ್ದರಿಂದ ಕಲ್ಯಾಣ ಕರ್ನಾಟಕ ಭಾಗದವರಿಗೆ ಜಿಲ್ಲೆ ಮತ್ತು ವಿಭಾಗ ಮಟ್ಟದ ನೇಮಕಾತಿ ಪ್ರಾಧಿಕಾರಗಳು ನೇಮಕಾತಿ ಮಾಡುವಾಗ ಇತರೆ 24 ಜಿಲ್ಲೆಗಳಲ್ಲೂ ಶೇಕಡ 8ರಷ್ಟು ಮೀಸಲಾತಿಯನ್ನು ಕಲ್ಯಾಣ ಕರ್ನಾಟಕ ಭಾಗದವರಿಗೆ | ಸಿಆಸು ಇಲಾಖೆ |

| | | | |
|---|---|---|---|
| | | ಕಲ್ಪಿಸುವ ಬಗ್ಗೆ ಅವಕಾಶ ಮಾಡಿಕೊಡುವ ಕುರಿತು ಚರ್ಚಿಸಲಾಯಿತು. | |
| 4 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಶೀಘ್ರಲಿಪಿಗಾರರ ಹುದ್ದೆಯಲ್ಲಿ 371ಜೆ ನಿಯಮ ಪಾಲನೆ ಮಾಡುವ ಕುರಿತು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಮುಖ್ಯ ಕಾರ್ಯಾಚರಣೆ ಅಧಿಕಾರಿಯವರ ಕಛೇರಿಯಲ್ಲಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಇಲ್ಲಿ ಆಪ್ತ ಸಹಾಯಕರು (ಶೀಘ್ರಲಿಪಿಗಾರರು) ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ರಜನಿ ಮುಧೋಳ ರವರು ದಿನಾಂಕ: 11.01.1990ರಂದು ಸರ್ಕಾರಿ ಸೇವೆಗೆ ಒಂದೇ ಹುದದೆಯಲ್ಲಿ 34 ವರ್ಷಗಳ ಸೇವೆಯನ್ನು ಸಲ್ಲಿಸಿರುತ್ತಾರೆ. ಸದರಿಯವರಿಗೆ ಇದುವರೆವಿಗೂ ಮುಂಬಡ್ತಿ ನೀಡಿರುವುದಿಲ್ಲ. ಆದ್ದರಿಂದ 371ಜೆ ಯಡಿ ಪರಿಗಣಿಸಿ ಮುಂಬಡ್ತಿಯನ್ನು ನೀಡುವ ಕುರಿತು ಕ್ರಮವಹಿಸುವ ಬಗ್ಗೆ ಚರ್ಚಿಸಲಾಯಿತು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 5 | ಭಾರತ ಸಂವಿಧಾನದ 371 (ಜೆ) ಅನುಚ್ಛೇದವನ್ನು ಅನುಷ್ಠಾನಗೊಳಿಸುವಾಗ ಅಪರ ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿಯವರು, ಸ್ಥಳೀಯ ವೃಂದದಲ್ಲಿ 591 ಮುಖ್ಯ ಗುರುಗಳು ಕಾರ್ಯನಿರ್ವಹಿಸುತ್ತಿದ್ದು, ಇವರಲ್ಲಿ 387 ಮೀಸಲು ರಹಿತ, 159 ಪರಿಶಿಷ್ಟ ಜಾತಿ, 45 ಪರಿಶಿಷ್ಟ ಪಂಗಡ ಎಂದು ವರ್ಗೀಕರಿಸಿ ಇವರಲ್ಲಿ 70 ಪರಿಶಿಷ್ಟ ಜಾತಿ, 22 ಪರಿಶಿಷ್ಟ ಪಂಗಡದವರು ಹೆಚ್ಚುವರಿ ಎಂದು ವರ್ಗೀಕರಿಸುವಾಗ ನಿವೃತ್ತಿ ಹೊಂದಿರುವ 130 | ಭಾರತ ಸಂವಿಧಾನದ 371 (ಜೆ) ಅನುಚ್ಛೇದವನ್ನು ಅನುಷ್ಠಾನಗೊಳಿಸುವಾಗ ಅಪರ ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿಯವರು, ಸ್ಥಳೀಯ ವೃಂದದಲ್ಲಿ 591 ಮುಖ್ಯ ಗುರುಗಳು ಕಾರ್ಯನಿರ್ವಹಿಸುತ್ತಿದ್ದು, ಇವರಲ್ಲಿ 387 ಮೀಸಲು ರಹಿತ, 159 ಪರಿಶಿಷ್ಟ ಜಾತಿ, 45 ಪರಿಶಿಷ್ಟ ಪಂಗಡ ಎಂದು ವರ್ಗೀಕರಿಸಿ ಇವರಲ್ಲಿ 70 ಪರಿಶಿಷ್ಟ ಜಾತಿ, 22 ಪರಿಶಿಷ್ಟ ಪಂಗಡದವರು ಹೆಚ್ಚುವರಿ ಎಂದು ವರ್ಗೀಕರಿಸುವಾಗ | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |

| | | | |
|---|---|---|---|
| | ರಿಂದ 150 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಕೈಬಿಟ್ಟಿರುವುದರಿಂದ 2014 ರಿಂದ ಸ್ಥಳೀಯ ವೃಂದದಲ್ಲಿ ರೋಸ್ಟರ್ ನಿಯಮ ಪಾಲಿಸದೇ 130 ರಿಂದ 150 ಮುಖ್ಯ ಗುರುಗಳ ವೃಂದದಲ್ಲಿ ಪ್ರಾತಿನಿಧ್ಯ ವಂಚನೆ ಮಾಡಿರುವುದನ್ನು ಸರಿಪಡಿಸುವ ಕುರಿತು. | ನಿವೃತ್ತಿ ಹೊಂದಿರುವ 130 ರಿಂದ 150 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಕೈಬಿಟ್ಟಿರುವುದರಿಂದ 2014 ರಿಂದ ಸ್ಥಳೀಯ ವೃಂದದಲ್ಲಿ ರೋಸ್ಟರ್ ನಿಯಮ ಪಾಲಿಸದೇ 130 ರಿಂದ 150 ಮುಖ್ಯ ಗುರುಗಳ ವೃಂದದಲ್ಲಿ ಪ್ರಾತಿನಿಧ್ಯ ವಂಚನೆ ಮಾಡಿರುವುದನ್ನು ಸರಿಪಡಿಸುವ ಕುರಿತು ಚರ್ಚಿಸಲಾಯಿತು. | |
| 6 | ಕಕರಸಾ ನಿಗಮವು 371(ಜೆ) ಮೀಸಲಾತಿಯ ರಾಜ್ಯಮಟ್ಟದ ಹುದ್ದೆಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದ ಎಂದು ಪ್ರತ್ಯೇಕವಾಗಿ ಎರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬದಲಾಗಿ ಸ್ಥಳೀಯ ಹಾಗೂ ಮಿಕ್ಕುಳಿದ ಇವೆರಡು ವೃಂದಗಳನ್ನು ಒಳಗೊಂಡ (ಕ್ರೋಢೀಕೃತ) ಒಂದೇ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು. | ಈಗಾಗಲೇ ದಿನಾಂಕ: 04.01.2024ರಂದು ನಡೆದ ಭಾರತ ಸಂವಿಧಾನದ ಅನುಚ್ಛೇದ 371ಜೆ ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಚಿವ ಸಂಪುಟ ಉಪ ಸಮಿತಿಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಬಗ್ಗೆ ಸಿಆಸುಇಲಾಖೆ ಆದೇಶ ಹೊರಡಿಸುವುದು ಬಾಕಿ ಇರುವ ಕುರಿತು ಚರ್ಚಿಸಲಾಯಿತು. | ಸಿಆಸುಇಲಾಖೆ |
| 7 | ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ (ಕೆ.ಬಿ.ಜೆ.ಎನ್.ಎಲ್) ಹಸನಾಪೂರ ಕಾರ್ಯಪಾಲಕ ಇಂಜಿನಿಯರ್ ಹೊಲಗಾಲುವೆ ವಿಭಾಗ-2 ಮತ್ತು ಕೃಷ್ಣಾ-ಕಾಡಾ ಭೀಮನರಾಯನಗುಡಿ ಅಧೀನದಲ್ಲಿ ಬರುವ ವಿಭಾಗ ಮತ್ತು ಉಪ ವಿಭಾಗ ಕಾರ್ಯಾಲಯ ಹುದ್ದೆ ಸಮೇತ ಸ್ಥಳಾಂತರದ ಆದೇಶವನ್ನು ರದ್ದುಪಡಿಸಿ ಯಥಾಸ್ಥಿತಿಯಲ್ಲಿ ಮುಂದುವರಿಸುವ ಬಗ್ಗೆ. | ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ (ಕೆ.ಬಿ.ಜೆ.ಎನ್.ಎಲ್) ಹಸನಾಪೂರ ಕಾರ್ಯಪಾಲಕ ಇಂಜಿನಿಯರ್ ಹೊಲಗಾವಲು ವಿಭಾಗ-2 ಮತ್ತು ಕೃಷ್ಣಾ-ಕಾಡಾ ಭೀಮನರಾಯನಗುಡಿ ಅಧೀನದಲ್ಲಿ ಬರುವ ವಿಭಾಗ ಮತ್ತು ಉಪ ವಿಭಾಗ ಕಾರ್ಯಾಲಯ ಹುದ್ದೆ ಸಮೇತ ಸ್ಥಳಾಂತರ ಆದೇಶವನ್ನು ರದ್ದುಪಡಿಸಿ ಯಥಾಸ್ಥಿತಿಯಲ್ಲಿ ಮುಂದುವರಿಸುವಂತೆ ಕಲ್ಯಾಣ ಕರ್ನಾಟಕ 371ಜೆ ಕಲಂ ಕಾನೂನು ತಿದ್ದುಪಡಿ ಹೋರಾಟ ಸಮಿತಿ (ಅಹಿಂದ ಚಿಂತಕರ | ಸಣ್ಣ ನೀರಾವರಿ ಇಲಾಖೆ |

| | | | |
|---|---|---|---|
| | | ವೇದಿಕೆ ) ರವರು ಸಲ್ಲಿಸಿರುವ ಮನವಿಯ ಕುರಿತು ಚರ್ಚಿಸಲಾಯಿತು. | |
| 8 | ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂವಿಧಾನ ಅನುಚ್ಛೇದ 371ಜೆ ಅಡಿಯಲ್ಲಿ ವಿವಿಧ ವೃಂದದ ಸರ್ಕಾರಿ ಹುದ್ದೆಗಳ ನೇಮಕಾತಿ ಹಾಗೂ ಬಡ್ತಿ ನೀಡುವ ಸಂದರ್ಭದಲ್ಲಿ, ಪ್ರತ್ಯೇಕವಾಗಿ ಪರಿಗಣಿಸುವುದರಿಂದ ತೊಂದರೆಯಾಗುತ್ತಿರುವ ಕುರಿತು. | ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂವಿಧಾನ ಅನುಚ್ಛೇದ 371ಜೆ ಅಡಿಯಲ್ಲಿ ವಿವಿಧ ವೃಂದದ ಸರ್ಕಾರಿ ಹುದ್ದೆಗಳ ನೇಮಕಾತಿ ಹಾಗೂ ಬಡ್ತಿ ನೀಡುವ ಸಂದರ್ಭದಲ್ಲಿ ಪ್ರತ್ಯೇಕವಾಗಿ ಪರಿಗಣಿಸುವುದರಿಂದ ತೊಂದರೆಯಾಗುತ್ತಿರುವ ಕುರಿತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಗುಲ್ಬರ್ಗಾ ಹಾಗೂ ಬೆಸ್ಕಾಂ ಸಿಬ್ಬಂದಿಗಳು ಸಲ್ಲಿಸಿರುವ ಮನವಿಯ ಕುರಿತು ಚರಚಿಸಲಾಯಿತು. | ಇಂಧನ ಇಲಾಖೆ |
| 9 | ಅನುಚ್ಛೇದ 371ಜೆ ಮೀಸಲಾತಿಯ ಅನ್ವಯ ಖಾಲಿ ಇರುವ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕ ಭಾಗದ ಅಧಿಕಾರಿ/ನೌಕರರಿಗೆ ಮುಂಬಡ್ತಿ ನೀಡುವ ನಿಯಮಗಳಲ್ಲಿ ಬದಲಾವಣೆ ಮಾಡುವ ಬಗ್ಗೆ. | ಅನುಚ್ಛೇದ 371ಜೆ ಮೀಸಲಾತಿಯ ಅನ್ವಯ ಖಾಲಿ ಇರುವ ಹುದ್ದೆಗಳಿಗೆ ಕಲ್ಯಾಣ ಕರ್ನಾಟಕ ಭಾಗದ ಅಧಿಕಾರಿ/ನೌಕರರಿಗೆ ಮುಂಬಡ್ತಿ ನೀಡುವ ನಿಯಮಗಳಲ್ಲಿ ಬದಲಾವಣೆ ಮಾಡುವ ಬಗ್ಗೆ, ಶ್ರೀ ಅಂಬಾದಾಸ, ಪೊಲೀಸ್ ಇಲಾಖೆ ರವರ ಮನವಿಯ ಕುರಿತು ಚರ್ಚಿಸಲಾಯಿತು. | ಒಳಾಡಳಿತ ಇಲಾಖೆ |
| 10 | ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿ ಹೊರಡಿಸಲಾಗಿರುವ ಆದೇಶಗಳನ್ನು ಅನುಷ್ಠಾನ ಮಾಡುವ ಕುರಿತು. | ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿ ಹೊರಡಿಸಲಾಗಿರುವ ಸರ್ಕಾರದ ಆದೇಶಗಳನ್ನು ಹಾಗೂ ಕೆಎಟಿ ನ್ಯಾಯಾಲಯದ ಆದೇಶಗಳನ್ನು ಅನುಷ್ಠಾನ ಮಾಡುವಂತೆ ಅಬಕಾರಿ ಇಲಾಖೆಯ ನೌಕರರು ಸಲ್ಲಿಸಿರುವ ಮನವಿಯ ಕುರಿತು ಚರ್ಚಿಸಲಾಯಿತು. | ಆರ್ಥಿಕ ಇಲಾಖೆ |
| 11 | ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿ ರಾಜ್ಯವ್ಯಾಪಿ ವೃಂದದಲ್ಲಿ ಶೇ.8ರ ಮೀಸಲಾತಿ ಹಾಗೂ ನೇರ ನೇಮಕಾತಿಯಲ್ಲಿ | ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿ ರಾಜ್ಯವ್ಯಾಪಿ ವೃಂದದಲ್ಲಿ ಶೇ.8 ರ ಮೀಸಲಾತಿ ಹಾಗೂ ನೇರ ನೇಮಕಾತಿಯಲ್ಲಿ ಸಮತಳ ಮೀಸಲಾತಿಯನ್ನು | ಸಿಆಸುಇಲಾಖೆ |

| | | | |
|---|---|---|---|
| | ಸಮತಳ ಮೀಸಲಾತಿಯನ್ನು ನಿಗಧಿಪಡಿಸುವ ಕುರಿತು. | ನಿಗಧಿಪಡಿಸುವಂತೆ ಯುವಜನ ಬಳಗದ ಅಧ್ಯಕ್ಷರು ಕೋರಿರುವ ಕುರಿತು ಚರ್ಚಿಸಲಾಯಿತು. | |
| 12 | ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿ ರಾಜ್ಯವ್ಯಾಪಿ ವೃಂದದಲ್ಲಿ ಶೇ.8ರ ಮೀಸಲಾತಿ ನಿಗಧಿಪಡಿಸಿ ಟಾರ್ಗೆಟ್ ಮೀಸಲಾತಿ ಬದಲು ರಿಕ್ತ ಸ್ಥಾನ ಆಧಾರಿತ ಮೀಸಲಾತಿಯನ್ನು ನಿಗಧಿಪಡಿಸುವ ಕುರಿತು. | ಭಾರತ ಸಂವಿಧಾನದ ಅನುಚ್ಛೇದ 371ಜೆ ಅಡಿ ರಾಜ್ಯವ್ಯಾಪಿ ವೃಂದದಲ್ಲಿ ಶೇ.8 ರ ಮೀಸಲಾತಿ ನಿಗಧಿಪಡಿಸಿ ಟಾರ್ಗೆಟ್ ಮೀಸಲಾತಿ ಬದಲು ರಿಕ್ತ ಸ್ಥಾನ ಆಧಾರಿತ ಮೀಸಲಾತಿಯನ್ನು ನಿಗಧಿಪಡಿಸುವಂತೆ ಶ್ರೀ ಸತೀಶ್ ಹಾಗೂ ಇತರರು ಸಲ್ಲಿಸಿರುವ ಮನವಿಯ ಕುರಿತು ಚರ್ಚಿಸಲಾಯಿತು. | ಸಿಆಸುಇಲಾಖೆ |
| 13 | ಕಲ್ಯಾಣ ಕರ್ನಾಟಕ 371ಜೆ ವ್ಯಾಪ್ತಿಯ ಶಾಲಾ ಶಿಕ್ಷಣ ಇಲಾಖೆಯ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಬಡ್ತಿ ನೀಡುವಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿ ಬಡ್ತಿ ನೀಡುವ ಕುರಿತು. | ಕಲ್ಯಾಣ ಕರ್ನಾಟಕ 371ಜೆ ವ್ಯಾಪ್ತಿಯ ಶಾಲಾ ಶಿಕ್ಷಣ ಇಲಾಖೆಯ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಬಡ್ತಿ ನೀಡುವಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿ ಬಡ್ತಿ ನೀಡುವಂತೆ ಕರ್ನಾಟಕ ರಾಜ್ಯ ಸರ್ಕಾರಿ, ಅರೆಸರ್ಕಾರಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ನೌಕರರ ಸಂಘ ಕಲಬುರಗಿರವರು ಸಲ್ಲಿಸಿರುವ ಮನವಿಯ ಕುರಿತು ಚರ್ಚಿಸಲಾಯಿತು. | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |
| 12 | ಶ್ರೀ ಅಮರೇಗೌಡ ಎಲ್ ಪಾಟೀಲ್, ಬ್ಯೆಯ್ಯಾಪುರ, ಮಾಜಿ ಶಾಸಕರು, ಕುಷ್ಟಗಿ ವಿಧಾನ ಸಭಾ ಕ್ಷೇತ್ರ ರವರ ಮನವಿಯ ಮೇಲೆ ಚರ್ಚೆ. | ಶ್ರೀ ಅಮರೇಗೌಡ ಎಲ್ ಪಾಟೀಲ್, ಬ್ಯೆಯ್ಯಾಪುರ, ಮಾಜಿ ಶಾಸಕರು, ಕುಷ್ಟಗಿ ವಿಧಾನ ಸಭಾ ಕ್ಷೇತ್ರ ರವರು 371ಜೆ ಸಂಬಂಧಿಸಿದಂತೆ 12 ಅಂಶಗಳನ್ನು ನಮೂದಿಸಿ ಕ್ರಮವಹಿಸಬೇಕೆಂದು ಕೋರಿರುತ್ತಾರೆ. ಸದರಿ ಅಂಶಗಳ ಮನವಿ ಪತ್ರವನ್ನು ಸಮಿತಿಯು ಪರಿಶೀಲಿಸಿತು. | ಸದರಿ ಮನವಿಯ ಕುರಿತು ಸಭೆಯು ಅವಗಾಹಿಸಿತು. |
| 13 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಮತ್ತು 371ಜೆ (ಕಲ್ಯಾಣ ಕರ್ನಾಟಕ) ಅಡಿಯಲ್ಲಿ ಸಹಾಯಕ ಅಭಿಯಂತರರು(ಕಾ) | ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಚ್-2015ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಯಿಂದ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗೆ ಎಲ್ಲಾ | ಇಂಧನ ಇಲಾಖೆ |

| | | | |
|---|---|---|---|
| | ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಕಾ) ಹುದ್ದೆಯ ಮುಂಬಡ್ತಿಯಲ್ಲಿ ಆಗಿರುವ ಅನ್ಯಾಯದ ಕುರಿತು. | ವಿಭಾಗಗಳಲ್ಲಿ ಬಡ್ತಿ ನೀಡಲಾಗಿದ್ದು, ತ್ತದನಂತರ ದಿನಾಂಕ: 28.07.2015ರಂದು ಕಲ್ಯಾಣ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕೇತರ ಅಡಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಹಾಗೂ ಇನ್‌ಸ್ಟ್ರುಮೆಂಟೇಷನ್ ವಿಭಾಗಗಳಲ್ಲಿ ಸಹಾಯಕ ಅಭಿಯಂತರರ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಗೆ ಮುಂಬಡ್ತಿ ನೀಡಿರುತ್ತಾರೆ. ಆದರೆ, ಸಿವಿಲ್ ವಿಭಾಗದಲ್ಲಿ ಕೇವಲ Non-HK ಅಡಿಯಲ್ಲಿ ಮಾತ್ರ ಬಡ್ತಿ ನೀಡಿ HK ರವರಿಗೆ ಅನ್ಯಾಯ ಮಾಡಿರುತ್ತಾರೆ ಹಾಗೂ ಇನ್ನಿತರ ಅಂಶಗಳ ಕುರಿತು ಶ್ರೀ ರಾಜ್‌ಕುಮಾರ್ ರವರ ಮನವಿಯ ಬಗ್ಗೆ ಚರ್ಚಿಸಲಾಯಿತು. | |
| 14 | ಕಲಬುರಗಿಯ ಮಹಾನಗರ ಪಾಲಿಕೆಯಲ್ಲಿ ಕಲ್ಯಾಣ ಕರ್ನಾಟಕ ವಿಭಾಗದ ನೌಕರರಿಗೆ 371ಜೆ ಅಡಿಯಲ್ಲಿ ಮುಂಬಡ್ತಿ ನೀಡುವಲ್ಲಿ ಬಿಂದು (ಅನುಪಾತ ಪಾಲನೆ) ಮತ್ತು ಸಾಮಾನ್ಯ ವೃಂದದಿಂದ 08% ರಷ್ಟು ರಾಜ್ಯದ ಒಟ್ಟು ವೃಂದದಲ್ಲಿ ಮುಂಬಡ್ತಿ ಪರಿಗಣಿಸುವ ಕುರಿತು. | ಮಹಾನಗರ ಪಾಲಿಕೆ ಪೌರ ಸೇವಾ ವೃಂದದಲ್ಲಿ ಮಂಜೂರಾಗಿರುವ ಆರೋಗ್ಯ ನಿರೀಕ್ಷಕರ ವೃಂದದ ಮುಂಬಡ್ತಿ ಹುದ್ದೆಗಳನ್ನು ರಾಜ್ಯ ಮಟ್ಟದ ಮೀಸಲಾತಿ ಶೇಕಡ 8ರಂತೆ ನಿಗದಿಪಡಿಸಿದ್ದರೂ ಸಹ ಭಾರತ ಸಂವಿಧಾನ 371ಜೆ ಕಾನೂನನ್ನು ಉಲ್ಲಂಘಿಸಿ ಈ ಭಾಗದ ನೌಕರರಿಗೆ ಅನ್ಯಾಯ ಮಾಡಲಾಗಿದೆ. ಆದ್ದರಿಂದ 2014-15ನೇ ಸಾಲಿನಿಂದ ಒಟ್ಟು ಹುದ್ದೆಗಳನ್ನು ಪರಿಗಣಿಸಿ ರಾಜ್ಯ ವೃಂದದ ಒಟ್ಟು ಹುದ್ದೆಗಳಲ್ಲಿ ಶೇಕಡ 8ರಷ್ಟು ಕಲ್ಯಾಣ ಕರ್ನಾಟಕ ಭಾಗದ ಕಿರಿಯ ಮತ್ತು ಹಿರಿಯ ಆರೋಗ್ಯ ನಿರೀಕ್ಷಕರಿಗೆ ಮುಂಬಡ್ತಿ ನೀಡಲು ಕ್ರಮವಹಿಸಬೇಕೆಂದು ಸಲ್ಲಿಸಿರುವ ಮನವಿ ಬಗ್ಗೆ ಚರ್ಚಿಸಲಾಯಿತು. | ನಗರಾಭಿವೃದ್ಧಿ ಇಲಾಖೆ |
| 15 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರುಗಳಿಗೆ ಕಚೇರಿ ಅಧೀಕ್ಷಕರ ಹುದ್ದೆಗೆ ಸ್ಥಾನಪನ್ನ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 110 ಕಚೇರಿ ಅಧೀಕ್ಷಕರ ಹುದ್ದೆ ಮಂಜೂರಾಗಿದ್ದು, 2015ರಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೇಕಡ 80ರಷ್ಟು 66 ಅಧೀಕ್ಷಕರ ಹುದ್ದೆಗಳನ್ನು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ |

| | | | |
|---|---|---|---|
| | ಪದೋನ್ನತಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ನೌಕರರಿಗೆ ಅನ್ಯಾಯವಾಗಿರುವ ಬಗ್ಗೆ. | ನಿಗದಿಪಡಿಸಿರುತ್ತಾರೆ. ಆದರೆ, ಪ್ರಸ್ತುತ 45 ಕಚೇರಿ ಅಧೀಕ್ಷಕರ ಹುದ್ದೆ ಖಾಲಿ ಇದ್ದು, ಕೇವಲ 7 ಹುದ್ದೆಗಳಿಗೆ ಪದೋನ್ನತಿ ನೀಡಲು ನಿರ್ಧರಿಸಿರುತ್ತಾರೆ. ಇದರಿಂದ ಕಲ್ಯಾಣ ಕರ್ನಾಟಕ ಭಾಗದ ಪ್ರಥಮ ದರ್ಜೆ ಸಹಾಯಕರು ಪದೋನ್ನತಿಯಿಂದ ವಂಚಿತರಾಗಿರುತ್ತಾರೆ ಎಂದು ಮನವಿ ಸಲ್ಲಿಸಿ ಉಳಿದ ಹುದ್ದೆಗಳಿಗೂ ಮುಂಬಡ್ತಿ ನೀಡಲು ಕೋರಿರುವ ಬಗ್ಗೆ ಚರ್ಚಿಸಲಾಯಿತು. | |
| 16 | ಜಲ ಸಂಪನ್ಮೂಲ ಇಲಾಖೆಯ ಸಹಾಯಕ ಇಂಜಿನಿಯರ್ (ವಿಭಾಗ-2) ವೃಂದದಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-2) ವೃಂದಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಿದ ಹುದ್ದೆಗಳಿಗೆ ಪದೋನ್ನತಿ ನೀಡುವ ಕುರಿತು. | ಜಲ ಸಂಪನ್ಮೂಲ ಇಲಾಖೆಯಲ್ಲಿ 371ಜೆ ರಡಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-2) ಹುದ್ದೆಯಡಿ 28 ಹುದ್ದೆಗಳನ್ನು ಗುರುತಿಸಲಾಗಿದ್ದು, ಈ ಪೈಕಿ 6 ಹುದ್ದೆಗಳು ಭರ್ತಿಯಾಗಿದ್ದು, ಉಳಿದ 22 ಹುದ್ದೆಗಳನ್ನು ಭರ್ತಿ ಮಾಡುವಂತೆ ಇಲಾಖಾ ನೌಕರರು ಮನವಿ ಸಲ್ಲಿಸಿರುವ ಬಗ್ಗೆ ಚರ್ಚಿಸಲಾಯಿತು. | ಜಲ ಸಂಪನ್ಮೂಲ ಇಲಾಖೆ |
| 17 | ಪ್ರೌಢಶಾಲಾ ಸಹ ಶಿಕ್ಷಕರಿಂದ ಪ್ರೌಢಶಾಲಾ ಮುಖ್ಯ ಗುರುಗಳ ಹುದ್ದೆಗೆ ಬಡ್ತಿ ನೀಡುವುದನ್ನು ಒಂದೇ ಜೇಷ್ಠತಾ ಪಟ್ಟಿ ಅಂತಿಮವಾದ ನಂತರ ಮುಂಬಡ್ತಿ ನೀಡಲು ಆದೇಶ ನೀಡುವ ಕುರಿತು. | 371ಜೆ ರಡಿ ಮೀಸಲಾತಿ ಪಡೆದ ಶಿಕ್ಷಕರಿಗಿಂತ Non-HK ಕೋಟಾದ ಕಿರಿಯ ಶಿಕ್ಷಕರಿಗೆ ಮುಂಬಡ್ತಿ ನೀಡಲಾಗಿದ್ದು, ಸಚಿವ ಸಂಪುಟ ಉಪ ಸಮಿತಿ ಸಭೆಯ ನಿರ್ಣಯದಂತೆ ಒಂದೇ ಜೇಷ್ಠತಾ ಪಟ್ಟಿ ಪ್ರಕಟವಾದ ನಂತರ ಮುಂಬಡ್ತಿ ಪ್ರಕ್ರಿಯೆಗೆ ಚಾಲನೆ ನೀಡುವಂತೆ ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ(ರಿ), ಜಿಲ್ಲಾ ಘಟಕ, ಕಲಬುರಗಿ ರವರು ಸಲ್ಲಿಸಿರುವ ಮನವಿ ಕುರಿತು ಚರ್ಚಿಸಲಾಯಿತು. | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |
| 18 | ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕದ ರಾಜ್ಯವ್ಯಾಪಿ ಸ್ಥಳೀಯ ವೃಂದ ಜೇಷ್ಠತಾ ಪಟ್ಟಿ ಹಾಗೂ ಉಳಿಕೆ ಮೂಲ ವೃಂದದ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಬದಲಿಗೆ ಮಾತ್ರ ವೃಂದದಲ್ಲಿನ | ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ರಾಜ್ಯವ್ಯಾಪಿ ವೃಂದದ ಹುದ್ದೆಗಳಿಗೆ ಮುಂಬಡ್ತಿ ಪಡೆಯಲು ಕಡಿಮೆ ಅವಕಾಶಗಳಿದ್ದು, ಒಂದೇ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಮುಂಬಡ್ತಿ | ಸಿಆಸು ಇಲಾಖೆ |

| | | | |
|---|---|---|---|
| | ಒಂದೇ ಜೇಷ್ಠತಾ ಪಟ್ಟಿ ತಯಾರಿಸಿ ನೀಡುವಂತೆ ಸೂಕ್ತ ನಿಯಮಾದೇಶವನ್ನು ನೀಡುವಂತೆ ಕೋರುವ ಬಗ್ಗೆ. | ನೀಡುವಂತೆ ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಶೇಕಡ 8ರಷ್ಟು ಮೀಸಲಾತಿಯನ್ನು ಕಲ್ಯಾಣ ಕರ್ನಾಟಕ ಭಾಗದವರಿಗೆ ನೀಡುವಂತೆ ನೌಕರರು ಸಲ್ಲಿಸಿರುವ ಮನವಿಯ ಕುರಿತು. | |
| 19 | ಶ್ರೀ ಶಿವಪುತ್ರ. ಆರ್, ಶೀಫುಲಿಪಿಗಾರ ಇವರಿಗೆ ಕಚೇರಿ ವ್ಯವಸ್ಥಾಪಕರೆಂದು ಬಡ್ತಿ ನೀಡುವ ಬಗ್ಗೆ. | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | ಸಣ್ಣ ನೀರಾವರಿ ಇಲಾಖೆ (KBJNL) |
| 20 | ದಿನಾಂಕ: 29.06.2024ರಂದು ಪ್ರಕಟಿಸಲಾದ 27.04.1978 ರಿಂದ 31.12.2023ರವರೆಗಿನ ರಾಜ್ಯ ಮಟ್ಟದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (HK Local Cadre) ವಲಯ ಅರಣ್ಯಾಧಿಕಾರಿಗಳ (Range Forest Officers) ಜೇಷ್ಠತಾ ಪಟ್ಟಿಯನ್ನು ಆಧರಿಸಿ 2016ನೇ ತಂಡದ ವಲಯ ಅರಣ್ಯಾಧಿಕಾರಿಗಳಿಗೆ ಮುಂಬಡ್ತಿಯನ್ನು ನೀಡದೆ ಇರುವ ಕುರಿತು. | 2016ನೇ ತಂಡ ವಲಯ ಅರಣ್ಯಾಧಿಕಾರಿಗಳಿಗೆ ಸಹಾಯಕ ಅರಣ್ಯಾಧಿಕಾರಿ ಸಂರಕ್ಷಣಾ ಅಧಿಕಾರಿಗಳಾಗಿ ಮುಂಬಡ್ತಿ ನೀಡಬಾರದೆಂದು ಅರಣ್ಯ ಇಲಾಖೆಯ ಅಧಿಕಾರಿ ಸಲ್ಲಿಸಿರುವ ಮನವಿಯ ಕುರಿತು ಚರ್ಚಿಸಲಾಯಿತು. | ಅರಣ್ಯ ಇಲಾಖೆ |
| 21 | ಬೆಂಗಳೂರು ನಗರದಲ್ಲಿ 92 Wireless ಹುದ್ದೆಗಳಿದ್ದು, ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ 7 Wireless ಹುದ್ದೆಗಳನ್ನು ಗುರುತಿಸಿದ್ದು, 2 ಹುದ್ದೆಗಳನ್ನು ಮಾತ್ರ ನೀಡಿ ಉಳಿದ 5 ಹುದ್ದೆಗಳನ್ನು Non-HK ರವರಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡಿರುತ್ತಾರೆ. ಆದ್ದರಿಂದ | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಗೃಹ ಇಲಾಖೆಯ ಮೂಲಕ ವೈರ್‌ಲೇಸ್ ಇಲಾಖೆಗೆ ಕಳುಹಿಸಿ ಪೂರ್ಣ ವರದಿ ಪಡೆಯಲು ಸಮಿತಿಯು ಸೂಚಿಸಿತು. | ವೈರ್‌ಲೇಸ್ ಇಲಾಖೆಯಿಂದ ಕ್ರಮವಹಿಸಿ ಗೃಹ ಇಲಾಖೆಯ ಮೂಲಕ ಅನುಪಾಲನಾ ವರದಿಯನ್ನು ಸಲ್ಲಿಸುವುದು. |

| | | | |
|---|---|---|---|
| | ಸದರಿ ಹುದ್ದೆಗಳನ್ನು HK ರವರಿಗೆ ನೀಡುವ ಬಗ್ಗೆ. | | |
| 22 | ಕರ್ನಾಟಕ ರಾಜ್ಯ ಪೊಲೀಸ್ ವೈರಲೆಸ್ ಘಟಕದಲ್ಲಿ ಸ್ಥಳೀಯರಿಗೆ 371ಜೆ ಮೀಸಲಾತಿ ಜಾರಿಯಲ್ಲಿ ಆಗಿರುವ ಲೋಪದೋಷಗಳು ಸರಿಪಡಿಸಲು ಮತ್ತು ಈ ಪ್ರತ್ಯೇಕವಾಗಿ ರಚನೆ ಮಾಡಿರುವ ಜೇಷ್ಠತಾ ಪಟ್ಟಿಗಳನ್ನು ರದ್ದುಪಡಿಸಿ ಒಂದೇ ಜೇಷ್ಠತಾ ಪಟ್ಟಿ ರಚಿಸಲು ಕಲ್ಯಾಣ ಕರ್ನಾಟಕ ಮೀಸಲಾತಿಯನ್ನು ಎಸ್.ಸಿ/ಎಸ್.ಟಿ ಮೀಸಲಾತಿಯಂತೆ ರೋಸ್ಟರ್ ಬಿಂದುಗಳನ್ನು 2014ನೇ ಸಾಲಿನಿಂದ ಗುರುತಿಸಿ ಮುಂಬಡ್ತಿಯಿಂದ ವಂಚಿತರಾದವರಿಗೆ ನಿಯಮಾನುಸಾರ ಮರು ಮುಂಬಡ್ತಿಗಳು ನೀಡಲು ಆದೇಶ ಹೊರಡಿಸಲು ಕ್ರಮ ಕೈಗೊಳ್ಳುವ ಕುರಿತು. | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಗೃಹ ಇಲಾಖೆಯ ಮೂಲಕ ವೈರ್‌ಲೇಸ್ ಇಲಾಖೆಗೆ ಕಳುಹಿಸಿ ಪೂರ್ಣ ವರದಿ ಪಡೆಯಲು ಸಮಿತಿಯು ಸೂಚಿಸಿತು. | ವೈರ್‌ಲೇಸ್ ಇಲಾಖೆಯಿಂದ ಕ್ರಮವಹಿಸಿ ಗೃಹ ಇಲಾಖೆಯ ಮೂಲಕ ಅನುಪಾಲನಾ ವರದಿಯನ್ನು ಸಲ್ಲಿಸುವುದು. |
| 23 | ಹೈದ್ರಾಬಾದ್ ಕರ್ನಾಟಕ ಎಸ್‌ಸಿ/ಎಸ್‌ಟಿ ಇಂಜಿನಿಯರ್‌ಗಳ ಸಂಘ, ಕಲಬುರಗಿ (ಈಶಾನ್ಯ) ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ 371(ಜೆ) ಸಹಾಯಕ ಇಂಜಿನಿಯರ್ ನೌಕರರ ಜೇಷ್ಠತೆಯನ್ನು 2014 ರಿಂದ ಮರು ನಿಗದಿಪಡಿಸುವ ಕುರಿತು. | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | ಲೋಕೋಪಯೋಗಿ ಇಲಾಖೆ |
| 24 | ಕಲ್ಯಾಣ ಕರ್ನಾಟಕ ಪ್ರದೇಶದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ |

| | | | |
|---|---|---|---|
| | ಸಂಘ, ಕಲಬುರಗಿ, ಸಂವಿಧಾನದ ಅನುಚ್ಛೇದ 371ಜೆ ಮೀಸಲಾತಿಯನ್ವಯ ದಿನಾಂಕ: 01.01.2023 ರಿಂದ ಪೂರ್ವಾನ್ವಯವಾಗುವಂತೆ ಆರ್ಥಿಕ ಸೌಲಭ್ಯದೊಂದಿಗೆ ಮುಂಬಡ್ತಿ ನೀಡುವ ಬಗ್ಗೆ. | ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | |
| 25 | ಕಲ್ಯಾಣ ಕರ್ನಾಟಕ ಪ್ರದೇಶದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ, ಕಲಬುರಗಿ, ಸಂವಿಧಾನದ ಅನುಚ್ಛೇದ 371ಜೆ ಮೀಸಲಾತಿಯನ್ವಯ ದಿನಾಂಕ: 04.01.2024ರ 371ಜೆ ಅನುಷ್ಠಾನದ ಸಚಿವ ಸಂಪುಟದ ಉಪ ಸಮಿತಿ ಸಭೆಯ ತೀರ್ಮಾನದಂತೆ ಕರ್ನಾಟಕ ಸರ್ಕಾರಿ ಸಚಿವಾಲಯದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ ಅರ್ಹ ನೌಕರರ ಜೇಷ್ಠತೆಯನ್ನು ದಿನಾಂಕ: 21.04.2024ರಿಂದ ಜಾರಿಗೆ ಬರುವಂತೆ ಕಾಲ್ಪನಿಕ ಜೇಷ್ಠತೆ ನಿಗದಿಪಡಿಸಿ ಮುಂಬಡ್ತಿಯನ್ನು ಪೂರ್ವಾನ್ವಯವಾಗುವಂತೆ ನಿರ್ಣಯಿಸಲಾಗಿದ್ದು, ಅದರಂತೆಯೇ ಕಲ್ಯಾಣ ಕರ್ನಾಟಕದ ಎಲ್ಲಾ ಇಲಾಖೆ ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿ/ನೌಕರರಿಗೂ ದಿನಾಂಕ: 01.11.2013 ರಿಂದ ಅನ್ವಯವಾಗುವ ಬಗ್ಗೆ. | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ |
| 26 | ರಾಜ್ಯ ಮಟ್ಟದ ಸ್ಥಳೀಯ ವೃಂದದ (ಶೇ% 8)ರಷ್ಟು ಶಿಕ್ಷಣಾಧಿಕಾರಿಗಳ /ತತ್ಸಮಾನ ವೃಂದದ ಹುದ್ದೆಗಳನ್ನು ಮೀಸಲಿರಿಸುವ ಹಾಗೂ | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ |

| | | | |
|---|---|---|---|
| | ನಿಯಮ ಬಾಹಿರವಾಗಿ ಸ್ಥಳೀಯ ವೃಂದದಲ್ಲಿ ಸೇರಿರುವ ಅಧಿಕಾರಿಗಳನ್ನು ಪಟ್ಟಿಯಿಂದ ಕೈಬಿಡುವ ಕುರಿತು. | ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | |
| 27 | ಕಲ್ಯಾಣ ಕರ್ನಾಟಕ ಪ್ರದೇಶದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ, ಕಲಬುರಗಿ, ದಿನಾಂಕ: 04.01.2024ರಂದು ಜರುಗಿಸಲಾದ ಸಚಿವ ಸಂಪುಟದ ಉಪ ಸಮಿತಿಯಲ್ಲಿ ನಿರ್ಣಯಿಸಿದಂತೆ ರಾಜ್ಯ ವೃಂದದಲ್ಲಿ ಜೇಷ್ಠತೆಯನ್ನು ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ ಪ್ರಕಟಿಸುವುದನ್ನು ಕೈಬಿಟ್ಟು ಒಂದೇ ಜೇಷ್ಠತೆಯನ್ನು ಪ್ರಕಟಿಸಿ, ಜೇಷ್ಠತೆ 2 371(ಜಿ)GEN, 371(j)SC, 371(j)ST, & 371(j) ಟಾರ್ಗೆಟ್ ಮೀಸಲಾತಿ ಬದಲು ರಿಕ್ತ ಸ್ಥಾನ ಆಧಾರಿತ 8% ಮೀಸಲಾತಿಯನ್ನು ನಿಗದಿಪಡಿಸುವುದು. | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ |
| 28 | ಕಲ್ಯಾಣ ಕರ್ನಾಟಕ ಪ್ರದೇಶದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಪತ್ರಾಂಕಿತ ಅಧಿಕಾರಿಗಳ ಸಂಘ, ಕಲಬುರಗಿ, ರಾಜ್ಯ ಮಟ್ಟದಲ್ಲಿ ನಿಗದಿಪಡಿಸಿದ | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ |

| | | | |
|---|---|---|---|
| | 8% ಮೀಸಲಾತಿ ಪ್ರಮಾಣವು ಅವೈಜ್ಞಾನಿಕವಾಗಿದ್ದು, ಮಂಜೂರಾದ ಹುದ್ದೆಗಳಲ್ಲಿ ರಾಜ್ಯ ಮಟ್ಟದ ಕಚೇರಿಗಳಲ್ಲಿ ಕರ್ನಾಟಕ ರಾಜ್ಯದ ಒಟ್ಟಾರೆ ಜನ ಸಂಖ್ಯೆಯಲ್ಲಿ ಕಲ್ಯಾಣ ಕರ್ನಾಟಕದ ಒಟ್ಟು ಜನ ಸಂಖ್ಯೆ ಪ್ರತಿ ಶತದಷ್ಟು ಅಥವಾ ಗರಿಷ್ಟ 20% ಮೀಸಲಾತಿಯನ್ನು ಮತ್ತು ರಾಜ್ಯದ ಹೊರಗಿನ ಕಚೇರಿಗಳಲ್ಲಿ 8% ರಷ್ಟು ಹುದ್ದೆಗಳನ್ನು ಮೀಸಲಿಡಬೇಕು. ರಾಜ್ಯದ ಇತರೆ ಜಿಲ್ಲೆಗಳಲ್ಲೂ ಮೀಸಲಾತಿ ದೊರಕಿಸಬೇಕು. | | |
| 29 | ಕಲ್ಯಾಣ ಕರ್ನಾಟಕ ಭಾಗದ ಡಿ.ಎಸ್.ಪಿ ವೃಂದದ ಅಧಿಕಾರಿಗಳಿಗೆ "ಜೇಷ್ಠತೆಯನ್ನು ಕಾಲ್ಪನಿಕವಾಗಿ ನಿಗದಿಪಡಿಸಿ" ಪ್ರಕಟಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಗೃಹ ಮತ್ತು ಒಳಾಡಳಿತ ಇಲಾಖೆಗೆ ನಿರ್ದೇಶನ ನೀಡುವ ಕುರಿತು. | ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸ್ವೀಕೃತ ಮನವಿಯನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಿ ಕ್ರಮವಹಿಸಿರುವ ಬಗ್ಗೆ ಅನುಪಾಲನಾ ವರದಿ ಪಡೆಯಲು ಸೂಚಿಸಲಾಯಿತು. | ಒಳಾಡಳಿತ ಇಲಾಖೆ |

**ಕೈಗೊಂಡ ಪ್ರಮುಖ ಇತರೆ ನಿರ್ಣಯಗಳು**

1. 371ಜೆ ಸಚಿವ ಸಂಪುಟ ಉಪ ಸಮಿತಿಯು ಕೈಗೊಂಡ ನಿರ್ಣಯಗಳ ಮೇಲ ಸಿಆಸುಇಲಾಖೆ ಹೊರಡಿಸಿರುವ ಆದೇಶ/ಸುತ್ತೋಲೆಗಳ ಬಗ್ಗೆ, ನೇರ ನೇಮಕಾತಿ ಮತ್ತು ಮುಂಬಡ್ತಿ ಕುರಿತು ವಿವಿಧ ನ್ಯಾಯಾಲಯ/ನ್ಯಾಯ ಮಂಡಳಿಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಕಾಲಮಿತಿಯಲ್ಲಿ ಇತ್ಯರ್ಥಪಡಿಸಲು ಕಾನೂನು ಇಲಾಖೆ, ಅಡ್ವಕೇಟ್ ಜನರಲ್ ರವರು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸಭೆ ನಡೆಸಿ, ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಣೆ ಮಾಡುತ್ತಿರುವ ವಕೀಲರಿಗೆ ಸೂಕ್ತ ದಾಖಲೆ ಮತ್ತು ಮಾಹಿತಿಗಳನ್ನು ನೀಡಿ ನಿಗದಿತ ಕಾಲಮಿತಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಕ್ರಮವಹಿಸುವುದು.
2. ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ 371ಜೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರಗಳು ಮತ್ತು ಇಲಾಖೆಗಳಲ್ಲಿ ಇರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಲು ಕ್ರಮವಹಿಸುವುದು.

3. 2025-26ನೇ ಸಾಲಿನಲ್ಲಿ 371ಜೆ ಗೆ ಸಂಬಂಧಿಸಿದಂತೆ ನೇರ ನೇಮಕಾತಿ ಮಾಡುವ ಬಗ್ಗೆ UPSC ಮಾದರಿಯಲ್ಲಿ ಎಲ್ಲಾ ಇಲಾಖೆಗಳಿಗೆ ವಾರ್ಷಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಸಿಆಸುಇಲಾಖೆ ನೀಡುವುದು.

***(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಿಆಸುಇಲಾಖೆ)***

1. 371ಜೆ ಸಭೆಗೆ ಇನ್ನೂ ಮುಂದೆ ಅಧೀನ ಅಧಿಕಾರಿಗಳನ್ನು ನಿಯೋಜಿಸದೇ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಕಡ್ಡಾಯವಾಗಿ ಭಾಗವಹಿಸುವುದು.
2. 371ಜೆ ವ್ಯಾಪ್ತಿಯ ಮುಂಬಡ್ತಿ ಶೇಕಡ 8ರಷ್ಟು ಮುಂಬಡ್ತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ಇಲಾಖೆ ಮುಖ್ಯಸ್ಥರು ಆಧ್ಯತೆಯ ಮೇಲೆ ಕ್ರಮವಹಿಸಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಂದಿನ ಸಭೆಯೊಳಗಾಗಿ ಯೋಜನಾ ಇಲಾಖೆಗೆ ವರದಿ ಮಾಡುವುದು.
3. ಮುಂಬಡ್ತಿಗೆ ಸಂಬಂಧಿಸಿದಂತೆ ಇಲಾಖೆಗಳಲ್ಲಿ ಬಾಕಿ ಇರುವ ಹುದ್ದೆಗಳಿಗೆ 2 ತಿಂಗಳ ಕಾಲಮಿತಿಯೊಳಗೆ ಎಲ್ಲಾ ಮುಂಬಡ್ತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸಚಿವ ಸಂಪುಟದ ಉಪ ಸಮಿತಿಗೆ ವರದಿ ಮಾಡುವುದು.
4. ಎಲ್ಲಾ ಇಲಾಖೆಗಳು 371ಜೆ ಅಡಿ ನೇರ ನೇಮಕಾತಿ/ಮುಂಬಡ್ತಿಯಡಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಿ ಸದರಿ ಮಾಹಿತಿಯನ್ನು ನಿಖರವಾಗಿ ಗೂಗಲ್‌ಶೀಟ್ ನಲ್ಲಿ update ಮಾಡಲು ಕ್ರಮವಹಿಸುವುದು.
5. 371(ಜೆ)ಗೆ ಸಂಬಂಧಿಸಿದಂತೆ ಸಚಿವ ಸಂಪುಟ ಉಪಸಮಿತಿಗೆ ಸ್ವೀಕೃತವಾಗಿರುವ ಮನವಿ/ದೂರುಗಳನ್ನು ಯೋಜನಾ ಇಲಾಖೆಯು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಇಲಾಖೆಗಳು ಕೈಗೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಸಭೆಗೆ ನೀಡುವುದು.

***(ಕ್ರಮ: ಎಲ್ಲಾ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು)***

**::ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು::**

**(ಪ್ರಿಯಾಂಕ್ ಖರ್ಗೆ)**
ಅಧ್ಯಕ್ಷರು,
ಸಚಿವ ಸಂಪುಟದ ಉಪಸಮಿತಿ
(371ಜೆ)
ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಹಾಗೂ
ಐ.ಟಿ.ಬಿ.ಟಿ ಸಚಿವರು.

ಅನುಬಂಧ-05

**<u>ದಿನಾಂಕ: 26.11.2025ರಂದು ಭಾರತದ ಸಂವಿಧಾನದ ಅನುಚ್ಛೇದ 371 (ಜೆ)ರಡಿ ಹೊರಡಿಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯ ಬಗ್ಗೆ ರಚಿಸಲಾದ ಸಚಿವ ಸಂಪುಟ ಉಪಸಮಿತಿ ಸಭೆಯ ನಡವಳಿಗಳು:</u>**

ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರು ಮತ್ತು ಅಧಿಕಾರಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಲಗತ್ತಿಸಿದೆ

ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ(ಎಡಿಬಿ), ಯೋಜನಾ ಇಲಾಖೆ ಇವರು ಸಚಿವ ಸಂಪುಟದ ಉಪಸಮಿತಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪ್ರಿಯಾಂಕ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಸಚಿವರನ್ನು ಹಾಗೂ ಸಮಿತಿಯ ಸದಸ್ಯರುಗಳಾದ ಶ್ರೀ ಶರಣ ಪ್ರಕಾಶ್ ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಸಚಿವರನ್ನು ಹಾಗೂ ಶ್ರೀ ರಹೀಮ್ ಖಾನ್ ರವರು, ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರನ್ನು ಶ್ರೀ ಭೋಸರಾಜು, ಮಾನ್ಯ ಸಣ್ಣ ನೀರಾವರಿ ಸಚಿವರು ಹಾಗೂ ಮಾನ್ಯ ಮುಖ್ಯ ಕಾರ್ಯದರ್ಶಿರವರನ್ನು ಮತ್ತು ಸಭೆಯಲ್ಲಿ ಹಾಜರಿದ್ದ, ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಸಚಿವ ಸಂಪುಟದ ಉಪ ಸಮಿತಿಯ ಮಾನ್ಯ ಅಧ್ಯಕ್ಷರನ್ನು ಕೋರಿದರು.

ಸಮಿತಿಯ ಮಾನ್ಯ ಅಧ್ಯಕ್ಷರು, ದಿನಾಂಕ: 10.03.2025ರಂದು ನಡೆದ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ಮಾಡಲು ಸೂಚಿಸಿದರು. ಆದರಂತೆ ಅನುಪಾಲನಾ ವರದಿಯನ್ನು ಈ ಕೆಳಕಂಡಂತೆ ಪರಿಶೀಲಿಸಲಾಯಿತು.

1. **ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ-**

ದಿನಾಂಕ: 16.11.2016ರ ಸುತ್ತೋಲೆಯಂತೆ 4ನೇ ಅಂಶವನ್ನು ಮುಂದುವರಿಸುವುದು. "ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿಯನ್ನು ತಯಾರಿಸುವಲ್ಲಿ ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳನ್ನು ಪರಿಗಣಿಸಿ ಆಯ್ಕೆ ಪಟ್ಟಿಯನ್ನು ತಯಾರಿಸುವುದು. ತದನಂತರ, ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಎದುರಾಗಿ ಅರ್ಹ ಸ್ಥಳೀಯ ಅಭ್ಯರ್ಥಿಗಳ ಆಯ್ಕೆಪಟ್ಟಿ ತಯಾರಿಸುವುದು". ಈ ಬಗ್ಗೆ ಸಿಆಸುಇಲಾಖೆ ಕೂಡಲೇ ಸ್ಪಷ್ಟವಾದ ಸುತ್ತೋಲೆ ಹೊರಡಿಸಲು ಸಮಿತಿಯು ತೀರ್ಮಾನಿಸಿರುವ ಬಗ್ಗೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ದಿನಾಂಕ: 03.06.2025ರಂದು, ದಿನಾಂಕ: 10.03.2025ರಂದು ನಡೆದ ಸಭೆಯ ನಡವಳಿಯಂತೆ ಸುತ್ತೋಲೆ ಹೊರಡಿಸಿರುವುದನ್ನು ಪರಿಶೀಲಿಸಿ ಒಪ್ಪಿಗೆ ನೀಡಲಾಯಿತು.**

2. ಸಚಿವ ಸಂಪುಟ ಉಪ ಸಮಿತಿಯ ನಿರ್ಣಯ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 01.08.2023 (ತಿದ್ದುಪಡಿ ಆದೇಶ ದಿನಾಂಕ 26.10.2023) ತೀರ್ಪಿನನ್ವಯ ಪ್ರಾಥಮಿಕ ಹಂತದ ಕ್ರಮವಾಗಿ ದಿನಾಂಕ 22.07.2024, ಸಂಖ್ಯೆ: ಸಿಆಸುಇ 1 4 5 ಆಸೇ 2024ರಲ್ಲಿ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಸಹಾಯಕ ವೃಂದದ ನೌಕರರ ಅರ್ಹತಾ ದಿನಾಂಕವನ್ನು ದಿನಾಂಕ 21.04.2014ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಿ ಜೇಷ್ಠತೆಯನ್ನು ಮರುಹೊಂದಾಣಿಕೆ ಮಾಡಿ ಆದೇಶಿಸಲಾಗಿದೆ. ಅದೇ ರೀತಿಯಾಗಿ ಸದರಿ ಮೀಸಲಾತಿ ಅನ್ವಯವಾಗುವ ಇನ್ನುಳಿದ ವೃಂದಗಳಿಗೂ ಅಳವಡಿಸಲು ಪರಿಶೀಲಿಸಲಾಗುತ್ತಿದೆ ಎಂಬ ಮಾಹಿತಿ ಬಗ್ಗೆ ಸಮಿತಿಯ ಅಧ್ಯಕ್ಷರು/ಸದಸ್ಯರುಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು ಹಾಗೂ ಕ್ರಮವಹಿಸದ ಸಿಆಸುಇಲಾಖೆ ಅಧಿಕಾರಿಗಳ ನಡತೆ ಬಗ್ಗೆ ವಿಚಾರಣೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಿದರು ಮತ್ತು ಮಾರ್ಚ್ 31ರ ಒಳಗೆ ಮುಂಬಡ್ತಿ ನೀಡಲು ಸಮಿತಿಯು ಸೂಚಿಸಿತು

**ಸಚಿವ ಸಂಪುಟ ಉಪಸಮಿತಿಯ ನಿರ್ಣಯದನ್ವಯ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ ಸಹಾಯಕ ಹಿರಿಯ ಸಹಾಯಕ, ಶಾಖಾಧಿಕಾರಿ, ಶೀಘ್ರಲಿಪಿಗಾರರು, ಹಿರಿಯ ಶೀಘ್ರಲಿಪಿಗಾರರು, ಸರ್ಕಾರದ ಅಧೀನ ಕಾರ್ಯದರ್ಶಿ, ಪತ್ರಾಂಕಿತ ಆಪ್ತ ಸಹಾಯಕರ ವೃಂದಗಳ ಅಧಿಕಾರಿ/ನೌಕರರುಗಳಿಗೆ ಜೇಷ್ಠತೆಯನ್ನು ಮರು ನಿಗದಿಪಡಿಸಲಾಗಿರುವುದನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು.**

3. 371 ಜೆ ಭಾಗದ ರಾಜ್ಯ ವೃಂದದಲ್ಲಿ ಶೇ.8ರಷ್ಟು ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ಮೀಸಲಿಡುತ್ತಿದ್ದು, ಜೇಷ್ಠತಾ ಪಟ್ಟಿಗಳನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗುತ್ತಿದೆ. ಇದರಿಂದಾಗಿ ರಾಜ್ಯ ವೃಂದದ ಮೀಸಲಾತಿ ಅಡಿಯಲ್ಲಿ ಬಡ್ತಿ ಪಡೆದವರ ಹುದ್ದೆಗಳು ಮುಂಬಡ್ತಿ, ನಿವೃತ್ತಿ, ಸ್ವಯಂ ನಿವೃತ್ತಿ ಅಥವಾ ಮರಣ ಮುಂತಾದ ಕಾರಣಗಳಿಂದ ಹುದ್ದೆ ಖಾಲಿಯಾಗದಿದ್ದಲ್ಲಿ ನಂತರದ ಜೇಷ್ಠತೆಯಲ್ಲಿರುವವರಿಗೆ ಬಡ್ತಿಯ ಅವಕಾಶ ದೊರೆಯುವುದಿಲ್ಲ. ಇವರಿಗಿಂತ ಕಿರಿಯರಾದವರಿಗೆ ರಾಜ್ಯ ವಲಯದಲ್ಲಿ ಬಡ್ತಿ ದೊರೆತರು ಕಲ್ಯಾಣ ಕರ್ನಾಟಕ ಭಾಗದವರಿಗೆ ಬಡ್ತಿ ದೊರೆಯಲು ಅವಕಾಶವೇ ಇರುವುದಿಲ್ಲ.

ಆದ್ದರಿಂದ, ರಾಜ್ಯ ವೃಂದದಲ್ಲಿ ಜೇಷ್ಠತೆಯನ್ನು ಕಲ್ಯಾಣ ಕರ್ನಾಟಕದವರಿಗೆ ಪ್ರತ್ಯೇಕವಾಗಿ

ಪ್ರಕಟಿಸುವುದನು ಕೈಬಿಟ್ಟು ಒಂದೇ ಜೇಷ್ಠತೆಯನ್ನು ಪ್ರಕಟಿಸುವುದು. ಸದರಿ ಜೇಷ್ಠತೆಯಲ್ಲಿ ಅಧಿಕಾರಿ/ನೌಕರರ ಹೆಸರಿನ ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ನಮೂದಿಸುವ ರೀತಿಯಲ್ಲೇ 371ಜೆ SC, 371ಜೆ ST, 371ಜೆ ಸಾಮಾನ್ಯ, 371ಜೆ ಮಹಿಳೆ ಎಂದು ನಮೂದಿಸುವುದು. ಹಾಗೂ ರಾಜ್ಯ ವೃಂದದಲ್ಲಿ ಟಾರ್ಗೆಟ್ ಮೀಸಲಾತಿ ಬದಲಿ ರಿಕ್ತ ಸ್ಥಾನ ಆಧಾರಿತ ಶೇ.8 ರಷ್ಟು ಮೀಸಲಾತಿಯನ್ನು ನಿಗದಿಪಡಿಸಲು ಸೂಕ್ತ ತಿದ್ದುಪಡಿ ಪ್ರಸ್ತಾವನೆಯನ್ನು 7 ದಿನದೊಳಗೆ ಮಂಡಿಸಲು ಸಚಿವ ಸಂಪುಟ ಉಪಸಮಿತಿಯು ಅನುಮೋದಿಸುವ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

ಈಗಾಗಲೇ ಎಲಾ ಇಲಾಖೆಗಳಲ್ಲಿ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳ ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಮುಂಬಡ್ತಿಗಳನ್ನು ನೀಡಲಾಗುತ್ತಿದ್ದು, ಪುನಃ ಒಂದೇ ಜೇಷ್ಠತಾ ಪಟ್ಟಿಯನು ಪ್ರಕಟಿಸಲು ನಿರ್ಣಯ ಕೈಗೊಂಡಲ್ಲಿ, ಈಗಾಗಲೇ ಮಾಡಲಾಗಿರುವ ಮುಂಬಡ್ತಿಗಳಲ್ಲಿ ವ್ಯತ್ಯಾಸಗಳಾಗುವ ಸಾಧ್ಯತೆಗಳು ಹೆಚ್ಚಾಗಿದ್ದು ಎಲ್ಲಾ ಇಲಾಖೆಗಳಲ್ಲಿ ನ್ಯಾಯಾಲಯ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಯಿರುತ್ತದೆ ಎಂದು ವರದಿ ಮಾಡಿರುವುದನ್ನು ಸಮಿತಿಯು ಪರಿಶೀಲಿಸಿತು.

ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರು ಸಚಿವ ಸಂಪುಟ ಉಪ ಸಮಿತಿಯು ಕೈಗೊಂಡ ನಿರ್ಣಯಗಳನು ಪಾಲಿಸಿ ಅನುಪಾಲನಾ ವರದಿಯನು ಸಲ್ಲಿಸದಿರುವುದನು ಗಂಭೀರವಾಗಿ ಪರಿಗಣಿಸಿ ಯೋಜನಾ ಇಲಾಖೆಯು ವಿವಿಧ ದಿನಾಂಕಗಳಂದು ಪತ್ರ ಬರೆದಿದ್ದರೂ, ಸಿಆಸುಇಲಾಖೆಯು ನಿರ್ಲಕ್ಷತೆ ವಹಿಸಿರುವುದಲ್ಲದೇ ಸಮಿತಿಯ ನಿರ್ಣಯವನ್ನು ಪಾಲಿಸದೇ ಬೇಜಾವಬ್ದಾರಿಯಿಂದ ನಡೆದುಕೊಂಡಿರುತ್ತದೆ ಹೀಗಾದರೆ, ಇಲಾಖಾ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು ಹಾಗೂ ನ್ಯಾಯಾಲಯದ ಆದೇಶದಂತೆ 2025ರ ಮಾರ್ಚ್-31ರೊಳಗಾಗಿ ಸೂಕ್ತ ಆದೇಶಗಳನ್ನು ಹೊರಡಿಸಲು ಸೂಚಿಸಲಾಯಿತು.

ಈ ಮೇಲ್ಕಂಡ ಸಭೆಯ ನಿರ್ಣಯವನು ಜಾರಿ ಮಾಡದೇ ಇರುವ ಬಗ್ಗೆ ಸಮಿತಿಯು ಪರಿಶೀಲಿಸಿತು. ಈ ಸಂದರ್ಭದಲ್ಲಿ ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿರವರು ಒಂದೇ ಜೇಷ್ಠತೆಯನು ಪ್ರಕಟಿಸುವುದಕ್ಕೆ ಸಂಬಂಧಿಸಿದಂತೆ, ಸಿಆಸುಇಲಾಖೆ ನೀಡಿರುವ ಅನುಪಾಲನಾ ವರದಿಯಲ್ಲಿ ಕಾನೂನು ಇಲಾಖೆ ನೀಡಿರುವ ಅಭಿಪ್ರಾಯವನ್ನು ಸಭೆಯ ಗಮನಕ್ಕೆ ತಂದರು.

**ಕಾನೂನು ಇಲಾಖೆಯ ಅಭಿಪ್ರಾಯ:-**

"By bringing common seniority list from 06.11.2023 there may be chances that some of the officials may have to be reverted so to save the institutions from uncalled for litigation, it is better to continue present rule."

ಈ ಹಿನ್ನೆಲೆಯಲ್ಲಿ ಪ್ರಸ್ತುತ ಇರುವ ನಿಯಮಗಳನ್ನೇ ಮುಂದುವರೆಸುವುದು ಸೂಕ್ತವಾಗಿರುತ್ತದೆ.

ಈಗಾಗಲೇ ಎಲಾ ಇಲಾಖೆಗಳಲ್ಲಿ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳ ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ ಮುಂಬಡ್ತಿಗಳನ್ನು ನೀಡಲಾಗುತ್ತಿದ್ದು, ಪುನಃ ಒಂದೇ ಜೇಷ್ಠತಾ ಪಟ್ಟಿಯನು ಪ್ರಕಟಿಸಲು ನಿರ್ಣಯ ಕೈಗೊಂಡಲ್ಲಿ, ಈಗಾಗಲೇ ಮಾಡಲಾಗಿರುವ ಮುಂಬಡ್ತಿಗಳಲ್ಲಿ ವ್ಯತ್ಯಾಸಗಳಾಗುವ ಸಾಧ್ಯತೆಗಳು ಹೆಚ್ಚಾಗಿದ್ದು ಎಲ್ಲಾ ಇಲಾಖೆಗಳಲ್ಲಿ ನ್ಯಾಯಾಲಯ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಯಿರುತ್ತದೆ.

ಇದೇ ವಿಷಯದ ಕುರಿತಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ರಿಟ್ ಅರ್ಜಿ ಸಂಖ್ಯೆ: 2487-2488/2022ರಲ್ಲಿ ದಿನಾಂಕ: 06.09.2023ರಂದು ನೀಡಿರುವ ತೀರ್ಪಿನ ವಿರುದ್ಧ ಆರ್ಥಿಕ ಇಲಾಖೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 5685/2024ರಲ್ಲಿ ಮೇಲ್ಮನವಿಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಕರಣವು ದಿನಾಂಕ25.04.2025ರಂದು ವಿಚಾರಣೆಗೆ ಬಂದಿರುತ್ತದೆ. ಹಾಗೂ ಈಗಾಗಲೇ ನೀಡಿರುವ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆಯವರಗೆ ಮುಂದುವರೆಸಿರುತ್ತದೆ.

ಈ ಮೇಲಿನ ಅನುಪಾಲನಾ ವರದಿಯನ್ನು ಪರಿಶೀಲಿಸಿದ ಸಮಿತಿಯು ಕಾನೂನು ಇಲಾಖೆಯ ಅಧಿಕಾರಿಗಳಿಂದ ವಿವರಣೆ ಕೇಳಿತು, ಸಭೆಯಲ್ಲಿ ಹಾಜರಿದ್ದ, ಕಾನೂನು ಇಲಾಖೆಯ ಅಧಿಕಾರಿಗಳು ನಾನು ಹೊಸದಾಗಿ ಬಂದಿದ್ದೇನೆ, ಕಡತ ಪರಿಶೀಲಿಸಿ ಅಭಿಪ್ರಾಯ ನೀಡುತ್ತೇನೆ ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿ ಪರಿಶೀಲಿಸಿದ ಸಮಿತಿಯ ಮಾನ್ಯ ಅಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಘನತೆವೆತ್ತ ರಾಜ್ಯಪಾಲರ ಆದೇಶದಂತೆ ರಚನೆಯಾಗಿರುವ ಸಮಿತಿಯ ನಿರ್ಣಯವನ್ನು ಪಾಲನೆ ಮಾಡದ ಅಧಿಕಾರಿಗಳ ನಡತೆಯನ್ನು ಪರಿಶೀಲಿಸಿ ಕ್ರಮವಹಿಸಬೇಕಾಗುತ್ತದೆ. ಕೂಡಲೇ ಸಮಿತಿಯ ನಿರ್ಣಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ಈ ಬಗ್ಗೆ 10 ದಿನದೊಳಗೆ ಪ್ರತ್ಯೇಕ ಸಭೆ ಕರೆಯಲಾಗುವುದು, ಸದರಿ ಸಭೆಯಲ್ಲಿ ಏನು ತೊಂದರೆಗಳಿವೆ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಬೇಕು. ಸಭೆಯಲ್ಲಿ ಸುಮ್ಮನೆ ಕೂರುವುದು ನಿರ್ಣಯ ಕೈಗೊಂಡ ನಂತರ ಜಾರಿ ಮಾಡದೇ ಇರುವುದು ಅಧಿಕಾರಿಗಳ ಕರ್ತವ್ಯಲೋಪವಾಗುತ್ತದೆ ಎಂದು ತಿಳಿಸಿದರು ಹಾಗೂ ಕಾನೂನು ಶಾಖೆಯು 371ಜೆಗೆ ಸಂಬಂಧಿಸಿದಂತೆ ಮಾಹಿತಿ ಇರುವ ಒಬ್ಬ ಅಧಿಕಾರಿಯನ್ನು

ಪ್ರತ್ಯೇಕವಾಗಿ ನಿಯೋಜಿಸುವಂತೆ ಸೂಚಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಯಾವ ಯಾವ ನ್ಯಾಯಾಲಯದಲ್ಲಿ ಯಾವ ಯಾವ ಪ್ರಕರಣಗಳು ಬಾಕಿ ಇದೆ. ಉದಾ: ರಾಜ್ಯ ಉಚ್ಚ ನ್ಯಾಯಾಲಯ, ಹುಬ್ಬಳಿ, ಧಾರವಾಡ ವಿಭಾಗೀಯ ಪೀಠ, ಕಲಬುರಗಿಯ ವಿಭಾಗೀಯ ಪೀಠಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಪ್ರಕರಣಗಳು ದಾಖಲಾಗಿದ್ದು, ಎಲ್ಲಾ ಪ್ರಕರಣಗಳನ್ನು ಒಟ್ಟುಗೂಡಿಸಿ ಕಾನೂನು ಇಲಾಖೆ ಮತ್ತು ಸಿಆಸುಇಲಾಖೆ ಜಂಟಿಯಾಗಿ ಇತ್ಯರ್ಥಪಡಿಸಲು ಹಾಗೂ ಕೈಗೊಂಡ ಕ್ರಮದ ಬಗ್ಗೆ ಸಮಿತಿಗೆ ವರದಿ ನೀಡಲು ಸೂಚಿಸಿದರು.

371ಜೆ ಕಾಯ್ದೆ ಪ್ರಕಾರ ಶಿಕ್ಷಣ, ಉದ್ಯೋಗ ಹಾಗೂ ಮುಂಬಡ್ತಿಗೆ ಸಂಬಂಧಿಸಿದಂತೆ 2014 ರಿಂದ ಕಾಯ್ದೆ ಜಾರಿಯಾಗಿದ್ದು, ಹಲವಾರು ಇಲಾಖೆಗಳು ಕಾಯ್ದೆಯನ್ನು ಜಾರಿ ಮಾಡದೇ ಅರ್ಹ ಅಭ್ಯರ್ಥಿಗಳಿದ್ದರೂ, ಮುಂಬಡ್ತಿಗಳಿಂದ ವಂಚಿಸಿದ್ದು, ವಂಚಿತ ಅಧಿಕಾರಿ/ನೌಕರರು ಸಮಿತಿಯ ಗಮನಕ್ಕೆ ನೂರಾರು ಮನವಿಗಳನ್ನು ಸಲ್ಲಿಸುತ್ತಿದ್ದು, ಸಮಿತಿಯು ಸಮಸ್ಯೆಗಳನ್ನು ಪರಿಹರಿಸುವ ಕೋಶವಾಗಿ ಪರಿವರ್ತನೆಯಾಗಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿರವರು ಸಚಿವಾಲಯದ ಅಧಿಕಾರಿಗಳಿಗೆ ಕಾಲ್ಪನಿಕ ಜೇಷ್ಠತೆ ನೀಡಿ, ಜೇಷ್ಠತಾ ಪಟ್ಟಿಯನ್ನು ನವೀಕರಿಸಿದ ಮಾದರಿಯಲ್ಲಿಯೇ ಇತರೆ ಇಲಾಖೆಗಳು ಅರ್ಹ ಅಧಿಕಾರಿ/ನೌಕರರಿಗೆ ಉದ್ದೇಶ ಪೂರ್ವಕವಾಗಿ ಮುಂಬಡ್ತಿ ನೀಡದೇ ಇದ್ದಲ್ಲಿ, ಅಂತಹ ಅಧಿಕಾರಿ/ನೌಕರರಿಗೆ ಸಭೆಯ ನಿರ್ಣಯದಂತೆ ಜೇಷ್ಠತೆಯನ್ನು ಕಾಲ್ಪನಿಕವಾಗಿ ನಿಗದಿಪಡಿಸಿ ಅವರು ಕರ್ತವ್ಯ ನಿರ್ವಹಿಸಿದ ದಿನದಿಂದ ಆರ್ಥಿಕ ಸೌಲಭ್ಯಗಳನ್ನು ನೀಡುವ ಬಗ್ಗೆ ಪರಿಶೀಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗಳು ಯಾವ ಯಾವ ಇಲಾಖೆಯಲ್ಲಿ ಈ ರೀತಿ ಸಮಸ್ಯೆ ಇದೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಸಮಿತಿಯ ನಿರ್ಣಯ ಅಗತ್ಯವಾಗಿದೆ ಎಂದು ತಿಳಿಸಿದರು. ಸದರಿ ಮಾಹಿತಿಯನ್ನು ಪರಿಶೀಲಿಸಿದ ಸಮಿತಿಯ ಅಧ್ಯಕ್ಷರು ಸ್ವೀಕೃತ ಎಲ್ಲಾ ಮನವಿಗಳನ್ನು ಇಲಾಖೆಗಳಿಗೆ ಕಳುಹಿಸಿ ಮುಂದೆ ನಡೆಯುವ ಸಭೆಗೆ ಪೂರ್ಣ ವಿವರಗಳನ್ನು ಮಂಡಿಸುವಂತೆ ಸೂಚಿಸಿದರು ಹಾಗೂ ಈಗಾಗಲೇ ಸ್ವೀಕೃತ ಮನವಿಗಳನ್ನು ಪರಿಶೀಲಿಸಿ ಸಮಿತಿಗೆ ಪ್ರತ್ಯೇಕವಾಗಿ ಸಲ್ಲಿಸುವಂತೆ ಯೋಜನಾ ಇಲಾಖೆಯ ಅಧಿಕಾರಿಗಳಿಗೆ ಸಮಿತಿಯು ಸೂಚಿಸಿತು.

*(ಕ್ರಮ: ಸಿಆಸುಇಲಾಖೆ ಹಾಗೂ ಯೋಜನಾ ಇಲಾಖೆ ಮತ್ತು ಸಂಬಂಧಿಸಿದ ಎಲ್ಲಾ ಇಲಾಖೆಗಳು)*

**4. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ನಡವಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅನುಪಾಲನಾ ವರದಿ ಸಲ್ಲಿಸದೇ ಇರುವ ಬಗ್ಗೆ ಸಮಿತಿಯು ತೀವ್ರ ಆಕ್ಷೇಪ ವ್ಯಕ್ತಪಡಿಸಿತು ಹಾಗೂ ಸಭೆಯಲ್ಲಿ ಹಾಜರಿದ್ದ, ಅಪರ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಲಬುರಗಿ ರವರು ನೀಡಿದ ಅಸ್ಪಷ್ಟ ಮಾಹಿತಿ ಬಗ್ಗೆ ಸಮಿತಿಯು ಆಕ್ಷೇಪಿಸಿ ಕೂಡಲೇ ನಿಖರ ಮಾಹಿತಿ ಪಡೆದು ಸಮಿತಿಗೆ ಸಲ್ಲಿಸಲು ಸೂಚಿಸಿತು. ತದನಂತರ ಸಭೆಗೆ ಹಾಜರಾದ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರು ಕಳೆದ ಮೂರು ದಿನಗಳ ಹಿಂದೆ ಮಾಹಿತಿಗಳನ್ನು ಇಂಧೀಕರಿಸಲಾಗಿದೆ. ಮತ್ತೊಮ್ಮೆ ಪರಿಶೀಲಿಸಿ ಸಮಿತಿಗೆ ನಿಖರ ಮಾಹಿತಿಯನ್ನು ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿ ಆಧರಿಸಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸುಮಾರು 15000 ಶಿಕ್ಷಕರ ಹುದ್ದೆಗಳು ಖಾಲಿ ಇರುವ ಬಗ್ಗೆ ಮಾಹಿತಿ ಇದ್ದು, ನಿಖರ ಮಾಹಿತಿಯನ್ನು ಸಲ್ಲಿಸಲು ಸಮಿತಿಯು ಸೂಚಿಸಿತು ಹಾಗೂ ಕಲ್ಯಾಣ ಕರ್ನಾಟಕ ಭಾಗಕ್ಕೆ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ ಅಡ್ವಕೇಟ್ ಜನರಲ್ ರವರೊಂದಿಗೆ ಚರ್ಚಿಸಿ ಸೂಕ್ತ ಕ್ರಮವಹಿಸಲು ಹಾಗೂ ಶಿಕ್ಷಕರ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಯಿತು.

ಯೋಜನಾ ಇಲಾಖೆಯು ಪತ್ರ ಸಂಖ್ಯೆ: ಪಿಡಿಎಸ್/101/ಹೆಚ್‌ಕೆಡಿ/2023, ದಿನಾಂಕ: 02.02.2024 ಮತ್ತು ದಿನಾಂಕ: 18.05.2024ರಂದು ಮತ್ತು ದಿನಾಂಕ: 29.01.2025ರಂದು ಪತ್ರ ಮುಖೇನ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದ್ದರೂ ಕೈಗೊಂಡಿರುವ ಕ್ರಮಗಳ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಅನುಪಾಲನಾ ವರದಿ ನೀಡಿಲ್ಲದಿರುವುದನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳುವ ನೋಟಿಸ್ ನೀಡಲು ಸೂಚಿಸಲಾಯಿತು. ಸಭೆಯಲ್ಲಿ ಹಾಜರಿದ್ದ, ಅಪರ ಆಯುಕ್ತರು, ಕಲಬುರಗಿ ವಿಭಾಗ ರವರು ಮಾಹಿತಿ ನೀಡಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಆಧರಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿದ ನಂತರ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ಮಾಹಿತಿ ನೀಡಿದರು. ಸದರಿ ಮಾಹಿತಿ ಬಗ್ಗೆ ಆಕ್ಷೇಪಿಸಿದ ಸಮಿತಿಯು ಸಂಪೂರ್ಣ ವಿವರಣೆಯ ಪಡೆಯಲು ಸೂಚಿಸಿ ನಿರ್ಣಯಿಸಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅನುಪಾಲನಾ ವರದಿಯನ್ನು ಸಮಿತಿಯು

ಪರಿಶೀಲಿಸಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು 2022ರ ಶೈಕ್ಷಣಿಕ ಸಾಲಿನಲ್ಲಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ, 15000 ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ:22.03.2022ರಂದು ಅಧಿಸೂಚನೆ ಹೊರಡಿಸಲಾಗಿದ್ದು, ಒಟ್ಟು 15000 ಹುದ್ದೆಗಳ ಪೈಕಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 5000 ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. 5000 ಹುದ್ದೆಗಳಿಗೆ ಎದುರಾಗಿ ಒಟ್ಟು 4193 ಅಭ್ಯರ್ಥಿಗಳು ಅಂತಿಮವಾಗಿ ಆಯ್ಕೆಯಾಗಿರುತ್ತಾರೆ. ಇದರಲ್ಲಿ ಈವರೆವಿಗೂ ಒಟ್ಟು 3837 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಶಾಲೆಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಉಳಿದಂತೆ ವಿವಾಹಿತ ಮಹಿಳೆಯರಿಗೆ ತಂದೆಯ ಅಥವಾ ಗಂಡನ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪರಿಗಣಿಸುವ ಕುರಿತ ಪ್ರಕರಣವು ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ನಂ.27984-988/2023 ರಡಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ. ಆದ್ದರಿಂದ ಈ ಪ್ರಕರಣದಲ್ಲಿನ ಕಲ್ಯಾಣ ಕರ್ನಾಟಕ ಭಾಗದ 128 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದು ಬಾಕಿ ಇರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ತಕ್ಷಣ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂಬ ಪಾಲನಾ ವರದಿಯನ್ನು ಸಮಿತಿಯು ಪರಿಶೀಲಿಸಿತು.

ಅಲ್ಲದೇ, ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.23162/2023ರಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದು, ಈ ಪ್ರಕರಣದಿಂದ ಕಲ್ಯಾಣ ಕರ್ನಾಟಕ ಭಾಗದ 59 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದು ಬಾಕಿ ಇರುತ್ತದೆ. ನ್ಯಾಯಾಲಯಕ್ಕೆ ಇಲಾಖೆಯಿಂದ ವಿವರವಾದ ಆಕ್ಷೇಪಣಾ ಹೇಳಿಕೆಗಳನ್ನು ದಾಖಲಿಸಲಾಗಿರುತ್ತದೆ. ಈ ಪ್ರಕರಣದೊಂದಿಗೆ ಪೊಲೀಸ್ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳ ಪ್ರಕರಣಗಳನ್ನೂ ಸಹ ಜೋಡಣೆ ಮಾಡಲಾಗಿದ್ದು, ವಿಚಾರಣೆಯು ಅಂತಿಮ ಹಂತದಲ್ಲಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ತಕ್ಷಣ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ನೀಡಿರುವ ವರದಿಯನ್ನು ಸಮಿತಿಯು ಪರಿಶೀಲಿಸಿತು.

ಮುಂದುವರೆದು, ಕೌನ್ಸಲಿಂಗ್‌ಗೆ ಹಾಜರಾಗದೇ ಇರುವ, ನೇಮಕಾತಿ ನಿರಾಕರಿಸಿರುವ ಹಾಗೂ ಇತರೆ ಕಾರಣಗಳಿಗಾಗಿ ಕೆಲವು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಸಾಧ್ಯವಾಗಿರುವುದಿಲ್ಲ. ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸಲು ಬಾಕಿ ಇರುವ 30 ಪ್ರಕರಣಗಳಲ್ಲಿ ಸಿಂಧುತ್ವ ಪ್ರಮಾಣ ಪತ್ರ ಸ್ವೀಕೃತವಾದ ತಕ್ಷಣ ನೇಮಕಾತಿ ಆದೇಶ ನೀಡಲು ಕ್ರಮವಹಿಸಲಾಗುವುದು.

ನೇಮಕಾತಿ ಆದೇಶ ನೀಡಲು ಬಾಕಿ ಇರುವ ಒಟ್ಟು ಪ್ರಕರಣಗಳ ಮಾಹಿತಿ ಈ ಕೆಳಗಿನಂತಿದೆ:-

| ಜಿಲ್ಲೆಗಳು | ಅಧಿಸೂಚಿಸಿದ ಹುದ್ದೆಗಳು | CAC ಆಯ್ಕೆ ಪಟ್ಟಿಯಲ್ಲಿರುವ | ನೇಮಕಾತಿ ಆದೇಶ ನೀಡಿದ | ಬಾಕಿ ಪ್ರಕರಣಗಳ ವಿವರ | | | | |
|---|---|---|---|---|---|---|---|---|
| | | | | ಕೋರ್ಟ್ | ಸಿಂಧುತ್ವ | ಗೈರು | ನಿರಾಕರಣೆ | ಆಯ್ಕೆ ರದ್ದು |
| 1 | 2 | 3 | 4 | 5 | 6 | 7 | 8 | 9 |
| ಬಳ್ಳಾರಿ | 523 | 428 | 400 | 12 | 1 | 10 | 05 | 00 |
| ಬೀದರ್ | 647 | 468 | 438 | 16 | 06 | 03 | 05 | 00 |
| ಕಲಬುರಗಿ | 953 | 796 | 758 | 00 | 02 | 14 | 10 | 11 |
| ಕೊಪ್ಪಳ | 557 | 509 | 455 | 25 | 08 | 07 | 09 | 06 |
| ರಾಯಚೂರು | 918 | 773 | 726 | 00 | 11 | 28 | 04 | 04 |
| ವಿಜಯನಗರ | 512 | 443 | 425 | 00 | 00 | 18 | 00 | 00 |
| ಯಾದಗಿರಿ | 863 | 633 | 611 | 03 | 02 | 10 | 07 | 00 |
| **ಒಟ್ಟು** | **4973** | **4050** | **3813** | **56** | **30** | **90** | **40** | **21** |

ಮುಂದುವರೆದು, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಒಟ್ಟು 10000 ಶಿಕ್ಷಕರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.ಆರ್ಥಿಕ ಇಲಾಖೆಯ

ಸಹಮತಿಯಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಒಟ್ಟು 5267 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 07.10.2024 ರಂದು ಸರ್ಕಾರದಿಂದ ಅನುಮತಿ ನೀಡಲಾಗಿರುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ದಿನಾಂಕ: 25.11.2024ರ ಸುತ್ತೋಲೆಯಲ್ಲಿ ಪರಿಶಿಷ್ಟ ಜಾತಿಗಳ ಮೀಸಲಾತಿ / ಉಪ ವರ್ಗೀಕರಣ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಸೂಚನೆವರೆವಿಗೂ ಆದೇಶ ಹೊರಡಿಸಬಾರದೆಂದು ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಿರುವುದಿಲ್ಲ. ಪರಿಶಿಷ್ಟ ಜಾತಿಗಳ ಮೀಸಲಾತಿ ಕುರಿತು ಸರ್ಕಾರದಿಂದ ನಿರ್ಣಯ ಕೈಗೊಂಡ ತಕ್ಷಣ ನೇಮಕಾತಿ ಅಧಿಸೂಚನೆ ಹೊರಡಿಸಲಾಗುವುದು. ಪ್ರಸ್ತುತ ಕಲ್ಯಾಣ ಕರ್ನಾಟಕ ಭಾಗದಲ್ಲಿ 17274 ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು 4107 ಪ್ರೌಢ ಶಾಲಾ ಶಿಕ್ಷಕರ ಒಟ್ಟು 21381 ಹುದ್ದೆಗಳು ಖಾಲಿ ಇರುತ್ತವೆ ಎಂಬುದನ್ನು ಸಹ ಪರಿಶೀಲಿಸಲಾಯಿತು.

2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 119ರಲ್ಲಿ "ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ 5,267 ಶಿಕ್ಷಕರ ಹುದ್ದೆಗಳನು ಭರ್ತಿ ಮಾಡಲಾಗುವುದು. ಮುಂದುವರೆದು, ಇಲಾಖೆಯಲ್ಲಿ ಇನ್ನೂ ಖಾಲಿ ಇರುವ ಶಿಕ್ಷಕರ ಹುದ್ದೆಗಳನು ತರ್ಕಬದ್ಧಗೊಳಿಸಿ 5,000 ಹುದ್ದೆಗಳನು ಭರ್ತಿ ಮಾಡಲು ಕ್ರಮವಹಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ. ಸದರಿ ಘೋಷಣೆಯಂತೆ ಈಗಾಗಲೇ ಖಾಲಿ ಇರುವ ಹುದ್ದೆಗಳಿಗೆ ಹಾಗೂ ನೇಮಕಾತಿ ಮಾಡಿ ಅಭ್ಯರ್ಥಿಗಳು ಹಾಜರಾಗದೇ ಇರುವ ಹುದ್ದೆಗಳಿಗೂ ಸಹ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವಂತೆ ಸಮಿತಿಯು ಸೂಚಿಸಿತು.

**5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-**

ದಿನಾಂಕ: 17.08.2023ರ ಸಚಿವ ಸಂಪುಟ ಉಪ ಸಮಿತಿಯ ನಡವಳಿ ಮೇಲೆ ಕೈಗೊಂಡಿರುವ ಕ್ರಮಗಳ ಮೇಲೆ ಅನುಪಾಲನಾ ವರದಿಯನು ಸಮಿತಿಯು ಪರಿಶೀಲಿಸಿತು, 371ಜೆ ಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳನು ಭರ್ತಿ ಮಾಡಿರುವ ಬಗ್ಗೆ ಹಾಗೂ ಮುಂಬಡ್ತಿ ನೀಡಿರುವ ಬಗ್ಗೆ ಪೂರ್ಣ ವಿವರಗಳನು ಗೂಗಲ್‌ಶೀಟ್ ನಲ್ಲಿ ಅಳವಡಿಸಲು ಮತ್ತೊಮ್ಮೆ ಸೂಚಿಸಲಾಯಿತು ಹಾಗೂ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು ವಿವಿಧ ಹುದ್ದೆಗಳ ಭರ್ತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆದಷ್ಟು ಶೀಘ್ರದಲ್ಲಿ ನೇಮಕಾತಿ ಪ್ರಕ್ರಿಯೆಗಳನು ಪೂರ್ಣಗೊಳಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು. ವಿಳಂಬಕ್ಕೆ ಅವಕಾಶವಿಲ್ಲದೇ ಶೀಘ್ರವಾಗಿ ಕ್ರಮವಹಿಸಲು ಸಮಿತಿಯು ಸೂಚಿಸಿತು.

ಯೋಜನಾ ಇಲಾಖೆಯು ಪತ್ರ ಸಂಖ್ಯೆ: ಪಿಡಿಎಸ್/101/ಹೆಚ್‌ಕೆಡಿ/2023, ದಿನಾಂಕ: 02.02.2024 ಮತ್ತು ದಿನಾಂಕ: 18.05.2024ರಂದು ಮತ್ತು ದಿನಾಂಕ: 29.01.2025ರಂದು ಪತ್ರ ಮುಖೇನ ಅನುಪಾಲನಾ ವರದಿಯನು ಸಲ್ಲಿಸುವಂತೆ ತಿಳಿಸಿದ್ದರೂ ಕೈಗೊಂಡಿರುವ ಕ್ರಮಗಳ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಅನುಪಾಲನಾ ವರದಿ ನೀಡಿರುವುದಿಲ್ಲದಿರುವ ಬಗ್ಗೆ ಸಭೆಯು ತೀವ್ರವಾಗಿ ಆಕ್ಷೇಪಿಸಿತು. ಸಭೆಯಲ್ಲಿ ಹಾಜರಿದ್ದ, ಮುಖ್ಯಾಡಳಿತಾಧಿಕಾರಿರವರು ನೇಮಕಾತಿಯ ಪ್ರಕ್ರಿಯೆಗಳನು ಕೈಗೊಳ್ಳಲು ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಿದರು. ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಸಮಿತಿಯು ಕೇಳಿದಾಗ ಮಾಹಿತಿ ನೀಡಲು ವಿಫಲರಾದರು. ಸದರಿ ಸಂದರ್ಭದಲ್ಲಿ ನಿರ್ದೇಶಕರು, ಯೋಜನಾ ಇಲಾಖೆರವರು ಮಾಹಿತಿ ನೀಡಿ 8248 ಹುದ್ದೆಗಳು ಮಂಜೂರಾಗಿದ್ದು, 7955 ಹುದ್ದೆಗಳು ಭರ್ತಿಯಾಗಿದ್ದು, 293 ಹುದ್ದೆಗಳು ಬಾಕಿ ಇರುತ್ತದೆ ಎಂದು ಮಾಹಿತಿ ನೀಡಿದಾಗ ಸದರಿ ಮಾಹಿತಿ ಆಧರಿಸಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು ಸಭೆಯು ಕೂಡಲೇ ನೇಮಕಾತಿ ಮಾಡಿಕೊಳ್ಳಲು ಸೂಚಿಸಲಾಗಿತ್ತು. ಸದರಿ ಅಂಶಗಳಿಗೆ ಈ ಕೆಳಕಂಡಂತೆ ಇಲಾಖೆಯು ಕೈಗೊಂಡಿರುವ ಕ್ರಮದ ಅನುಪಾಲನಾ ವರದಿ ಸಭೆಗೆ ಮಂಡಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನು ಭರ್ತಿ ಮಾಡಲು ಆನ್‌ಲೈನ್ ಮೂಲಕ 320 ಅರೆವೈದ್ಯಕೀಯ ಹುದ್ದೆಗಳನು ಭರ್ತಿ ಮಾಡಲು ಅರ್ಜಿಗಳನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಕಾರ್ಯವು ಪೂರ್ಣಗೊಂಡಿರುತ್ತದೆ. ದಿನಾಂಕ: 10.09.2024ರಲ್ಲಿ ಗ್ರೂಪ್-ಸಿ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ 3 ವರ್ಷಗಳ ಸಡಿಲಿಕೆಯನು ನೀಡಿ ಆದೇಶಿಸಲಾಗಿದ್ದು, ಪರಿಷ್ಕೃತ ಅಧಿಸೂಚನೆ ಹೊರಡಿಸಬೇಕೇ ಎಂಬ ಬಗ್ಗೆ ಸರ್ಕಾರದ ಮಾರ್ಗದರ್ಶನವನು ದಿನಾಂಕ: 24.09.2024ರಲ್ಲಿ ಪತ್ರ ಮುಖೇನ ಕೋರಲಾಗಿದ್ದು, ಸರ್ಕಾರವು ದಿನಾಂಕ: 20.02.2025ರಲ್ಲಿ ವಿನಾಯಿತಿ ನೀಡಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಯನು ದಿನಾಂಕ: 01.04.2025ರಂದು ಪ್ರಕಟಿಸಲಾಗಿರುತ್ತದೆ ಎಂದು ತಿಳಿಸಿದರು. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರವನು ನೀಡುವ ಬಗ್ಗೆ ಕ್ರಮವಹಿಸುವುದು ಹಾಗೂ ಇನ್ನೂ ಇಲಾಖೆಯಲ್ಲಿ ಬಾಕಿ ಇರುವ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಲು ಸಮಿತಿಯು ಸೂಚಿಸಿತು.

**6. ಸಾರಿಗೆ ಇಲಾಖೆ:-**

ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ ರವರು 371ಜೆ ರಡಿ ಸಾರಿಗೆ ಇಲಾಖೆಯಲ್ಲಿ ನೇರ ನೇಮಕಾತಿಯಡಿ 296 ಹುದ್ದೆಗಳು ಹಾಗೂ ಮುಂಬಡ್ತಿಯಡಿ 270 ಹುದ್ದೆಗಳು ಭರ್ತಿ ಮಾಡಲು ಬಾಕಿ ಇದ್ದು, ಇರುವ ವಾಹನ ಚಾಲಕರು-ಕಂ-ನಿರ್ವಾಹಕರ ಹುದ್ದೆಗಳನ್ನು KEA ಮೂಲಕ ಭರ್ತಿ ಮಾಡಲು ಕ್ರಮವಹಿಸುತ್ತಿರುವುದಾಗಿ ಸಭೆಗೆ ಮಾಹಿತಿ ನೀಡಿದರು ಹಾಗೂ ಮುಂಬಡ್ತಿಯಡಿ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಬಾಕಿ ಇದ್ದ 270 ಮುಂಬಡ್ತಿ ಹುದ್ದೆಗಳ ಪೈಕಿ 123 ಹುದ್ದೆಗಳಿಗೆ ಈಗಾಗಲೇ ಮುಂಬಡ್ತಿ ನೀಡಲಾಗಿರುತ್ತದೆ. ಉಳಿದ 147 ಹುದ್ದೆಗಳ ಮುಂಬಡ್ತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅವುಗಳಲ್ಲಿ ದರ್ಜೆ-1, ದರ್ಜೆ-2 ಮತ್ತು ಮೇಲ್ವಿಚಾರಕ ಹುದ್ದೆಗಳ ಮುಂಬಡ್ತಿಗೆ ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇದ್ದು, ತಡೆಯಾಜ್ಞೆ ತೆರವುಗೊಂಡ ನಂತರ ಮುಂಬಡ್ತಿಗೆ ಕ್ರಮವಹಿಸಲಾಗುವುದು. ಮುಂದುವರೆದು, ನೇರ ನೇಮಕಾತಿಯಡಿ 300 ಹುದ್ದೆಗಳಿಗೆ ಸರ್ಕಾರದಿಂದ ಅನುಮೋದನೆ ದೊರೆತಿದ್ದು, ನೇಮಕಾತಿಗೆ ಜಾಹೀರಾತು ಹೊರಡಿಸುವ ಮತ್ತು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ವರದಿ ಮಾಡಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿದ ಸಮಿತಿಯು ಕೂಡಲೇ ಅಗತ್ಯ ಕ್ರಮವಹಿಸಲು ಸೂಚಿಸಲಾಗಿತ್ತು. ಸದರಿ ಅಂಶಗಳಿಗೆ ಈ ಕೆಳಕಂಡಂತೆ ಕೈಗೊಂಡಿರುವ ಕ್ರಮದ ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಿದರು.

ಸಾರಿಗೆ ಇಲಾಖೆಯಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ನಗರ ಸಾರಿಗೆ ಸಂಸ್ಥೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಸೂಚನೆ ನೀಡಿ ಪತ್ರ ಬರೆಯಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಸದರಿ ಮಾಹಿತಿಯನ್ನು ಪರಿಶೀಲಿಸಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಸಮಿತಿಯು ಕೇವಲ ಪತ್ರ ಬರೆದು ಕ್ರಮವಾಗಿದೆ ಎಂದು ವರದಿ ನೀಡುವುದು ಸರಿಯಾದ ಕ್ರಮವಾಗಿರುವುದಿಲ್ಲ ಹಾಗೂ 371ಜೆ ಅಡಿ ಖಾಲಿ ಇರುವ ಹುದ್ದೆಗಳನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಅಗತ್ಯವಿರುವುದಿಲ್ಲ. ಆದ್ದರಿಂದ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳಿಗೆ ಶೀಘ್ರವಾಗಿ ನೇಮಕಾತಿ, ಅಧಿಸೂಚನೆ ಹೊರಡಿಸಿ ಮುಂದಿನ ಸಭೆಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

ಸಭೆಯಲ್ಲಿ ಹಾಜರಿದ್ದ, ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿಯವರು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ/02/ಬಿಇಎಂ/2021 ದಿನಾಂಕ: 24.11.2021ರಲ್ಲಿ ಹಾಗೂ ದಿನಾಂಕ: 06.09.2022ರ ಸ್ಪಷ್ಟೀಕರಣದಲ್ಲಿ ಕಲ್ಯಾಣ ಕರ್ನಾಟಕ ವೃಂದ ಬಲವು ಶೇಕಡ 80ಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಸಂದರ್ಭದಲ್ಲಿ ಶೇಕಡ 80ರಷ್ಟು ಹುದ್ದೆಗಳನ್ನು ನೇರ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಹಾಗೂ ಬೆರಳಚ್ಚುಗಾರರು, ಶೀಘ್ರಲಿಪಿಗಾರರು, ಗ್ರೂಪ್-ಡಿ ವೃಂದದ ಹುದ್ದೆಗಳು ಅನುದಾನದ ಲಭ್ಯತೆಗೆ ಒಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಎಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಬೈಲಪ್ಪ ಎಂ. ಬಿರಾದಾರ, ವಿಭಾಗೀಯ ಸಂಚಾರ ಅಧಿಕಾರಿ, KKRTC ರವರು, 371ಜೆ ರಡಿ 2014 ರಿಂದ ಅನ್ವಯವಾಗುವಂತೆ ಕಾಲ್ಪನಿಕಾ ಜೇಷ್ಠತೆಯನು ನೀಡಿ, ಮುಂಬಡ್ತಿ ನೀಡುವಂತೆ ಕೋರಿದ್ದು, ಸದರಿ ಮನವಿಯ ಬಗ್ಗೆ ಪರಿಶೀಲಿಸಿದ ಸಮಿತಿಯು ಸಂಬಂಧಿಸಿದ ಅಧಿಕಾರಿಯವರಿಗೆ ಅರ್ಹತೆ ಹಾಗೂ ಹುದ್ದೆಯ ಲಭ್ಯತೆಗೆ ಅನುಗುಣವಾಗಿ ಕಾಲ್ಪನಿಕಾ ಜೇಷ್ಠತೆಯನ್ನು ನೀಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಯಿತು.

**7. ಉನ್ನತ ಶಿಕ್ಷಣ ಇಲಾಖೆ: -**

ಉನ್ನತ ಶಿಕ್ಷಣ ಇಲಾಖೆಯಲ್ಲಿ ನೇರ ನೇಮಕಾತಿಯಡಿ 1783 ಹಾಗೂ ಮುಂಬಡ್ತಿಯಡಿ 540 ಹುದ್ದೆಗಳು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆರವರು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಸಭೆಗೆ ಮಾಹಿತಿ ನೀಡಲಾಗಿತ್ತು. ಸದರಿ ಅಂಶಕ್ಕೆ ಈ ಕೆಳಕಂಡಂತೆ ಇಲಾಖಾ ಅಧಿಕಾರಿಗಳು ಅನುಪಾಲನಾ ವರದಿಯನ್ನು ನೀಡಿದರು.

ದಿನಾಂಕ: 25.09.2025ರಂದು ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆರವರು, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರಿಗೆ ಪತ್ರ ಬರೆದು 1242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಕಲ್ಯಾಣ ಕರ್ನಾಟಕ ಭಾಗದ 17 ಅಭ್ಯರ್ಥಿಗಳಿಗೆ ಷರತ್ತು ಬದ್ಧ ಆದೇಶದ ಪ್ರತಿ ನೀಡುವ ಕುರಿತಾಗಿ ಸಲ್ಲಿಸಿರುವ ಮನವಿಯ ಬಗ್ಗೆ ಪರಿಶೀಲಿಸಿ ಕ್ರಮವಹಿಸಿ ಸಚಿವ ಸಂಪುಟ ಉಪ ಸಮಿತಿಗೆ ಅನುಪಾಲನಾ ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ. ಕೇವಲ ಪತ್ರ ವ್ಯವಹಾರವಾಗಿದ್ದು, ಅಭ್ಯರ್ಥಿಗಳಿಗೆ ಷರತ್ತು ಬದ್ಧ ಆದೇಶ ನೀಡಿರುವ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಯಿತು ಹಾಗೂ ಉನ್ನತ ಶಿಕ್ಷಣ ಇಲಾಖೆಯಲ್ಲಿ 371ಜೆ ರಡಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸುತ್ತೋಲೆ ದಿನಾಂಕ: 24.11.2021ರಲ್ಲಿ

ಹಾಗೂ ಸ್ಪಷ್ಟೀಕರಣ ದಿನಾಂಕ: 06.09.2022ರಂತೆ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಂಡು ಮುಂದಿನ ಸಭೆಗೆ ಮಾಹಿತಿಯನ್ನು ನೀಡುವಂತೆ ತಿಳಿಸಲಾಯಿತು.

**8. ಗೃಹ ಇಲಾಖೆ:-**

ಗೃಹ ಇಲಾಖೆಯಲ್ಲಿ ನೇರ ನೇಮಕಾತಿಯಡಿ 2532 ಹಾಗೂ ಮುಂಬಡ್ತಿಯಡಿ 390 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ, ಗೃಹ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಹಾಗೂ ದಿನಾಂಕ17.08.2023 : ರ ಸಭೆಯಲ್ಲಿ ನಿರ್ಣಯವಾದ ವಿವಿಧ 371ಜೆಗೆ ಸಂಬಂಧಿಸಿದ ಅರ್ಜಿಗಳ ಕುರಿತು ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಲಾಗಿತ್ತು.

ಪಿ.ಎಸ್.ಐಗಳ ನೇಮಕಾತಿಯಲ್ಲಿ ತಡೆಹಿಡಿದಿರುವ 40 ಹುದ್ದೆಗಳನ್ನು ಭರ್ತಿ ಮಾಡಲು ಕೂಡಲೇ ಕ್ರಮವಹಿಸಲು ಸಮಿತಿಯು ಸೂಚಿಸಿತು ಹಾಗೂ ಗೃಹ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ವಿಭಾಗಗಳ/ಇಲಾಖೆಗಳ ಅನುಪಾಲನಾ ವರದಿಯನ್ನು ಬಿಡಿಬಿಡಿಯಾಗಿ ಸಲ್ಲಿಸದೇ ಎಲ್ಲವನ್ನೂ ಕ್ರೋಢೀಕರಿಸಿ ಸಲ್ಲಿಸಲು ಸೂಚಿಸಲಾಯಿತು.

ಹಿಂದಿನ ಸಭೆಯ ನಡವಳಿ ಮೇಲೆ ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಭೆಯು ಈ ಕೆಳಕಂಡಂತೆ ಪರಿಶೀಲಿಸಿತು.

ದಿನಾಂಕ: 01.02.2023ರ ಸುತ್ತೋಲೆಯನ್ವಯ 545 ಪಿ.ಎಸ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕಲ್ಯಾಣ ಕರ್ನಾಟಕ ವೃಂದದಲ್ಲಿ ಕಾಯ್ದಿರಿಸಲಾದ 40 ಹುದ್ದೆಗಳಿಗೆ ರಿಟ್ ಪಿಟಿಷನ್ ಸಂಖ್ಯೆ: 16343/2024ರಲ್ಲಿ ನೀಡುವ ಅಂತಿಮ ಷರತ್ತಿಗೊಳಪಟ್ಟು ಕಲ್ಯಾಣ ಕರ್ನಾಟಕ ವೃಂದದ 40 ಅಭ್ಯರ್ಥಿಗಳನ್ನು ಸೇರಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: 09.09.2025ರಂದು ಹೊರಡಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಯು ಪರಿಶೀಲಿಸಿ ಸಮ್ಮತಿ ನೀಡಿತು.

ಒಳಾಡಳಿತ ಇಲಾಖೆಯಲ್ಲಿ ನೇರ ನೇಮಕಾತಿಯಡಿ 1402 ಹುದ್ದೆಗಳು ಬಾಕಿ ಇದ್ದು, ಮುಂಬಡ್ತಿ ಸೇರಿದಂತೆ ಒಟ್ಟಾರೆ, 2158 ಹುದ್ದೆಗಳನ್ನು ಭರ್ತಿ ಮಾಡಲು, ಬಾಕಿ ಇರುವ ಬಗ್ಗೆ ಸಭೆಯು ತೀವ್ರ ಆಕ್ಷೇಪ ವ್ಯಕ್ತಪಡಿಸಿ 371ಜೆರಡಿ ಖಾಲಿ ಇರುವ ಎಲ್ಲಾ ಹುದ್ದೆಗಳಲ್ಲಿ ಶೇಕಡ 80ರಷ್ಟನ್ನು ಆರ್ಥಿಕ ಇಲಾಖೆಯ ಸುತ್ತೋಲೆ ದಿನಾಂಕ: 24.11.2021ರಲ್ಲಿ ಹಾಗೂ ಸ್ಪಷ್ಟೀಕರಣ ದಿನಾಂಕ: 06.09.2022ರಂತೆ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿತು.

ಒಳಾಡಳಿತ ಇಲಾಖೆಗೆ ಸಂಬಂಧಿಸಿದಂತೆ, KSISF ಇಲಾಖೆಯ ಶ್ರೀ ಭೀಮಾ, ಮುಖ್ಯ ಪೇದೆರವರಿಗೆ 371ಜೆ ರಡಿ ಅರ್ಹತೆ ಹೊಂದಿದ ದಿನಾಂಕದಿಂದ ಜೇಷ್ಠತೆಯನ್ನು ಮರು ನಿಗದಿಪಡಿಸುವಂತೆ ಕೋರಿರುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು, ಸದರಿ ನೌಕರರನ್ನು ಒಳಗೊಂಡಂತೆ ಅರ್ಹ ಅಧಿಕಾರಿ/ನೌಕರರಿಗೆ ಹುದ್ದೆ ಮತ್ತು ಅರ್ಹತೆಯನ್ನು ಆಧರಿಸಿ ಕಾಲ್ಪನಿಕ ಜೇಷ್ಠತೆಯನ್ನು ನಿಗದಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ವೈರ್‌ಲೇಸ್ ಇಲಾಖೆಗೆ ಸಂಬಂಧಿಸಿದಂತೆ ಶ್ರೀ ದೇವೇಂದ್ರ ಬ ರಬಗೊಂಡ ಮತ್ತು ಶ್ರೀ ವಿನಾಯಕ ಹಾಗೂ ಇತರರು ಸಲ್ಲಿಸಿರುವ ಮನವಿಯಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ದಿನಾಂಕ: 20.11.2025ರಂದು ನೀಡಿರುವ ಅಭಿಪ್ರಾಯದನ್ವಯ 371ಜೆ ಜಾರಿಯಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಿ ಜೇಷ್ಠತಾ ಪಟ್ಟಿಯನ್ನು 2014 ರಿಂದ ಅನ್ವಯವಾಗುವಂತೆ ಪರಿಷ್ಕರಿಸಿ. ಅರ್ಹತಾ ದಿನಾಂಕಗಳನ್ನು ಮರು ನಿಗದಿಪಡಿಸಿ ಅರ್ಹ ನೌಕರರಿಗೆ ನಿಯಮಾನುಸಾರ ಮುಂಬಡ್ತಿ ನೀಡಲು ಸೂಚಿಸಲಾಯಿತು.

**9. ಸಹಕಾರ ಇಲಾಖೆ:-**

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತವು ಸರ್ಕಾರದ ಯಾವುದೇ ನಿಯಂತ್ರಣಕ್ಕೆ ಒಳಪಡದೆ ಸ್ವಯಂ ಸಂಸ್ಥೆಯಾಗಿರುವುದರಿಂದ 371ಜೆ ಮೀಸಲಾತಿ ನಿಯಮವು ಅನ್ವಯಿಸುವುದಿಲ್ಲ ಎಂದು ವರದಿ ಮಾಡಿರುವ ಬಗ್ಗೆ ಸಮಿತಿಯು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿತು ಹಾಗೂ ಸಮಿತಿಯ ಮಾನ್ಯ ಅಧ್ಯಕ್ಷರು ಕಾಯ್ದೆಯ ಅಧ್ಯಾಯ-2ರಲ್ಲಿ ಸ್ಪಷ್ಟಪಡಿಸಿರುವಂತೆ ರಾಜ್ಯ ಮಟ್ಟದ ಕಚೇರಿಗಳು ಅಥವಾ ಸಂಸ್ಥೆಗಳು ಅಥವಾ ಅಪೆಕ್ಸ್ ಸಂಸ್ಥೆಗಳು ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಆ ಪ್ರದೇಶದ ಶೇಕಡವಾರು ಜನಸಂಖ್ಯೆಯನ್ನು ಪ್ರತಿಫಲಿಸುವ ಈ ಮುಂದಿನ ರಾಜ್ಯ ಮಟ್ಟದ ಕಚೇರಿಗಳು ಅಥವಾ ರಾಜ್ಯ ಮಟ್ಟದ ಸಂಸ್ಥೆಗಳು ಅಥವಾ ಅಪೆಕ್ಸ್ ಸಂಸ್ಥೆಗಳಲ್ಲಿನ ಎಲ್ಲಾ ಇಲಾಖೆಗಳ ನಿಕಾಯ ಅಥವಾ ಸಂಘಟನೆಯಲ್ಲಿನ ಶೇಕಡ 8 ಹುದ್ದೆಗಳನ್ನು ಮತ್ತು ಗ್ರೂಪ್-ಎ ಹಿರಿಯ ಶ್ರೇಣಿ ಮಟ್ಟದ ವರೆಗಿನ ಹುದ್ದೆಗಳನ್ನು ಆ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗಾಗಿ ಮೀಸಲಿಡತಕ್ಕದ್ದು. ಎಂಬುದನ್ನು ಓದಿ ಸಭೆಯ ಗಮನಕ್ಕೆ ತಂದರು ಹಾಗೂ ಇನ್ನೂ ಮುಂದೆ ಜಾಗೃತವಾಗಿ 371ಜೆ ಸಚಿವ ಸಂಪುಟದ ಉಪ ಸಮಿತಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಮತ್ತು ಸಭೆಯಲ್ಲಿ ಕೈಗೊಂಡ

ನಿರ್ಣಯಗಳನ್ನು ಪಾಲಿಸಲು ಸೂಚಿಸಿದರು.

10. <u>ಲೋಕೋಪಯೋಗಿ ಇಲಾಖೆ:-</u>

ಲೋಕೋಪಯೋಗಿ ಇಲಾಖೆಯಲ್ಲಿ ನೇರ ನೇಮಕಾತಿಯಡಿ 15 ಹಾಗೂ ಮುಂಬಡ್ತಿಯಡಿ 11 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುವ ಬಗ್ಗೆ ಸಮಿತಿಯು ಮಾಹಿತಿ ನೀಡುವಂತೆ ತಿಳಿಸಿದಾಗ ಇಲಾಖಾ ಅಧಿಕಾರಿಗಳು ಮುಂಬಡ್ತಿಯಡಿ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

1. ಗ್ರೂಪ್-ಬಿ ವೃಂದದಲ್ಲಿ 04 ಹುದ್ದೆಗಳನ್ನು ಮುಂಬಡ್ತಿ ಮಾಡಬೇಕಾಗಿದ್ದು, ಈ ಪೈಕಿ 02 ನಿಬಂಧಕರ ಹುದ್ದೆಗಳನ್ನು ಹಾಗೂ 01 ಲೆಕ್ಕ ಪರಿಶೋಧನಾಧಿಕಾರಿ ಹುದ್ದೆ ಸೇರಿದಂತೆ ಒಟ್ಟು 03 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.

ಉಳಿದ 01 ಗ್ರೂಪ್ ಬಿ ಹುದ್ದೆಯನು ಮುಂಬಡ್ತಿಯ ಮೂಲಕ ತುಂಬಲು ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ವರದಿ ಮಾಡಿರುವುದನ್ನು ಪರಿಶೀಲಿಸಿತು.

2. ಲೋಕೋಪಯೋಗಿ ಇಲಾಖೆಯಲ್ಲಿ ನೇರ ನೇಮಕಾತಿಯಡಿ 15 ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದ್ದು, ಈ ಪೈಕಿ ಗ್ರೂಪ್ ಎ ವೃಂದದ 12 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ (ಆರ್‌ಪಿಸಿ) ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನು ದಿನಾಂಕ: 02.12.2024ರಂದು ಸಲ್ಲಿಸಲಾಗಿರುತ್ತದೆ ಎಂದು ವರದಿ ಮಾಡಿರುವುದನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು.

ಮುಂದುವರೆದು, ಗ್ರೂಪ್- ಸಿ ವೃಂದದ 03 ಶೀಘ್ರಲಿಪಿಗಾರರು ಹುದ್ದೆಗಳನು ಭರ್ತಿ ಮಾಡಲು ಪ್ರಸ್ತಾವನೆಯನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾಗಿದ್ದು, ಆದರೆ ಸದರಿ ಪ್ರಸ್ತಾವನೆಯನು ಆನ್‌ಲೈನ್ ಮೂಲಕ ಸಲ್ಲಿಸುವಂತೆ ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿದ್ದು, ಅದರಂತೆ ಪ್ರಸ್ತಾವನೆಯನು ಆನ್‌ಲೈನ್ ಮೂಲಕ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ ಎಂದು ವರದಿ ಮಾಡಿರುವುದನು ಪರಿಶೀಲಿಸಿತು ಹಾಗೂ ಕೂಡಲೇ ಆನ್‌ಲೈನ್ ಮೂಲಕ ಸಲ್ಲಿಸಲು ಸೂಚಿಸಿರುವುದನ್ನು ಪಾಲಿಸಿರುವುದಾಗಿ ವರದಿ ಮಾಡಿರುವುದಕ್ಕೆ ಸಮಿತಿಯು ಸಮ್ಮತಿ ಸೂಚಿಸಿತು.

ಲೋಕೋಪಯೋಗಿ ಇಲಾಖೆಯಲ್ಲಿ 371ಜೆ ಕಾಯ್ದೆ ಜಾರಿಗೆ ಬಂದ ನಂತರ 2014 ರಿಂದ ಅರ್ಹ ಅಭ್ಯರ್ಥಿಗಳು ಹುದ್ದೆ ಖಾಲಿ ಇದ್ದರೂ, ಲೋಕೋಪಯೋಗಿ ಇಲಾಖೆ ಸೇರಿದಂತೆ ಇತರೆ ಇಲಾಖೆಗಳಲ್ಲಿ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡದೇ ಇರುವ ಬಗ್ಗೆ ಪರಿಶೀಲಿಸಲಾಗಿದ್ದು, ಸ್ವೀಕೃತ ಮನವಿಗಳಂತೆ ಶ್ರೀ ನಾಗಮೂರ್ತಿ ಕೆ.ಎಸ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಶ್ರೀ ಜಯರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರಿಗೆ 2014 ರಿಂದ ಜೇಷ್ಠತೆಯನು ನಿಯಮಾನುಸಾರ ಮರು ನಿಗದಿಪಡಿಸಿ ಕಾಲ್ಪನಿಕವಾಗಿ ಜೇಷ್ಠತೆಯನು ನೀಡುವ ಬಗ್ಗೆ ಸಮಿತಿಯು ಪರಿಶೀಲಿಸಿತು. ಅದರಂತೆ ಸದರಿ ಅಧಿಕಾರಿಗಳಿಗೆ ಕರ್ನಾಟಕ ಸಚಿವಾಲಯದಲ್ಲಿ ಜೇಷ್ಠತೆಯನು ಕಾಲ್ಪನಿಕವಾಗಿ ನಿಗದಿಪಡಿಸಿರುವ ಮಾದರಿಯಲ್ಲಿಯೇ ಕರ್ನಾಟಕ ಉಚ್ಚ ನ್ಯಾಯಾಲಯದ WP No: 13868 of 2025ರ ಆದೇಶದನ್ವಯ ಕಾಲ್ಪನಿಕವಾಗಿ 2014 ರಿಂದ ಜೇಷ್ಠತೆಯನು ನಿಗದಿಪಡಿಸಿ ಮುಂದಿನ ಸಭೆಗೆ ವರದಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಮಿತಿಯು ನಿರ್ಣಯಿಸಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿತು.

11. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ-:

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಡುಗೆ ಸಹಾಯಕರಿಗೆ ಅಡುಗೆಯವರ ವೃಂದಕ್ಕೆ ಮುಂಬಡ್ತಿ ನೀಡುವಾಗ ಶೇ.8ರಷ್ಟು ಮೀಸಲಾತಿ ಪಾಲಿಸಲಾಗುತ್ತಿದೆ ಎಂದು ವರದಿ ಮಾಡಲಾಗಿದ್ದು, ಪಾಲಿಸಿರುವ ಬಗ್ಗೆ ಸೂಕ್ತ ಆದೇಶಗಳ ಪ್ರತಿಯನು ಸಲ್ಲಿಸಲು ಸೂಚಿಸಲಾಗಿತ್ತು. ಸದರಿ ಅಂಶಗಳಿಗೆ ಅಡುಗೆ ಸಹಾಯಕರಿಂದ ಅಡುಗೆಯವರ ಹುದ್ದೆಗೆ ಮುಂಬಡ್ತಿ ನೀಡುವಲ್ಲಿ ಶೇಕಡ 8ರ ಮೀಸಲಾತಿಯನು ಪಾಲಿಸಿರುವ ಬಗ್ಗೆ ಆದೇಶಗಳನು ಸಲ್ಲಿಸಲಾಗಿದೆ. ಮುಂದುವರೆದು ಶ್ರೀ ಲೋಕೇಶ್ ಮತ್ತು ಶ್ರೀ ಶರಣಬಸವ ಇವರುಗಳು ಶೇಕಡ 8ರ ರಾಜ್ಯ ವ್ಯಾಪ್ತಿ ವೃಂದದಲ್ಲಿ ನೇಮಕಾತಿ ಹೊಂದಿದ್ದು, ಇವರುಗಳು ಅರ್ಹತೆಯನು ಹೊಂದಿದ್ದರೂ, ಸಹ ಶೇಕಡ 8ರ ಮೀಸಲಾತಿಯಲ್ಲಿ ಕಿರಿಯ ನಿಲಯ ಮೇಲ್ವಿಚಾರಕ ಹುದ್ದೆಗೆ ಮುಂಬಡ್ತಿ ನೀಡದೇ ಇರುವ ಬಗ್ಗೆ ಸಮಿತಿಗೆ ಮನವಿಯನು ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಿ ಕಿರಿಯ ನಿಲಯ ಮೇಲ್ವಿಚಾರಕ ಹುದ್ದೆಯಲ್ಲಿ ಇರುವ ಖಾಲಿ ಹುದ್ದೆಗಳಿಗೆ ಶೇಕಡ 8ರ ರಾಜ್ಯ ಮಟ್ಟದ ವೃಂದದಲ್ಲಿ ಮೀಸಲಿರಿಸಿದ ಹುದ್ದೆಗಳ ಎದುರಾಗಿ ಮುಂಬಡ್ತಿ ಮೂಲಕ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರಿಗೆ ಸೂಚನೆ ನೀಡಲಾಯಿತು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ರಾಜ್ಯ ಮಟ್ಟದ ಕಚೇರಿಗಳಲ್ಲಿ ಶೇಕಡ 8ರಷ್ಟು ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ಪಾಲಿಸಿ ಮುಂದಿನ ಸಭೆಗೆ ವರದಿ ಮಾಡಲು ಸಮಿತಿಯು

ಸೂಚಿಸಿತು.

**12. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:-**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೇರ ನೇಮಕಾತಿಯಡಿ 487 ಹುದ್ದೆಗಳು ಬಾಕಿ ಇರುವ ಬಗ್ಗೆ ಪರಿಶೀಲಿಸಿದ ಸಭೆಯು ಸದರಿ ಹುದ್ದೆಗಳನು ಭರ್ತಿ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು. ಮುಂದುವರೆದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳನು ಒಟ್ಟುಗೂಡಿಸಿ ಕಾಲಮಿತಿಯಲ್ಲಿ ಅಡ್ವಕೇಟ್ ಜನರಲ್‌ರವರೊಂದಿಗೆ ಚರ್ಚಿಸಿ ಕೂಡಲೇ ಇತ್ಯರ್ಥಪಡಿಸಲು ಅಗತ್ಯ ಕ್ರಮವಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಯಿತು.

ಕಲ್ಯಾಣ ಕರ್ನಾಟಕ ಭಾಗದ 371ಜೆ ಸ್ಥಳೀಯೇತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಇವರು ಸಮಿತಿಗೆ ಸಲ್ಲಿಸಿರುವ ಮನವಿಗಯ ಬಗ್ಗೆ ಪರಿಶೀಲಿಸಲಾಯಿತು. ಕಲ್ಯಾಣ ಕರ್ನಾಟಕ ಸ್ಥಳೀಯೇತರ ವೃಂದದ ನೌಕರರು ಮಿಕ್ಕುಳಿದ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆಗೊಳ್ಳುವುದರಿಂದ, ಸದರಿಯವರಿಗೆ ಪ್ರತ್ಯೇಕವಾಗಿ ಜೇಷ್ಠತಾ ಪಟ್ಟಿ ಸಿದ್ಧಪಡಿಸಿ ಮುಂಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ಎಂದು ಸಭೆಗೆ ಮಾಹಿತಿ ನೀಡಲಾಯಿತು. ಸದರಿ ಮಾಹಿತಿಯನ್ನು ಸಮಿತಿಯು ಪರಿಶೀಲಿಸಿತು.

**13. ಇಂಧನ ಇಲಾಖೆ:-**

ಇಂಧನ ಇಲಾಖೆಯಲ್ಲಿ 2645 ಹುದ್ದೆಗಳು ನೇಮಕಾತಿಗೆ ಬಾಕಿ ಇರುವ ಬಗ್ಗೆ ಸಭೆಯು ತೀವ್ರವಾಗಿ ಆಕ್ಷೇಪಿಸಿ ಸದರಿ ಹುದ್ದೆಗಳನು ಭರ್ತಿ ಮಾಡಲು ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿತು. ಮುಂದುವರೆದು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ 371ಜೆ ರಡಿ ಸ್ಥಳೀಯ ವೃಂದದ ಹಾಗೂ ಉಳಿಕೆ ಮೂಲ ವೃಂದದ ಜೇಷ್ಠತಾ ಪಟ್ಟಿಯನು ಪ್ರಕಟಿಸುವ ಮೊದಲೇ Non-HK ಸಹಾಯಕ ಅಭಿಯಂತರ ಹುದ್ದೆಯಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ಆದ್ದರಿಂದ ಕಲ್ಯಾಣ ಕರ್ನಾಟಕ ಭಾಗದ ಶ್ರೀ ರಾಜಕುಮಾರ್ ಹಾಗೂ ಶ್ರೀ ಗೌತಮ್‌ಶೀಲ್ ರವರಿಗೆ ಇದರಿಂದ ಅನ್ಯಾಯವಾಗಿರುವ ಬಗ್ಗೆ ಸಮಿತಿಗೆ ದೂರು ಅರ್ಜಿಯು ಸ್ವೀಕೃತಗೊಂಡಿರುವ ಬಗ್ಗೆ ಚರ್ಚಿಸಲಾಗಿ, ಸದರಿಯವರಿಗೆ ಅರ್ಹತೆ ಪಡೆದ ದಿನಾಂಕ: 26.10.2015 ರಿಂದ ಅನ್ವಯವಾಗುವಂತೆ ಹುದ್ದೆ ಖಾಲಿ ಇದ್ದುದನು ಹಾಗೂ ನೌಕರರ ಅರ್ಹತೆಯನ್ನು ಖಚಿತಪಡಿಸಿಕೊಂಡು ಕಾಲ್ಪನಿಕ ಜೇಷ್ಠತೆಯನ್ನು ನಿಗದಿಪಡಿಸಲು ಸೂಚಿಸಲಾಯಿತು.

**14. ಆರ್ಥಿಕ ಇಲಾಖೆ:-**

ಆರ್ಥಿಕ ಇಲಾಖೆಯಲ್ಲಿ ನೇರ ನೇಮಕಾತಿಯಡಿ 841 ಹುದ್ದೆಗಳು ಬಾಕಿ ಇರುತ್ತವೆ. ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಶ್ರೀ ರಂಜಿತ್ ಕುಮಾರ್, ಅಬಕಾರಿ ನಿರೀಕ್ಷಕರು, ಕಾರವಾರ ವಲಯ ಇವರು ಮೂಲತಃ ಬೀದರ್ ಜಿಲ್ಲೆಯವರಾಗಿದ್ದು, 2014 ರಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ. ಸದರಿಯವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್/06/ಪಿಎಲ್ಎಕ್/2012, ದಿನಾಂಕ: 06.11.2013ರ ಆದೇಶದ ಕಂಡಿಕೆ-2(ಬಿ) (I) ರನ್ವಯ 371ಜೆ ಮೀಸಲಾತಿಯಿಂದ ಕೈಬಿಡಲಾಗಿರುತ್ತದೆ. ಆದ್ದರಿಂದ ಸದರಿ ಅಧಿಸೂಚನೆಯ ಬಗ್ಗೆ ವಿಸ್ತೃತವಾದ ವರದಿಯನ್ನು ಸಿಆಸುಇಲಾಖೆ ಹಾಗೂ ಅಬಕಾರಿ ಇಲಾಖೆ ಮುಂದಿನ ಸಭೆಗೆ ಮಂಡಿಸಲು ಸಮಿತಿಯು ಸೂಚಿಸಿತು.

<u>*(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಮತ್ತು ಸರ್ಕಾರದ ಕಾರ್ಯದರ್ಶಿ, ಸಿಆಸುಇಲಾಖೆ)*</u>

**15. ಕೃಷಿ ಇಲಾಖೆ:-**

ಕೃಷಿ ಇಲಾಖೆಯಿಂದ ಯಾವುದೇ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವ ಬಗ್ಗೆ ವಿವರಣೆ ಪಡೆಯಲು ಸೂಚಿಸಲಾಯಿತು.

<u>*(ಕ್ರಮ: ಕಾರ್ಯದರ್ಶಿ, ಯೋಜನಾ ಇಲಾಖೆ)*</u>

**16. ಕಂದಾಯ ಇಲಾಖೆ:-**

ಕಂದಾಯ ಇಲಾಖೆಯಿಂದ ಯಾವುದೇ ಅಧಿಕಾರಿಗಳು ಸಭೆಗೆ ಹಾಜರಾಗದೇ ಇರುವ ಬಗ್ಗೆ ವಿವರಣೆ ಪಡೆಯಲು ಸೂಚಿಸಲಾಯಿತು.

*(ಕ್ರಮ: ಕಾರ್ಯದರ್ಶಿ, ಯೋಜನಾ ಇಲಾಖೆ)*

**ಸಭೆಯಲ್ಲಿ ಕೈಗೊಂಡ ಇತರ ನಿರ್ಣಯಗಳು:-**

a. ಎಲ್ಲಾ ಇಲಾಖೆಗಳು ನೇರ ನೇಮಕಾತಿ ಮತ್ತು ಮುಂಬಡ್ತಿಯಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ/02/ಬಿಇಎಂ/2021 ದಿನಾಂಕ: 24.11.2021ರಲ್ಲಿ ಹಾಗೂ ದಿನಾಂಕ: 06.09.2022ರ ಸ್ಪಷ್ಟೀಕರಣದಲ್ಲಿ ತಿಳಿಸಿರುವಂತೆ ಖಾಲಿ ಇರುವ ಹುದ್ದೆಗಳನ್ನು ಶೇಕಡ 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸಿತು. (ಖಾಲಿ ಹುದ್ದೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ).

b. ನಿಗದಿತ ಸಮಯದಲ್ಲಿ ಸಚಿವ ಸಂಪುಟದ ಉಪಸಮಿತಿಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸಿ ಅನುಪಾಲನಾ ವರದಿಯನ್ನು ಕಡ್ಡಾಯವಾಗಿ ಎಲ್ಲಾ ಇಲಾಖಾ ಕಾರ್ಯದರ್ಶಿಗಳು ವೈಯಕ್ತಿಕವಾಗಿ ಗಮನಹರಿಸಿ ಸಲ್ಲಿಸುವುದು.

c. ಇಲಾಖೆಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಖಾಲಿ ಹುದ್ದೆಗಳು ಭರ್ತಿ ಯಾಗಿರುವ ಬಗ್ಗೆ ಪ್ರತಿ ಮಾಹೆ ಕಡ್ಡಾಯವಾಗಿ ಗೂಗಲ್‌ಶೀಟ್‌ನಲ್ಲಿ ಅಪ್‌ಲೋಡ್ ಮಾಡಲು ಎಲ್ಲಾ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

d. ಡಿಸೆಂಬರ್-2025ರ ಅಂತ್ಯಕ್ಕೆ ನೇರ ನೇಮಕಾತಿಯಲ್ಲಿ ಖಾಲಿ ಇರುವ ಶೇಕಡ 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಅಧಿಸೂಚನೆಯನ್ನು ಹೊರಡಿಸುವುದು.

e. ಸಚಿವ ಸಂಪುಟ ಉಪಸಮಿತಿಗೆ ಸ್ವೀಕೃತವಾದ ವಿವಿಧ ಇಲಾಖೆಯ ಅಧಿಕಾರಿ/ನೌಕರರ ಮನವಿ/ದೂರುಗಳನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಲಾಗುತ್ತಿದ್ದು, ಆದ್ಯತೆಯ ಮೇಲೆ ಕಾರ್ಯದರ್ಶಿಗಳು ತಗತ್ಯ ಕ್ರಮ ಕೈಗೊಂಡು ಸಚಿವ ಸಂಪುಟ ಉಪ ಸಮಿತಿಗೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವುದು.

f. ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಪ್ರಕ್ರಿಯೆ ಬಾಕಿ ಇರುವ ಇಲಾಖೆಗಳು, ತ್ವರಿತವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು 371ಜೆ ರಡಿ ಹುದ್ದೆಗಳನ್ನು ಕಡ್ಡಾಯವಾಗಿ ಗುರುತಿಸುವುದು ಹಾಗೂ ಆರ್ಥಿಕ ಇಲಾಖೆಯ ಆದೇಶದಂತೆ ನೇಮಕಾತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

*(ಕ್ರಮ: ಎಲ್ಲಾ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು)*

**::ನಿರ್ದೇಶಕರು, ಪ್ರದೇಶಾಭಿವೃದ್ಧಿ ಮಂಡಳಿ, ಯೋಜನಾ ಇಲಾಖೆರವರ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು::**

**ಪಿಡಿಎಸ್ 101 ಹೆಚ್ ಕೆಡಿ 2023(ಭಾಗ-2)**

1.

(ಪ್ರಿಯಾಂಕ್ ಖರ್ಗೆ)
ಅಧ್ಯಕ್ಷರು,
ಸಚಿವ ಸಂಪುಟದ ಉಪಸಮಿತಿ (371ಜೆ)
ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್‌ರಾಜ್ ಹಾಗೂ ಐ.ಟಿ.ಬಿ.ಟಿ
ಸಚಿವರು.